ಫೆಬ್ರವರಿ 9,1999
ರಾಜ್ಯಾದ್ಯಂತ ಪ್ರತಿಭಟನೆ

ಬೆಲೆಯೇರಿಕೆ ಹಿಂತೆಗೆದುಕೊಳ್ಳಬೇಕು
ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು

ವಿಶೇಷ ಲೇಖನ ಪುಟ 5

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 6 ಫೆಬ್ರವರಿ 1-7, 1999 ರೂ. 2.00

ಜನರನ್ನು ಸುಲಿದು ಬಜೆಟ್ ಕೊರತೆ ನೀಗಿಸುವ ದುಷ್ಟ ಪ್ರಯತ್ನ

ಪಡಿತರ ಅಕ್ಕಿ, ಗೋಧಿ, ಸಕ್ಕರೆ ಬೆಲೆ ಏರಿಕೆಯನ್ನು ಪ್ರತಿಭಟಿಸಲು ಸಿಪಿಐ(ಎಂ) ಕರೆ

ಜನವರಿ 28 ರಂದು ವಾಜಪೇಯಿ ಸರಕಾರ ದೇಶದ ಜನಸಾಮಾನ್ಯರಿಗೆ ಮತ್ತೊಂದು ಆಘಾತ ನೀಡಿದೆ. ಪಡಿತರ ವ್ಯವಸ್ಥೆಯಲ್ಲಿ ಹಂಚುವ ಅಕ್ಕಿ , ಗೋಧಿ, ಸಕ್ಕರೆ ಬೆಲೆಗಳನ್ನು ಯೂರಿಯಾ ಬೆಲೆಗಳನ್ನು ತೀವ್ರವಾಗಿ ಏರಿಸಿದೆ. ಬಡತನದ ರೇಖೆಯ ಕೆಳಗೆ ಇರುವವರಿಗೆ ಅಕ್ಕಿ ಬೆಲೆಯನ್ನು 3.50 ರೂ ನಿಂದ 4.45 ರೂ ಗೆ ಏರಿಸಿದೆ. ಗೋಧಿ ಬೆಲೆಯನ್ನು 2.50 ರೂ.ನಿಂದ 3.25 ರೂ. ಗೇರಿಸಿದೆ. ಬಡತನದ ರೇಖೆಯ ಮೇಲಿರುವವರಿಗೆ ಅಕ್ಕಿ ಬೆಲೆಯನ್ನು 5.50 ರಿಂದ 9.05 ಗೇರಿಸಲಾಗಿದೆ. ಗೋಧಿ ಬೆಲೆಯನ್ನು 4.50 ರೂ.ನಿಂದ 6.50 ರೂ. ಗೇರಿಸಲಾಗಿದೆ. ಸಕ್ಕರೆ ಬೆಲೆಯನ್ನು 12 ರೂ. ಮಾಡಲಾಗಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

ಇದು ತಕ್ಷಣವೇ ಬಹಿರಂಗ ಮಾರುಕಟ್ಟೆಯಲ್ಲಿಯೂ ಈ ಸರಕುಗಳ ಬೆಲೆಗಳ ಮೇಲೆ ಪ್ರಭಾವ ಬೀರಿ ಉಳಿದೆಲ್ಲಾ ಅಗತ್ಯ ಸಾಮಗ್ರಿಗಳ ಬೆಲೆಗಳನ್ನು ಏರಿಸುತ್ತದೆ ಎಂದು ಅದು ಹೇಳಿದೆ.

ಯೂರಿಯಾದ ಬೆಲೆಯನ್ನು ಚೀಲಕ್ಕೆ 17 ರೂ.ನಂತೆ ಏರಿಸಲಾಗಿದೆ. ಹಿಂದಿನ ಬಜೆಟ್ಟಿನಲ್ಲಿ ಏರಿಸಿದ ಬೆಲೆಯನ್ನು ಕಡಿಮೆ ಮಾಡಬೇಕಾಗಿ ಬಂದಿತ್ತು. ಆಗ ಮಾಡಲಾಗದ್ದನ್ನು ಈಗ ಕಳ್ಳತನದಿಂದ ಈ ಸರಕಾರ ಮಾಡಿದೆ ಎಂದು ಪೊಲಿಟ್‌ಬ್ಯೂರೋ ಟೀಕಿಸಿದೆ.

ಈ ವರ್ಷದ ಬಜೆಟ್ಟಿನ ಮೊದಲು ಭಾರೀ ಹಣಕಾಸು ಕೊರತೆಯನ್ನು ಕಮ್ಮಿ ಮಾಡುವ ಹತಾಶ ಪ್ರಯತ್ನದಲ್ಲಿರುವ ಬಿಜೆಪಿ ನೇತೃತ್ವದ ಸರಕಾರ ಈ ಕ್ರಮಕ್ಕೆ ಮೊರೆ ಹೋಗಿದೆ. ಈ ಮೂಲಕ ಈ ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳಿಂದ ಆಗಲೇ ಅಭೂತಪೂರ್ವ ಹೊರೆಗಳಿಂದ ನರಳುತ್ತಿರುವ ಜನ ಸಾಮಾನ್ಯರನ್ನು ಸುಲಿದು ಸಂಪನ್ಮೂಲ ಸಂಗ್ರಹಿಸುವ ಮಟ್ಟಕ್ಕೆ ಇಳಿದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಇದನ್ನು ಬಲವಾಗಿ ವಿರೋಧಿಸಲು ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಅದು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಸರಕಾರಕ್ಕೆ 5000 ಕೋಟಿ ರೂ. ಸಂಪನ್ಮೂಲ
ದಟ್ಟದರಿದ್ರರಿಗೆ ಉಪವಾಸ - ವನವಾಸ

ಆಹಾರ ಧಾನ್ಯಗಳ ಬೆಲೆಯೇರಿಸಿ ವಾಜಪೇಯಿ ಸರಕಾರ ದೇಶದ ಬಡಜನರ ಮೇಲೆ 5000 ಕೋಟಿ ರೂ.ಗಳ ಹೊರೆ ಹೇರಿದೆ ಎಂದು ಈ ಕ್ರಮವನ್ನು ಬಲವಾಗಿ ಖಂಡಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ದೇಶಾದ್ಯಂತ ಇದರ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ಹಮ್ಮಿಕೊಂಡಿದೆ. ಈ ಏರಿಕೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಪಡಿಸಿದೆ.

ಬಿಜೆಪಿ ಸರಕಾರ ಈ ಬೆಲೆಯೇರಿಕೆ ದಟ್ಟದರಿದ್ರರನ್ನೂ ಬಿಟ್ಟಿಲ್ಲ. ಅಕ್ಕಿ ಮತ್ತು ಗೋಧಿಗೆ ಅವರೀಗ 30% ಹೆಚ್ಚು ತೆರಬೇಕಾಗಿದೆ. ಇದರರ್ಥ ಕೋಟ್ಯಾಂತರ ದಲಿತ, ಆದಿವಾಸಿ ಹಾಗೂ ಮಹಿಳೆಯರು ಮುಖ್ಯಸ್ಥರಾಗಿರುವ ಕುಟುಂಬಗಳಿಗೆ ಉಪವಾಸವಲ್ಲದೆ ಬೇರೇನೂ ಅಲ್ಲ ಎಂದಿರುವ ಮಹಿಳಾ ಸಂಘಟನೆ ಕೊನೆಗೆ ಮತ್ತು ಅತಿಕಮ್ಮಿ ಆಹಾರ ತಿನ್ನುವ ಮಹಿಳೆಯರನ್ನು ಈ ಬೆಲೆಯೇರಿಕೆ ಎಲ್ಲರಿಗಿಂತಲೂ ಹೆಚ್ಚು ತಟ್ಟುತ್ತದೆ ಎಂದಿದೆ. ಶ್ರೀಮಂತರಿಂದ ಸಂಪನ್ಮೂಲಗಳನ್ನು ಶೇಖರಿಸುವ ಬದಲು ಈ ಸರಕಾರ ಬಡವರಿಗೇ ಮತ್ತಷ್ಟು ಶಿಕ್ಷೆ ನೀಡುತ್ತದೆ ಎಂದು ಅದು ಕಟುವಾಗಿ ಟೀಕಿಸಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಬಡವರು ತುಸುವಾದರೂ ತಿನ್ನಲು ಸಾಧ್ಯವಾಗುವಂತೆ ಮಾಡುವ ಬದಲು (ಪುಟ 5 ರ ಲೇಖನ ನೋಡಿ) ಈ ಸರಕಾರ ತದ್ವಿರುದ್ಧವಾದದ್ದನ್ನೇ ಮಾಡಿದೆ ಎಂದು ಅದು ಖಂಡಿಸಿದೆ.

ವಾಜಪೇಯಿ ಸರಕಾರದ ಮಿತ್ರ ಪಕ್ಷಗಳಿಗೂ ಸರಕಾರದ ಈ ಕ್ರಮವನ್ನು ಯಾವ ರೀತಿಯಲ್ಲೂ ಸಮರ್ಥಿಸಲು ಸಾಧ್ಯವಾಗದೆ ಅವೂ ದೇಶವ್ಯಾಪಿ ವಿರೋಧದಲ್ಲಿ ಶಾಮೀಲಾಗುತ್ತಿವೆ.

ಈ ಹಿನ್ನೆಲೆಯಲ್ಲಿ ಫೆಬ್ರವರಿ 9 ರಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಈಗಾಗಲೇ ಸಿಪಿಐ(ಎಂ) ರಾಜ್ಯ ಸಮಿತಿ ನೀಡಿರುವ ಕರೆಗೆ ಹೆಚ್ಚಿನ ಮಹತ್ವ ಬಂದಿದೆ. ವಾಜಪೇಯಿ ಸರಕಾರದಿಂದ ತಮ್ಮ ಸಂಕಟಗಳಿಗೆ ಪರಿಹಾರದ ಯಾವುದೇ ಭರವಸೆಯನ್ನು ಜನತೆ ಇಟ್ಟುಕೊಳ್ಳುವಂತಿಲ್ಲ ಎಂಬ ಸಿಪಿಐ(ಎಂ)ನ ಟೀಕೆ ನಿಜವಾಗಿದೆ. ○

ದ್ವೇಷದ ಕಿಚ್ಚು ಹಚ್ಚಿ ತುಪ್ಪವನ್ನೂ ಸುರಿದು ಉಪವಾಸ ಮಾಡಿದೊಡೆಂತಯ್ಯಾ?

ಜನವರಿ 23ರ ನಸುಕಿನಲ್ಲಿ ಒರಿಸ್ಸಾದ ಕಿಯೊಂಜಾರ್ ಜಿಲ್ಲೆಯ ಮನೋಹರಪುರದಲ್ಲಿ ಆಸ್ಟ್ರೇಲಿಯನ್ ಧರ್ಮಪ್ರಚಾರಕ ಹಾಗೂ ಅವರ ಇಬ್ಬರು ಚಿಕ್ಕ ಮಕ್ಕಳನ್ನು ಜೀವಂತ ಸುಟ್ಟುಹಾಕಿದ ಘಟನೆ ಇಡೀ ದೇಶವನ್ನು ತಲ್ಲಣಗೊಳಿಸಿದೆ. "*ಈ ಅಮಾನುಷ ಕೃತ್ಯ ಒರಿಸ್ಸಾದ ಆದಿವಾಸಿ ಪ್ರದೇಶಗಳಲ್ಲಿ ಕ್ರೈಸ್ತರ ವಿರುದ್ಧ ವ್ಯವಸ್ಥಿತವಾಗಿ ಹರಡಿಸಿರುವ ದ್ವೇಷ ಪ್ರಚಾರದ ನೇರ ದುಷ್ಫಲ*" ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಬಲವಾಗಿ ಖಂಡಿಸಿದೆ. "*ಇದು ಇದ್ದಕ್ಕಿದ್ದಂತೆ ನಡೆದ ಘಟನೆಯೇನಲ್ಲ.ಡಿಸೆಂಬರ್ 1998ರ ಮೊದಲ ವಾರದಲ್ಲಿ ವಿ.ಹೆಚ್.ಪಿ.-ಆರ್. ಎಸ್. ಎಸ್. ನೇತೃತ್ವದ ಗುಂಪೊಂದು ಗಜಪತಿ ಜಿಲ್ಲೆಯ ಉಪ ಜೈಲಿಗೆ ನುಗ್ಗಿ ಇಬ್ಬರು ವಿಚಾರಣಾಧೀನ ಕ್ರೈಸ್ತ ಬಂಧಿಗಳನ್ನು ಕೊಚ್ಚಿ ಹಾಕಿದ್ದರು.ಇದರ ನಂತರ ಸುತ್ತಲಿನ ಕ್ರೈಸ್ತ ಕೋಮಿನ ಜನರ ಮನೆಗಳನ್ನು ಧ್ವಂಸ ಮಾಡಲಾಗಿತ್ತು*" ಎಂದು ಸಿಪಿಐ(ಎಂ) ನೆನಪಿಸಿದೆ.

"*ವಾಜಪೇಯಿ ಸರಕಾರ ಗುಜರಾತ, ಒರಿಸ್ಸಾ ಮತ್ತಿತರ ಕಡೆಗಳಲ್ಲಿ ನಡೆಯುತ್ತಿರುವ ಈ ಎಲ್ಲಾ ಘಟನೆಗಳು ಅಲ್ಲೊಂದು ಇಲ್ಲೊಂದು ನಡೆದ ಆಕಸ್ಮಿಕ ಘಟನೆಗಳೆಂದು ನಟನೆ ಮಾಡಲು ಸಾಧ್ಯವಿಲ್ಲ. ಇಬ್ಬರು ಮುಗ್ಧ ಮಕ್ಕಳ ಬರ್ಬರ ಕೊಲೆಯ ನಂತರ ತಾವು ಕ್ರೈಸ್ತ ಕೋಮಿನ ವಿರುದ್ಧ ಹರಿಯಬಿಟ್ಟಿರುವ ದ್ವೇಷಪ್ರಚಾರದ ಭೀಕರ ಪರಿಣಾಮಗಳೇನು ಎಂದು ಈಗಲಾದರೂ ಅವರು ಅರ್ಥಮಾಡಿಕೊಳ್ಳಬೇಕು*" ಎಂದು ಸಿಪಿಐ(ಎಂ) ಹೇಳಿದೆ.

ಈ ಭೀಕರ ಘಟನೆಗೆ ಕಾರಣರಾದ ಎಲ್ಲಾ ಕೊಲೆಗಡುಕರನ್ನು ಬಂಧಿಸುವುದು ಅಗತ್ಯವಾದರೂ ಅಷ್ಟೇ ಸಾಲದು, ಆದಿವಾಸಿ ಪ್ರದೇಶದಲ್ಲಿ ವಿವಿಧ ಹೆಸರುಗಳಲ್ಲಿ ಕೆಲಸಮಾಡುತ್ತಿರುವ ಆರ್.ಎಸ್.ಎಸ್. ಸಂಘಟನೆಗಳನ್ನು ರಾಜ್ಯ ಸರಕಾರ ನಿಷೇಧಿಸಬೇಕು; ಕ್ರೈಸ್ತರ ವಿರುದ್ಧ ಉದ್ರೇಕಕಾರಿ ಅಪಪ್ರಚಾರ ನಡೆಸುತ್ತಿರುವ ಸಂಘಟನೆಗಳ ಮುಖಂಡರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬೆದರಿಕೆಗಳಿಗೊಳಗಾಗಿರುವ ಎಲ್ಲಾ ಕ್ರೈಸ್ತ ಪಾದ್ರಿಗಳು ಹಾಗೂ ಜನಗಳಿಗೆ ಪೂರ್ಣ ರಕ್ಷಣೆ ಒದಗಿಸಬೇಕು ಎಂದು ಜನವರಿ 24 ರಂದು ನೀಡಿದ ಹೇಳಿಕೆಯಲ್ಲಿ ಒತ್ತಾಯಿಸಿತ್ತು.

'ಇದು ಜಗತ್ತಿನ ಕರಾಳ ಕೃತ್ಯಗಳ ಪಟ್ಟಿಗೆ ಸೇರುವ ಬರ್ಬರ ಕೃತ್ಯ. ನಮ್ಮ ಸಹಿಷ್ಣುತೆಯ ಪರಂಪರೆಗೊಂದು ಶಾಶ್ವತ ಕಳಂಕ' ಎಂದು ರಾಷ್ಟ್ರಪತಿಗಳು ತಮ್ಮ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ.

ಚಾರ್ಜ್‌ಶೀಟ್ ಆದವರ ಸರ್ಟಿಫಿಕೇಟ್

ಈ ಜಘನ್ಯ ಕೃತ್ಯಕ್ಕೆ ಸಂಘಪರಿವಾರದ ಭಜರಂಗದಳ ಹೊಣೆ ಎಂದು ಹೆಚ್ಚಿನ ವರದಿಗಳು ತಿಳಿಸಿದರೂ, ಒರಿಸ್ಸಾ ಪೋಲೀಸರು ಪ್ರಾಥಮಿಕ ತನಿಖೆಗಳಿಂದ ಹೀಗೊಂದು ವರದಿ ಮಾಡಿದ್ದರೂ, ಬಿಜೆಪಿಯ ಮಿತ್ರ ಪಕ್ಷಗಳಾದ ತೃಣಮೂಲ ಮತ್ತು ತೆಲುಗುದೇಶಂ ಮುಖಂಡರು ಮಾತ್ರವಲ್ಲ, ಸ್ವತಃ ಬಿಜೆಪಿ ಮುಖಂಡರು ಕೆಲವರು ಕೂಡಾ ಇದು ತಲೆಕೆಟ್ಟ ಹುಸಿ-ಹಿಂದುತ್ವವಾದಿಗಳ ಕೆಲಸ, ಇದರಿಂದ ಸರಕಾರದ ಪ್ರತಿಷ್ಠೆಗೆ ಕಳಂಕ ಬಂದಿದೆ ಎಂದರೂ ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರು ಭಜರಂಗ ದಳ ಈ ಕೃತ್ಯ ಎಸಗಿಲ್ಲ ಎಂದಿರುವುದು "*ಭಜರಂಗ ದಳದಂತಹ ಸಂಘಟನೆಗಳಿಗೆ ಕ್ರಿಮಿನಲ್ ಸ್ವರೂಪ ಇಲ್ಲ ಎಂದು ಸಾರ್ವಜನಿಕವಾಗಿ ಹೇಳಿರುವುದು ಗೃಹಮಂತ್ರಿಯ ತನ್ನ ಹುದ್ದೆಯ ದುರುಪಯೋಗ*" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಜನವರಿ 26 ರಂದು ನೀಡಿದ ಇನ್ನೊಂದು ಹೇಳಿಕೆಯಲ್ಲಿ ಖಂಡಿಸಿದೆ. "*ಎಲ್.ಕೆ.ಅಡ್ವಾಣಿಯಿಂದ ಇಂತಹ ಹೇಳಿಕೆ ಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ, ಏಕೆಂದರೆ ಅವರೇ ಸ್ವತಃ ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪ ಪಟ್ಟಿಗೊಳಗಾದವರು ಎಂದು ನೆನಪಿಸಿರುವ* ಸಿಪಿಐ(ಎಂ) ಪೊಲಿಟ್‌ಬ್ಯೂರೋ *ಇಂತಹ ಒಬ್ಬ ವ್ಯಕ್ತಿ ಗೃಹ ಇಲಾಖೆಯ ಮುಖ್ಯಸ್ಥನಾಗಿರುವಾಗ ಕೋಮು ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ ಎಲ್ಲಾ ಆರ್.ಎಸ್.ಎಸ್. ಸಂಘಟನೆಗಳಿಗೆ ರಕ್ಷಣೆ ದೊರೆಯುತ್ತದೆ. ಇದರಿಂದ ಅಲ್ಪಸಂಖ್ಯಾತರಿಗೆ ನ್ಯಾಯ ಸಿಗುವುದಿಲ್ಲ*" ಎಂದು ಹೇಳಿದೆ.

"*ಒರಿಸ್ಸಾ, ಗುಜರಾತ್, ಕರ್ನಾಟಕ ಮುಂತಾದೆಡೆ ಭಜರಂಗ ದಳದ ಕ್ರಿಮಿನಲ್ ಕೃತ್ಯಗಳು ಜಗಜ್ಜಾಹೀರಾಗಿರುವಾಗ ಆ ಸಂಘಟನೆಯ ಮೇಲೆ ಕ್ರಿಮಿನಲ್ ದಾಖಲೆಗಳೇ ಇಲ್ಲವೆನ್ನುವುದು ಭಜರಂಗದಳದ ಕೃತ್ಯಗಳು ಬಿಜೆಪಿ ಹಾಗೂ 'ಸಂಘ' ಪರಿವಾರದಿಂದ ನಿರ್ದೇಶಿತವಾಗಿರುವಂತವುಗಳು ಎಂಬುದಕ್ಕೆ ನಿದರ್ಶನ*" ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹೇಳಿದೆ.

ನ್ಯಾಯಾಂಗ ತನಿಖೆಯ ನಾಟಕ

ಗೃಹಮಂತ್ರಿಗಳು ದುಷ್ಕೃತ್ಯ ನಡೆದ ಸ್ಥಳಕ್ಕೆ ಹೋಗದೆಯೇ ಹೇಳಿಕೆ ನೀಡಿದ ನಂತರ ಮೂವರು ಕೇಂದ್ರ ಮಂತ್ರಿಗಳ ತಂಡ ಒಂದು ಗಂಟೆ ಭೇಟಿ ನೀಡಿ ಇದರಲ್ಲಿ ಯಾವುದೇ ಸಂಘಟನೆ ಇಲ್ಲ, ಕೇಂದ್ರ ಸರ್ಕಾರದ ವಿರುದ್ಧ ಪಿತೂರಿಯ ಭಾಗ ಇದು ಎಂದು ಸಾರಿದೆ. ಆದರೆ ಅದರ ಬೆನ್ನ ಹಿಂದೆಯೇ ಕೇಂದ್ರ ಸರ್ಕಾರ ನ್ಯಾಯಾಂಗ ತನಿಖೆ ನಡೆಸುವುದಾಗಿ ಹೇಳಿದೆ.

"*ಆ ಕೊಲೆ ನಡೆಸಿದವರಲ್ಲಿ ಹೆಚ್ಚಿನವರನ್ನು ಆಗಲೇ ಗುರುತಿಸಿರುವಾಗ ಅವರನ್ನು ತಕ್ಷಣ ಬಂಧಿಸಿ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದನ್ನು ಬಿಟ್ಟು ಕೇಂದ್ರ ಸಂಪುಟ ನ್ಯಾಯಾಂಗ ತನಿಖೆ ನಡೆಸಿ ಎರಡು ತಿಂಗಳ ದೀರ್ಘ ಅವಧಿಯನ್ನು ನಿಗದಿ ಮಾಡಿದೆ. ಈ ವಿಳಂಬ ಈ ಕಗ್ಗೊಲೆ ಹಾಗೂ ಅದಕ್ಕೆ ಎಲ್ಲೆಡೆಯಿಂದ ಬಂದಿರುವ ಖಂಡನೆಯ ಪ್ರತಿಕೂಲ ಪರಿಣಾಮವನ್ನು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡಬಹುದು ಎಂದು ವಾಜಪೇಯಿ ಸರಕಾರ*

ಪುಟ 2 ನೋಡಿ

ಬಿಹಾರದಲ್ಲಿ ಮತ್ತೆ ಭೂಮಾಲಕರ ಸೇನೆಯ ಅಟ್ಟಹಾಸ

ಗಣತಂತ್ರ ದಿನಾಚರಣೆಯ ಹಿಂದಿನ ದಿನವೇ ಬಿಹಾರದ ಜಹಾನಾಬಾದ್ ಜಿಲ್ಲೆಯ ರುಕ್ನಾರ್ ಬಿಘಾ ಹಳ್ಳಿಯಲ್ಲಿ ಭೂಮಾಲಕರ ರಣಬೀರ್ ಸೇನಾದ ಪಾತಕಿಗಳು ನಡೆಸಿದ ಹತ್ಯಾಕಾಂಡವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಮುಗ್ಧ ಹಸುಳೆಗಳೂ,ಮಹಿಳೆಯರೂ ಸೇರಿದಂತೆ 22 ದಲಿತರನ್ನು ತಮ್ಮ ಹಕ್ಕುಗಳಿಗಾಗಿ ಎದ್ದು ನಿಂತ ಗ್ರಾಮೀಣ ಬಡವರನ್ನು,ಭೂಹೀನರನ್ನು ಬೆದರಿಸುವ ಈ ದುಷ್ಟರು ಕಗ್ಗೊಲೆ ಮಾಡಿದ್ದಾರೆ ಎಂದು ಅದು ಖಂಡಿಸಿದೆ.

ಪುಟ 8 ನೋಡಿ

ಭಾರತ ವಿದ್ಯಾರ್ಥಿ ಫೆಡರೇಷನ್(SFI)ನ 8ನೇ ಕರ್ನಾಟಕ ರಾಜ್ಯ ಸಮ್ಮೇಳನ ಜನವರಿ 28 ರಂದು ಶಿರಸಿಯಲ್ಲಿ ಆರಂಭವಾಯಿತು. ಉದ್ಘಾಟನಾ ಸಮಾರಂಭಕ್ಕೆ ಮುಂಚೆ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದ ಮೆರವಣಿಗೆಯ ಶಿರಸಿ ನಾಗರೀಕರ ಗಮನ ಸೆಳೆಯಿತು. ಉದ್ಘಾಟನಾ ಸಮಾರಂಭದ ವರದಿಗೆ ಪುಟ 8 ನೋಡಿ.



ಸಮುದ್ರಕ್ಕೆ ತಳ್ಳಿ ರಕ್ಷಣೆಯ ಮಾತನಾಡುವವರು

ಇನ್ನೆರಡು ತಿಂಗಳು ಬಜೆಟ್ ಸಮಯ. ಕೇಂದ್ರದ ಹಣಕಾಸು ಮಂತ್ರಿಗಳಾದ ಸಿನ್ಹಾ ಅವರು ದೇಶೀ ಉದ್ದಿಮೆಗಳಿಗೆ ರಕ್ಷಣೆ ನೀಡುವ ಮಾತನ್ನು ಆಡಿದ್ದಾರೆ. ಕೇಂದ್ರದ ಬಿಜೆಪಿ ಸರ್ಕಾರ ಉದಾರೀಕರಣ ಮಾಡುತ್ತಿರುವ ರೀತಿ ನೋಡಿದರೆ ಈ ಮಾತು ನಗೆ ತರಿಸುತ್ತಿದೆ. ಉದಾರೀಕರಣದ ಕ್ರಮಗಳಿಂದ ದೇಶೀ ಉದ್ದಿಮೆಗಳು ನರಳುವಂತಾಗಿರುವಾಗ ಅವುಗಳಿಗೆ ರಕ್ಷಣೆ ನೀಡುತ್ತಿವೆ ಎಂದರೆ ಆ ಮಾತಿಗೆ ಅರ್ಥವೇನಿರುತ್ತದೆ?

ದೇಶೀ ಉದ್ದಿಮೆಗಳು ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಯನ್ನು ತಡೆದು ಕೊಳ್ಳುವ ಸಾಮರ್ಥ್ಯ ಪಡೆದು ಕೊಳ್ಳುವವರೆಗೆ ಅವುಗಳಿಗೆ ರಕ್ಷಣೆ ದೊರೆಯಬೇಕು ಎಂಬ ಮಾತುಗಳನ್ನು ಅವರು ಆಡಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆಯೇ ಆಮದು ಉದಾರೀಕರಣದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಈಗ ಹಲವು ವಸ್ತುಗಳ ಮೇಲೆ ಆಮದು ಸುಂಕವೇ ಇಲ್ಲವಾದ್ದರಿಂದ ದೇಶೀ ಉದ್ದಿಮೆಗಳು ತಡೆದುಕೊಳ್ಳಲಾರದ ಸ್ಪರ್ಧೆಯನ್ನು ಎದುರಿಸುತ್ತಿವೆ.

ಎಲ್ಲ ವಸ್ತುಗಳ ಮೇಲೆ ಕನಿಷ್ಠ ಪ್ರಮಾಣದ ಆಮದು ಸುಂಕವನ್ನು ಹೇರುತ್ತೇವೆ ಎಂದು ಕೇಂದ್ರದ ಹಣಕಾಸು ಮಂತ್ರಿ ಹೇಳಿದ್ದಾರೆ. ಆ ಮೂಲಕ ಕೇಂದ್ರ ಸರ್ಕಾರದ ಆದಾಯವನ್ನು ಹೆಚ್ಚಿಸಿ ಕೊಳ್ಳುವ ಮಾತನ್ನು ಅವರು ಆಡಿದ್ದಾರೆ.

ದೇಶೀ ಉದ್ದಿಮೆಗಳನ್ನು ಹಾಳುಗೆಡವಿ ಸ್ವಾವಲಂಬನೆಯನ್ನು ತೀವ್ರವಾಗಿ ಕಡಿಮೆ ಮಾಡುವ ಎಲ್ಲ ಕ್ರಮಗಳನ್ನು ಕೈಗೊಂಡು ಈಗ ಮೊಸಳೆ ಕಣ್ಣೀರು ಸುರಿಸುತ್ತ ದೇಶೀ ಉದ್ದಿಮೆಗಳು ರಕ್ಷಣೆಯ ಮಾತನ್ನಾಡುತ್ತಿರುವುದು ಹಾಸ್ಯಾಸ್ಪದವಲ್ಲವೆ?

ಯುರೋಪಿನ ದೇಶಗಳ ನಿರ್ಬಂಧಗಳು

ಯುರೋಪಿನ ದೇಶಗಳು ಭಾರತ ದೊಂದಿಗಿನ ವ್ಯವಹಾರಗಳ ಮೇಲೆ ಹಲವು ನಿರ್ಬಂಧಗಳನ್ನು ಹೇರುತ್ತಲೇ ಬಂದಿವೆ. ತಮಗೆ ಲಾಭವಾಗುವಾಗ ಮಾತ್ರ ನಿರ್ಬಂಧಗಳನ್ನು ತೆಗೆದು ಭಾರತಕ್ಕೆ ಲಾಭವಾಗುವುದಾದರೆ ನಿರ್ಬಂಧಗಳನ್ನು ಹೇರುವುದು ಈ ದೇಶಗಳ ಪದ್ಧತಿ ಯಾಗಿದೆ. ಆದ್ದರಿಂದಲೇ ದಿನಕ್ಕೊಂದು ರೀತಿಯ ನಿರ್ಬಂಧಗಳ ಸುದ್ದಿ ಬರುತ್ತಲೇ ಇದೆ.

ಈಗ ಯುರೋಪಿನ ಕಮಿಷನ್ ಭಾರತದ ಮಾಹಿತಿ ತಂತ್ರಜ್ಞರಿಗೆ ವೀಸಾ ನೀಡುವ ಬಗ್ಗೆ ನಿರ್ಬಂಧಗಳನ್ನು ಹೇರಿದೆ. ಡಂಪಿಂಗ್ ವಿರೋಧಿ ಸಹಾಯಧನ ವಿರೋಧ ಕ್ರಮಗಳನ್ನು ಈ ದೇಶಗಳು ಹೇರುತ್ತಲೇ ಬಂದಿವೆ.

ಭಾರತಕ್ಕೆ ಕೃಷಿ ಮತ್ತು ಸಮುದ್ರ ಉತ್ಪನ್ನಗಳ ಮಾರುಕಟ್ಟೆಯ ಲಭ್ಯತೆ ಇಲ್ಲವಾಗಿದೆ. ಜವಳಿ ಕ್ಷೇತ್ರದಲ್ಲಿಯೂ ಇಂತಹದೇ ಸಮಸ್ಯೆಯಿದೆ.

ಭಾರತ ಸರ್ಕಾರ ಈ ವಿಷಯದಲ್ಲಿ ಯುರೋಪಿನ ಕಮಿಷನ್‌ಗೆ ತನ್ನ ಪ್ರತಿಭಟನೆಯನ್ನೇನೊ ಸಲ್ಲಿಸಿದೆ. ಆದರೆ ಈ ಪ್ರತಿಭಟನೆ ಒಂದು ಸಮಗ್ರ ದೇಶ ಹಿತ ಕ್ರಮಗಳಭಾಗವಲ್ಲ. ಯಾಕೆಂದರೆ ಉದಾರೀಕರಣದ ಹೆಸರಿನಲ್ಲಿ ಅಂತರಾಷ್ಟ್ರೀಯ ವೇದಿಕೆಗಳಲ್ಲಿ ದೇಶಕ್ಕಾಗಿ ಚೌಕಾಸಿ ಮಾಡುವ ಕಾರ್ಯವನ್ನೇ ಭಾರತ ಬಿಟ್ಟು ಕೊಟ್ಟಿದೆ. ಅದ್ದರಿಂದ ಆಗೊಮ್ಮೆ ಈಗೊಮ್ಮೆ ತೋರುವ ಮಾತಿನ ಪ್ರತಿಭಟನೆ ದೇಶಕ್ಕೆ ಯಾವುದೇ ರಕ್ಷಣೆ ಒದಗಿಸಲಾರದು.


ಯುರೋಪಿನ ದೇಶಗಳು ಭಾರತದ ವ್ಯವಹಾರಗಳಲ್ಲಿ ಸಿಂಹಪಾಲು ಹೊಂದಿವೆ. ಭಾರತದ ಒಟ್ಟು ರಫ್ತಿನ ಶೇ. 26 ರಷ್ಟು ಈ ದೇಶಗಳಿಗೆ ಹೋದರೆ ಸುಮಾರು ಶೇ. 25 ರಷ್ಟು ಆಮದು ಆ ದೇಶಗಳಿಂದಲ್ಲಿ ಬರುತ್ತದೆ. ಈ ಹಿನ್ನೆಲೆಯಲ್ಲಿಯೇ ಈ ದೇಶಗಳ ನಿರ್ಬಂಧದ ಕ್ರಮ ಭಾರತದ ಆರ್ಥಿಕತೆಗೆ ಹೆಚ್ಚಿನ ನೋವು ಉಂಟುಮಾಡುವುದು.

ವಿಮಾನ ನಿಲ್ದಾಣಗಳ ಖಾಸಗೀಕರಣ

ಕೇಂದ್ರ ಸರ್ಕಾರ ವಿಮಾನ ನಿಲ್ದಾಣಗಳ ಖಾಸಗೀಕರಣ ಮಾಡುವ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಿದೆ. ಇನ್ನು ಮುಂದೆ ವಿಮಾನ ನಿಲ್ದಾಣ ಗಳನ್ನು ಸರ್ಕಾರೀ ಸ್ವಾಮ್ಯದ ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ನಿರ್ವಹಿಸುವ ಬದಲು ಖಾಸಗಿ ಕಂಪನಿಗಳು ವಿಮಾನ ನಿಲ್ದಾಣಗಳನ್ನು ನಿರ್ವಹಿಸಲಿವೆ. ಇದರಿಂದಾಗುವ ಪರಿಣಾಮವೇನೆಂದರೆ ಈಗಿರುವ ಉದ್ಯೋಗಗಳು ಕಡಿಮೆಯಾಗುತ್ತವೆ; ಖಾಸಗಿಯುವರು ಲಾಭವನ್ನು ಮಾತ್ರ ನೋಡುವುದರಿಂದ ದೇಶದ ಹಿತಾಸಕ್ತಿಗಳಿಗೆ ಗಮನ ಕಡಿಮೆಯಾಗುತ್ತದೆ; ದೇಶದ ಭದ್ರತಾ ದೃಷ್ಟಿಯಿಂದ ಸಮಸ್ಯೆಗಳು ಹೆಚ್ಚಾಗಲಿವೆ.

ಇದಲ್ಲದೆ ಜನರಿಗೆ ಸಿಗುವ ಅನುಕೂಲ ಗಳು ಕಡಿಮೆಯಾಗಲಿವೆ. ಅತಿ ಶ್ರೀಮಂತರಿಗೆ ಹೆಚ್ಚಿನ ಅನುಕೂಲಗಳು ಮತ್ತು ಸಮಾನ್ಯರಿಗೆ ಕಡಿಮೆ ಅನುಕೂಲಗಳು ದೊರೆಯಲಿವೆ.

ಇದೇ ಉದಾರೀಕರಣ ತಾನೆ?



ತಂತ್ರಜ್ಞಾನ ಆಮದಿನ ಉದಾರೀಕರಣ

ಕೇಂದ್ರ ಸರ್ಕಾರದ ಮಂತ್ರಿಗಳ ಸಮಿತಿ ತಂತ್ರಜ್ಞಾನದ ಆಮದನ್ನು ಇನ್ನೂ ಉದಾರೀಕರಿಸಿದೆ. ಈ ಉದಾರೀಕರಣದ ಪ್ರಕಾರ ಹಣಕಾಸು ಸಂಸ್ಥೆಗಳು ಯೋಜನೆಗಳ ಅಪ್ರೈಸಲ್ ಮಾಡಿದ್ದರೆ ಅಂತ ಯೋಜನೆ ಗಳಿಗೆ ನೇರವಾಗಿ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಬಹುದು. ಈ ಆಮದಿನ ಮೇಲೆ ಯಾವುದೇ ತರಹದ ನಿರ್ಬಂಧಗಳಿರುವುದಿಲ್ಲ.

ಇಂತಹ ಯೋಜನೆಗಳಿಗೆ ಸೂಕ್ತವಾದ ತಂತ್ರಜ್ಞಾನವನ್ನು ಈಗ ಮೆದುವಾಗಿ ಆಮದು ಮಾಡಿಕೊಳ್ಳಲು ಬಹಳ ಅನುಕೂಲವಾಗುತ್ತವೆ ಎಂದು ಈ ಸಮಿತಿಯ ಪತ್ರಿಕಾ ಹೇಳಿಕೆ ಹೇಳಿದೆ.

ಇದೇ ರೀತಿಯಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳು ನೇರವಾಗಿ ತಂತ್ರಜ್ಞಾನ ಆಮದು ಮಾಡಿಕೊಳ್ಳುವ ಅವಕಾಶವನ್ನು ನೀಡಲಾಗಿದೆ.

ಹೀಗೆ ತಂತ್ರಜ್ಞಾನದ ಆಮದನ್ನು ಮಾಡಿಕೊಳ್ಳುವ ಅವಕಾಶ ದೊರೆತರೆ ದೇಶಕ್ಕೆ ಒಳ್ಳೆಯದಲ್ಲವೇ ಎಂದು ಕೇಳಬಹುದು ನಿಜವಾಗಿ ಉತ್ತಮ ತಂತ್ರಜ್ಞಾನದ ಆಮದಾಗುವುದಾದರೆ ಒಂದು ರೀತಿಯಲ್ಲಿ ದೇಶಕ್ಕೆ ಒಳ್ಳೆಯದು ಎಂದೇ ಇಟ್ಟು ಕೊಳ್ಳೋಣ. ಆದರೆ ವಾಸ್ತವವಾಗಿ ಏನಾಗುತ್ತದೆಂದರೆ ನಮ್ಮ ದೇಶದ ಆಡಳಿತದ ವಿವಿಧ ಸ್ಥರಗಳಲ್ಲಿ ಭ್ರಷ್ಟಾಚಾರವಿರು ವುದರಿಂದ ಉತ್ತಮ ತಂತ್ರಜ್ಞಾನ ದೇಶದೊಳಗೇ ಲಭ್ಯವಿರುವಾಗಲೂ ಹೆಚ್ಚಿನ ಹಣತೆತ್ತು ವಿದೇಶೀ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುತ್ತಾರೆ. ನಮ್ಮ ದೇಶ ನಷ್ಟಕ್ಕೊಳಗಾದರೆ ವಿದೇಶೀ ಮಾರಾಟಗಾರ ಇದರಿಂದ ಲಾಭ ಹೊಂದುತ್ತಾನೆ ಲಾಭಕ್ಕಾಗಿ ಏನು ಬೇಕಾದರೂ ಮಾಡುವ ಬಹು ರಾಷ್ಟ್ರೀಯ ಕಂಪನಿಗಳು ಈ ಅವಕಾಶದ ಲಾಭ ಪಡೆಯದೇ ಹೋಗುವುದಿಲ್ಲ,

ಎರಡನೇಯದಾಗಿ ಇಂತಹ ಪ್ರಕ್ರಿಯೆ ಯಿಂದಾಗಿ ದೇಶದೊಳಗೆ ತಂತ್ರಜ್ಞಾನ ಬೆಳೆಯುವುದೇ ಇಲ್ಲ. ದೇಶದ ಸ್ವಾವಲಂಬನೆ ನಷ್ಟವಾಗುತ್ತದೆ. ವ್ಯಾಪಾರ ಬಾಕಿಗಳಂತಹ ಹಲವು ಸಮಸ್ಯೆಗಳು ಮೇಲಿನ ಎರಡು ಸಮಸ್ಯೆಗಳಿಂದಾಗಿ ಉಂಟಾಗುತ್ತದೆ.

ಹೇಳಿ ತಂತ್ರಜ್ಞಾನ ಆಮದು ಉದಾರೀಕರಣ ದೇಶಕ್ಕೆ ಒಳ್ಳೆಯದೆ?

ಕರ್ನಾಟಕದ ಬೆಳವಣಿಗೆಯ ದರ ಸ್ಥಿರವಾದದ್ದಲ್ಲ

ಹಾಗೆ ಕರ್ನಾಟಕದ ರಾಜ್ಯ ಆಂತರಿಕ ಉತ್ಪನ್ನ ಬೆಳವಣಿಗೆ ದರ ದೇಶದಲ್ಲಿ ಉತ್ತಮವಾದದ್ದು. ಉದಾರೀಕರಣ ದಿಂದೀಚೆಗಿನ ವರ್ಷಗಳಲ್ಲಿ ಈ ದರ ಶೇ. 17 ರಷ್ಟಿದೆಯಂತೆ. ಆದರೆ ಈ ದರ ಮುಂದುವರೆಯುವ ಭರವಸೆ ಇಲ್ಲ. ಅರ್ನ್ಸ್ಟ್ ಮತ್ತು ಯಂಗ್ ಎಂಬ ಸಮಾಲೋಚನಾ ಸಂಸ್ಥೆಯ ವರದಿಯ ಪ್ರಕಾರ ಕರ್ನಾಟಕದಲ್ಲಿ ಔದ್ಯಮಿಕ ಬೆಳವಣಿಗೆ 1981 ರಿಂದಲೂ ಒಂದೇ ದರದಲ್ಲಿ ನಿಂತು ಹೋಗಿದೆ. ಆದ್ದರಿಂದಲೇ ಮುಂದಿನ ಬೆಳವಣಿಗೆದರ ಏರದೇ ಇರುವ ಸಾಧ್ಯತೆ ಹೆಚ್ಚು.

ಒಟ್ಟುತ್ಪಾದನೆಯಲ್ಲಿ ವಿವಿಧ ವಲಯಗಳ ಪಾಲನ್ನು ಗಮನಿಸಿದರೆ ಬೆಳವಣಿಗೆ ತೀರ ಏರುಪೇರಾಗಿರುವುದು ಕಂಡು ಬರುತ್ತದೆ. ಔದ್ಯಮಿಕ ಉತ್ಪನ್ನಗಳ ಪಾಲು ಶೇ. 22 ರಷ್ಟಿದ್ದರೆ (ಇದು 1980-81 ರಿಂದಲೂ ಅದೇ ಮಟ್ಟದಲ್ಲಿದೆ) ಸೇವಾ ವಲಯದ ಪಾಲು 1990-91 ರಲ್ಲಿ ಶೇ 33 ರಷ್ಟಿದ್ದದ್ದು 1994-95 ರ ವೇಳೆಗೆ ಶೇ. 39 ಕ್ಕೆ ಏರಿದೆಯಂತೆ. ಇಂತಹ ಬೆಳವಣಿಗೆ ಕೃಷಿ ವಲಯದಲ್ಲಿ ನಿರುದ್ಯೋಗ ಅರೆಕಾಲಿಕ ನಿರುದ್ಯೋಗ ವನ್ನು ಹೆಚ್ಚಿಸುತ್ತದೆ.

ಕೆಲಸಗಾರರು ಹೆಚ್ಚುತ್ತ ಹೋಗುತ್ತಿರುವ ಆರ್ಥಿಕದಲ್ಲಿ ಉತ್ಪಾದನಾ ವಲಯದಲ್ಲಿ ಬೆಳವಣಿಗೆ ಆದರೆ ನಿಜವಾದ ಉದ್ಯೋಗ ಸೃಷ್ಟಿಯಾಗುತ್ತದೆ. ಬದಲಿಗೆ ಬರೀ ಸೇವಾ ವಲಯದಲ್ಲಿ ಬೆಳವಣಿಗೆ ಆದರೆ ಅದರಿಂದ ನಿಜವಾದ ಉದ್ಯೋಗ ಸೃಷ್ಟಿ ಆಗುವುದಿಲ್ಲ.

ಕರ್ನಾಟಕದಲ್ಲಿ ಇಂತಹ ಬೆಳವಣಿಗೆ ಆಗಿರುವುದರಿಂದ ಮುಂಬರುವ ದಿನಗಳಲ್ಲಿ ಇದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಆರ್ಥಿಕದಲ್ಲಿ ಅನಾನುಕೂಲಕರ ಬೆಳವಣಿಗೆಗಳು ಆಗಲಿವೆ ಎಂದು ಈ ಸಂಸ್ಥೆ ಹೇಳಿದೆ.

ಹಾಗೆ ನೋಡಿದರೆ ಉದಾರೀಕರಣ ದಿಂದಾಗಿ ರಾಜ್ಯಗಳ ಆದಾಯದ ಮೇಲೆ ತೀವ್ರವಾದ ಹೊಡೆತ ಬಿದ್ದಿದೆ. ಕೇಂದ್ರದಿಂದ ಬರುವ ಹಣದ ಪ್ರಾಮಾಣವೂ ಕಡಿಮೆಯಾಗಿರುವುದರಿಂದ ಇಂತಹ ಬೆಳವಣಿಗೆಗಳನ್ನು ತಡೆದು ಆರ್ಥಿಕವನ್ನು ಆರೋಗ್ಯಪೂರ್ಣಗೊಳಿಸಲು ಬೇಕಾದ ಸಂಪನ್ಮೂಲ ರಾಜ್ಯ ಸರ್ಕಾರಗಳ ಕೈಯಲ್ಲಿ ಇರುವುದಿಲ್ಲ. ಆದ್ದರಿಂದಲೇ ಕರ್ನಾಟಕದಂತಹ ರಾಜ್ಯಗಳು ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ದೊರೆಯುವಂತೆ ಮಾಡಲು ಹೋರಾಟಗಳನ್ನು ಇತರೆ ರಾಜ್ಯಗಳ ಜೊತೆಗೂಡಿ ಪ್ರಾರಂಭಿಸ ಬೇಕು. ಕೇಂದ್ರದ ಮೇಲೆ ಒತ್ತಡ ಬಿದ್ದಾಗ ಮಾತ್ರ ಕೇಂದ್ರ- ರಾಜ್ಯ ಸಂಬಂಧಗಳ ವಿಮರ್ಶೆ ಮತ್ತು ಸುಧಾರಣೆಯ ಪ್ರಯತ್ನಗಳಾಗುತ್ತವೆ.

ಐಎಂಎಫ್-ವಿಶ್ವಬ್ಯಾಂಕ್ ಆದೇಶಗಳನ್ನು ಶಿರಸಾವಹಿಸಲು ಧಾವಿಸಿದ ಬಿಜೆಪಿ ಸರಕಾರದ ದೇಶ-ವಿರೋಧಿ ಕ್ರಮಗಳು

ಸಿಐಟಿಯು ನ ತೀವ್ರ ವಿರೋಧ

ಕೇಂದ್ರ ಸಚಿವ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿ ಕಳೆದ ವಾರ ಐದು ವಿಮಾನ ನಿಲ್ದಾಣಗಳ ಕಂಪನೀಕರಣ, ತಂತ್ರಜ್ಞಾನ ವರ್ಗಾವಣೆಗೆ ಅನುಮತಿ, ಜವಳಿ ಉದ್ದಿಮೆಯಲ್ಲಿ ತಂತ್ರಜ್ಞಾನ ಮಟ್ಟ ಹೆಚ್ಚಿಸಲು ನಿಧಿ ಹಾಗೂ ಹೊಸ ಉದ್ದಿಮೆಗೆ ಹಾಕಿದ ಬಂಡವಾಳವನ್ನು ಪರಿವರ್ತಿಸಲು ಅವಕಾಶ ಇತ್ಯಾದಿ ನಿರ್ಣಯಗಳನ್ನು ಕೈಗೊಂಡಿದೆ. ಇವೆಲ್ಲಾ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದ ಕ್ರಮಗಳು ಎಂದು ಸಿಐಟಿಯು ಖಂಡಿಸಿದೆ.

ದಿಲ್ಲಿ, ಮುಂಬೈ, ಕಲ್ಕತ್ತಾ, ಚೆನ್ನೈ, ಬೆಂಗಳೂರು ವಿಮಾನ ನಿಲ್ದಾಣಗಳನ್ನು ಕಂಪನಿಗಳಾಗ ಮಾಡುವ ನಿರ್ಣಯ ವಾಸ್ತವವಾಗಿ ಅವನ್ನು ಖಾಸಗೀಕರಿಸಿ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕೊಡುವ ಕ್ರಮ.

ಭಾರತೀಯ ವಿಮಾನ ನಿಲ್ದಾಣಗಳಿಗೂ ದೇಶದ ವೈಮಾನಿಕ ರಕ್ಷಣೆಗೂ ನಿಕಟ ಸಂಬಂಧವಿರುವುದರಿಂದ ವಿಮಾನ ನಿಲ್ದಾಣಗಳ ಖಾಸಗೀಕರಣದಿಂದ ನಮ್ಮ ವಿಮಾನ ಪಡೆಗಳ ಚಲನವಲನಗಳ ಬಗ್ಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಎಲ್ಲಾ ಮಾಹಿತಿ ದೊರೆಯಲು ಅವಕಾಶವಾಗುತ್ತದೆ. ಇದಲ್ಲದೆ ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದ ಬಹುಪಾಲು ನೌಕರರ ಕೆಲಸದ ಭದ್ರತೆಗೆ ಅಪಾಯ ಬರುತ್ತದೆ. ಏಕೆಂದರೆ ಬಹುರಾಷ್ಟ್ರೀಯ ಕಂಪನಿಗಳು ದಕ್ಷ ನಿರ್ವಹಣೆಯ ಹೆಸರಲ್ಲಿ ಸಿಬ್ಬಂದಿ ಸಂಖ್ಯೆಯನ್ನು ತೀವ್ರವಾಗಿ ಕಡಿತ ಮಾಡುತ್ತವೆ ಎಂದು ಸಿಐಟಿಯು ಹೇಳಿದೆ.

ಜವಳಿ ಉದ್ದಿಮೆಗೆ ತಂತ್ರಜ್ಞಾನ ಮಟ್ಟ ಹೆಚ್ಚಿಸಲು 2500 ಕೋಟಿ ರೂ.ಗಳ ನಿಧಿ ರಚನೆ ಹಾಗೂ ಸರಕಾರದಿಂದ ಬಡ್ಡಿಯ ಮೇಲೆ 5% ಸಬ್ಸಿಡಿ ನೀಡಿಕೆಯ ನಿರ್ಧಾರ ಜವಳಿ ದೊರೆಗಳಿಗೆ 300 ಕೋಟಿ ರೂ.ಗಳ ಹೆಚ್ಚಿನ ಲಾಭವನ್ನು ಸರಕಾರ ಖಜಾನೆಯಿಂದ ಕೊಡಮಾಡುವ ಕ್ರಮ ಎಂದಿರುವ ಸಿಐಟಿಯು ರೋಗಗ್ರಸ್ತ ಹತ್ತಿ ಮತ್ತು ಸೆಣಬು ಗಿರಣಿಗಳನ್ನು ಪುನಶ್ಚೇತನಗೊಳಿಸಲು ನಿರಾಕರಿಸುವ ಸರಕಾರ ಜವಳಿ ದೊರೆಗಳಿಗೆ ನೀಡಿರುವ ಈ ಭಕ್ಷೀಸು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ ಎಂದಿದೆ.

ಭಾರತದಲ್ಲಿ ತಂತ್ರಜ್ಞಾನದ ವರ್ಗಾವಣೆ ಯಲ್ಲಿ 95% ಕ್ಕೆ ತಂತಾನೇ ಅನುಮತಿ ನೀಡುವ ಸರಕಾರದ ಮತ್ತೊಂದು ನಿರ್ಣಯ ತಂತ್ರಜ್ಞಾನ ವರ್ಗಾವಣೆಯ ಹೆಸರಲ್ಲಿ ಬೇಕಾಬಿಟ್ಟಿ ಯಂತ್ರ ಆಮದಿಗೆ ಅವಕಾಶ ನೀಡುತ್ತದೆ, ಇದರಿಂದ ಬಂಡವಾಳ ಸರಕುಗಳ ಉದ್ದಿಮೆ ಆಳವಾದ ಬಿಕ್ಕಟ್ಟಿಗೆ ಸಿಲುಕಿ ವ್ಯಾಪಕ ನಿರುದ್ಯೋಗ ಉಂಟಾಗುತ್ತದೆ ಎಂದಿರುವ ಸಿಐಟಿಯು ಹೊಸ ತಂತ್ರಜ್ಞಾನ ತರುವ ಮೊದಲು ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸಬೇಕೆಂಬ ಒತ್ತಾಯವನ್ನು ಸರಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎಂದು ಟೀಕಿಸಿದೆ.

ಇದಲ್ಲದೆ ಹೊಸ ಉದ್ದಿಮೆಯಲ್ಲಿ ತೊಡಗಿಸಿದ ಬಂಡವಾಳವನ್ನು ಪರಿವರ್ತಿಸಲು ಅವಕಾಶ ನೀಡಿರುವುದು ನಮ್ಮ ದೇಶದೊಳಗೆ ವಿದೇಶಿ ನೇರ ಹೂಡಿಕೆದಾರರಿಗೆ ಹೆಚ್ಚು ಲಾಭಾಂಶ ಪಡೆಯಲು ಅವಕಾಶ ನೀಡಿದೆ.

ದೇಶದೊಳಗೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಹೆಸರಲ್ಲಿ ಕೈಗೊಂಡಿರುವ ಈ ಕ್ರಮಗಳೆಲ್ಲಾ ಅವರ ಲಾಭದಾಯಕತೆಯನ್ನು ಹೆಚ್ಚಿಸಿ ನಮ್ಮ ಆರ್ಥಿಕದ ಮೇಲೆ ಅವರ ಹತೋಟಿಯನ್ನು ಬಲಪಡಿಸಿ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಮಾರಕ ವಾಗುತ್ತವೆ ಎಂದು ಸಿಐಟಿಯು ಸ್ಪಷ್ಟವಾಗಿ ಹೇಳಿದೆ.

ಸರಕಾರದ ಈ ನಿರ್ಣಯ ಅದರ 'ಸ್ವದೇಶಿ' ಮಂತ್ರದ ಪೊಳ್ಳುತನವನ್ನು ಬಯಲಿಗೆಳೆದಿದೆ. ಅದು ಈ ಕ್ರಮಗಳ ಮೂಲಕ ಐಎಂಎಫ್-ವಿಶ್ವಬ್ಯಾಂಕ್ ಆದೇಶಗಳನ್ನು ಪರಿಪಾಲಿಸಲು ಧಾವಿಸಿದೆ. ಆದ್ದರಿಂದ ಎಲ್ಲಾ ಕಾರ್ಮಿಕ ಸಂಘಗಳು ಜನರ ಹಾಗೂ ದೇಶದ ಕೈಗಾರಿಕಾ ಬೆಳವಣಿಗೆಯ ಹಿತಾಸಕ್ತಿಗಳಿಗೆ ಮಾರಕವಾಗುವ ಈ ದೇಶ-ವಿರೋಧಿ ಪ್ರಸ್ತಾವಗಳ ವಿರುದ್ಧ ದನಿ ಎತ್ತಬೇಕೆಂದು ಸಿಐಟಿಯು ಕರೆ ನೀಡಿದೆ.

(ಐಎನ್‌ಎನ್)

ದ್ವೇಷದ ಕಿಚ್ಚು ಹಚ್ಚಿ ....

ಪುಟ 1 ರಿಂದ

ನಿರೀಕ್ಷೆಯಿಟ್ಟುಕೊಂಡಂತಿದೆ" ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕಿಸಿದೆ.

ಎರಡು ಶಾಸನಬದ್ಧ ಸಂಸ್ಥೆಗಳಾದ ರಾಷ್ಟ್ರೀಯ ಮಾನವ ಹಕ್ಕು ಆಯೋಗ ಹಾಗೂ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಈಗಾಗಲೇ ತನಿಖೆಗೆ ತಮ್ಮ ತಂಡಗಳನ್ನು ಕಳಿಸಿರುವಾಗ ವಾಜಪೇಯಿ ಸರಕಾರ ಒಂದು ಆಯೋಗ ನೇಮಿಸಲು ನಿರ್ಧರಿಸಿರುವುದು ನಿಜಕ್ಕೂ ವಿಚಿತ್ರ ಸಂಗತಿ ಎಂದಿರುವ ಸಿಪಿಐ(ಎಂ) ಈ ಸಂಪುಟ ನಿರ್ಣಯದಲ್ಲಿ ಬಿಜೆಪಿಯ ಮಿತ್ರ ಪಕ್ಷಗಳೂ ಶಾಮೀಲಾಗಿರುವುದು ಶೋಚನೀಯ ಸಂಗತಿ ಎಂದಿದೆ.

.... ಮತ್ತು ಉಪವಾಸ

ನಿಷ್ಕ್ರಿಯತೆಯನ್ನು ಮರೆಮಾಚುವ ಈ ನಾಟಕವನ್ನು ಪೂರ್ಣಗೊಳಿಸಲೆಂದೋ ಏನೋ, 51 ವರ್ಷಗಳ ಹಿಂದೆ ಇದೇ ಕೋಮುವಾದಿ ಪರಿವಾರಕ್ಕೆ ಸೇರಿದವನೊಬ್ಬ ಮಹಾತ್ಮಾಗಾಂಧಿಯನ್ನು ಕೊಲೆ ಮಾಡಿದ ದಿನ ಜನವರಿ 30 ರಂದು ಉಪವಾಸ ಮಾಡುವುದಾಗಿ ಪ್ರಧಾನ ಮಂತ್ರಿಗಳು ಹೇಳಿದ್ದಾರೆ; ದೇಶಬಾಂಧವರೆಲ್ಲಾ ಇದರಲ್ಲಿ ಸೇರಿಕೊಳ್ಳಬೇಕೆಂದು ಅಪೀಲು ಮಾಡಿದ್ದಾರೆ! ಪ್ರಧಾನ ಮಂತ್ರಿಗಳಿಂದ ಇಂತಹ ಸಮಯದಲ್ಲಿ ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ದೇಶ ನಿರೀಕ್ಷಿಸುತ್ತದೆ, ಅವರನ್ನು ದೇಶ ಚುನಾಯಿಸಿದ್ದು ಆಡಳಿತ ನಡೆಸಲು, ಉಪವಾಸ ಮಾಡಲಿಕ್ಕಲ್ಲ" ಎಂದು ಒಂದು ಪತ್ರಿಕೆ ಟಿಪ್ಪಣಿ ಮಾಡಿದ್ದರೆ, ಇನ್ನೊಂದು ಪತ್ರಿಕೆ "ಈ ಸರಕಾರದ ನೈತಿಕ ವಿಶ್ವಾಸಾರ್ಹತೆ "ಪಾತಾಳಕ್ಕಿಳಿಯುತ್ತಿರುವಾಗ ನೈತಿಕ ಬಂಡವಾಳವನ್ನು ಉತ್ಪನ್ನ ಮಾಡಲು ಈ ಉಪವಾಸ' ಎಂದು ಟೀಕಿಸಿದೆ. "ಪ್ರಾಯಶ್ಚಿತ್ತ ಮಾಡಲು ಈ ಉಪವಾಸವೆಂದರೆ ನಿಮ್ಮ ಆಡಳಿತದಲ್ಲಿ ಇಂತಹ ಹಿಂಸಾಚಾರ ವಿಪರೀತ ಹೆಚ್ಚಿದೆ, ಅದನ್ನು ಎದುರಿಸಲು ನಿಮಗಾಗುತ್ತಿಲ್ಲ ಎಂದು ನೀವೇ ಒಪ್ಪಿಕೊಂಡತ್ತಲ್ಲವೇ?" ಎಂದು ಪತ್ರಕರ್ತರೊಬ್ಬರು ಕೇಳಿದಾಗ ಬಿಜೆಪಿ ವಕ್ತಾರರು ತಡವರಿಸಬೇಕಾಯಿತಂತೆ.

ದೇಶದ ಬಹುಪಾಲು ಜನರ ಅಭಿಪ್ರಾಯವೂ ಇದೇ ಇದ್ದಂತಿದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಜನವರಿ 30 ರಂದು ಮಹಾತ್ಮ ಗಾಂಧೀಜಿ ಯಾವ ಮೌಲ್ಯಗಳಿಗಾಗಿ ಬಲಿದಾನ ಮಾಡಿದರೋ ಆ ಮೌಲ್ಯಗಳನ್ನು ಎತ್ತಿ ಹಿಡಿಯಲು ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಸುದ್ದಿಗಳು ಬರುತ್ತಿವೆ. ದಿಲ್ಲಿಯಲ್ಲಿ ಮಹಾತ್ಮ ಗಾಂಧಿಯವರ ಸಮಾಧಿಯಿರುವ ರಾಜಘಾಟ್‌ನಿಂದ ಕೋಮುವಾದಿಗಳು ಪಿಚ್ ಹಾಳುಗೆಡವಿದ ಫಿರೋಜ್ ಶಾ ಕೋಟ್ಲಾ ಮೈದಾನದವರೆಗೆ 'ನಾಗರೀಕರ ನಡಿಗೆ' ನಡೆದಿದೆ. ಎಡಪಕ್ಷಗಳ ಮುಖಂಡರು ಈ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಎಡಪಕ್ಷಗಳು, ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್, ಐ.ಕೆ.ಗುಜ್ರಾಲ್, ಸುರ್ಜಿತ್ ಮತ್ತು ಇತರ ಕಾರ್ಮಿಕ ಸಂಘಗಳು, ಕ್ರೈಸ್ತ ಸಂಘಟನೆಗಳು, ವಿದ್ಯಾರ್ಥಿ, ಯುವಜನರು, ಮಹಿಳೆಯರು ಇತರ ಸಾಮಾಜಿಕ ಸಂಘಟನೆಗಳು ಇರುವ ವಿಶಾಲ ನಾಗರಿಕ ಸಮಿತಿ ಇದನ್ನು ಏರ್ಪಡಿಸಿದೆ.

ಬೆಂಗಳೂರಿನಲ್ಲಿ ಬೆಳಿಗ್ಗೆ ಮಹಾತ್ಮಗಾಂಧಿ ಪ್ರತಿಮೆಯಿಂದ ಸೈಂಟ್ ಮೇರಿ ಬ್ಯಾಸಿಲಿಕಾದವರೆಗೆ ನೂರಾರು ಜನರು ಕೈಕೈಜೋಡಿಸಿ ಮಾನವ ಸರಪಳಿ ಏರ್ಪಡಿಸಿದರೆ, ಸಂಜೆ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಕೋಮು ಸೌಹಾರ್ದ ಕಾರ್ಯಕ್ರಮಗಳು ನಡೆದಿವೆ.

ಬಿಪಿಎಲ್ ಕಾರ್ಮಿಕರಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಆರಂಭ

ಸಂವಿಧಾನಾತ್ಮಕವಾದ ಸಂಘ ರಚಿಸಿಕೊಳ್ಳುವ ಹಕ್ಕಿಗಾಗಿ ಮುಂದುವರಿದ ಹೋರಾಟದ ಅಂಗವಾಗಿ ಬಿಪಿಎಲ್ ಕಾರ್ಮಿಕರು ಜನವರಿ 27 ರಿಂದ ಅನಿರ್ದಿಷ್ಟಕಾಲ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸಂಘದ ಪದಾಧಿಕಾರಿಗಳ ಜೊತೆ ಬೆಂಗಳೂರಿನ ಕೆ.ಆರ್.ವೃತ್ತದಲ್ಲಿ ಧರಣಿ ನಡೆಸುತ್ತಿದ್ದಾರೆ.

ಜನವರಿ ಒಂದರಂದು ರಾಜ್ಯದ ಉಪಮುಖ್ಯಮಂತ್ರಿಗಳು ಹಾಗೂ ಕಾರ್ಮಿಕರ ಮಂತ್ರಿಗಳೂ ಆದ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ನಡೆದ ಜಂಟಿ ಸಭೆಯಲ್ಲಿ ಕಾರ್ಮಿಕ ಮುಖಂಡರು; ಕಾರ್ಮಿಕ ಇಲಾಖೆ ಅಧಿಕಾರಿಗಳು ಮತ್ತು ಆಡಳಿತ ಮಂಡಳಿ ಸದಸ್ಯರು ಭಾಗವಹಿಸಿ ಬೇಡಿಕೆಗಳನ್ನು ಒಪ್ಪಿ ಶೀಘ್ರವೇ ಪರಿಹರಿಸುವ ಭರವಸೆ ನೀಡಿದರು.


ಆದರೆ, ನಂತರ ತಮ್ಮ ಸಂಘ-ವಿರೋಧಿ ನೀತಿಯನ್ನು ಮುಂದುವರಿಸಿದ ಆಡಳಿತ ಮಂಡಳಿ, ರಾಜ್ಯದ ಉಪಮುಖ್ಯಮಂತ್ರಿಗಳಿಗೆ ಸವಾಲೆಸೆಯುವಂತೆ ಮತ್ತೆ ಕಾರ್ಮಿಕ ಆಯುಕ್ತರು, ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಕರೆದ ಸಭೆಗೆ ಹಾಜರಾಗದೆ ಇದೇ ತನ್ನ ಗಟ್ಟಿತನವೆಂದು ಭ್ರಮಿಸಿ ಭಂಡತನ ಪ್ರದರ್ಶಿಸುತ್ತಿದೆ.

ಈ ಮಧ್ಯೆ ಸಂಘವನ್ನು ಬಗ್ಗುಬಡಿಯಲು ಸುಳ್ಳು ಮೊಕ್ಕದಮೆ ಹೂಡಿ ಮಹೇಶ, ದಿನೇಶ, ಎನ್.ಕೆ.ತಿರುಮಲೆ, ಬಾಬು, ಕೃಷ್ಣ, ಗೋಪಿಶ್, ಶೇಖರ್ ರಾಜು, ಗೌರಮ್ಮ ರಮೇಶ ಸೇರಿದಂತೆ ಹಲವು ಮುಖಂಡರುಗಳನ್ನು ಕಳೆದ ಹದಿನೈದು ದಿನಗಳಿಂದ ಜೈಲಿನಲ್ಲಿರಿಸಿ ಕಾರ್ಮಿಕರನ್ನು ಬೆದರಿಸುವ ಹುನ್ನಾರ ನಡೆಸಿದ್ದಾರೆ. ಇವರ ಜೊತೆ ಆರ್.ಶ್ರೀನಿವಾಸ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ, ಮೀನಾಕ್ಷಿ ಸುಂದರಂ ಮೇಲೆ ಲೂಟಿ, ದರೋಡೆ ಹಾಗೂ ಕೊಲೆ ಮುಂತಾದ ಸುಳ್ಳು ಕೇಸು ದಾಖಲಿಸಿ ಜಾಮೀನುರಹಿತ ವಾರೆಂಟ್ ಹೊರಡಿಸಿದ್ದಾರೆ. ಇದಕ್ಕೆಲ್ಲಾ ಹೆಬ್ಬುಗೋಡಿ ಪೋಲೀಸರು ಮಾಲೀಕರ ಪರ ನಿಷ್ಠೆ ಪ್ರದರ್ಶಿಸಿದ್ದಾರೆ. ಕಾರ್ಮಿಕರು ತಮ್ಮ ಭೀಮಶಕ್ತಿಯನ್ನು ಪ್ರದರ್ಶಿಸಿ, ಹಲವು ಬಾರಿ ಕಾರ್ಮಿಕ ಇಲಾಖೆ, ಶಾಸಕರು, ಸಚಿವರು ಹಾಗೂ ಸರ್ಕಾರಕ್ಕೆ ತಮ್ಮ ತೊಂದರೆ ವಿವರಿಸಿದರೂ ಕಾರ್ಮಿಕ ಇಲಾಖೆಯ ಮಾಲಿಕ ಪರ ಧೋರಣೆ, ರಾಜ್ಯ ಸರ್ಕಾರದ ನಿಷ್ಕ್ರಿಯತೆಯಿಂದ ನೊಂದಿರುವ ಸಾವಿರಾರು ಕಾರ್ಮಿಕರು ಕಾರ್ಖಾನೆ ಮುಂದೆ ಧರಣಿ ಮುಂದುವರಿಸಿ, ಮತ್ತೊಂದೆಡೆ ಸರ್ಕಾರದ ವಿವಿಧ ಇಲಾಖೆ ಹಾಗೂ ಆಡಳಿತ ಮಂಡಳಿಯ ಕೇಂದ್ರ ಕಛೇರಿ ಮುಂದೆ ಧರಣಿ ನಡೆಸಿ ತಮ್ಮ ಸಂಕಷ್ಟ ತೋಡಿಕೊಂಡಿದ್ದಾರೆ.

ಕಾರ್ಮಿಕರ ಬೇಡಿಕೆ ಈಡೇರಿಸುವ ಬದಲಿಗೆ ಆಡಳಿತ ಮಂಡಳಿಯು ಪೋಲೀಸ್ ಇಲಾಖೆಗೆ ಹಣ ಸುರಿದು ತನ್ನ ಸಂಪತ್ತಿನ ವೃದ್ಧಿಗೆ ಕಾರಣರಾದ ಕಾರ್ಮಿಕರನ್ನು ವಂಚಿಸುತ್ತಿದೆ. ಕಾರ್ಮಿಕರ ಹೇಳಿಕೆಯಂತೆ ಆ ಹಣವನ್ನು ಕಾರ್ಮಿಕರಿಗೆ ನೀಡಿದರೆ ಅವರ ಉತ್ಪಾದನೆ ಹೆಚ್ಚಾಗುತ್ತಿತ್ತು. ಇವರಿಗೆ ಸಂಬಳ ಇಮ್ಮಡಿಯಾಗುತ್ತಿತ್ತು.

ಈ ಭಂಡ ಬಂಡವಾಳಿಗನನ್ನು ಮಣಿಸಬೇಕಾದರೆ, ಈ ಸರ್ಕಾರವನ್ನು ಎಚ್ಚರಿಸಬೇಕಾದರೆ, ಪ್ರಬಲ ಹಾಗೂ ಸತತ ಹೋರಾಟವೇ ಅಸ್ತ್ರವೆಂದು ಮನಗಂಡಿರುವ ಕಾರ್ಮಿಕರು ಹಲವು ಹೋರಾಟಗಳನ್ನು ಹಮ್ಮಿಕೊಂಡಿದ್ದಾರೆ.

ಇದರ ಅಂಗವಾಗಿಯೇ ಸಂಘದ ಅಧ್ಯಕ್ಷರಾದ ಆರ್.ಶ್ರೀನಿವಾಸ್ ನೇತೃತ್ವದಲ್ಲಿ ಪದಾಧಿಕಾರಿಗಳಾದ



ಹಳೇ ಮದ್ರಾಸ್ ರಸ್ತೆ ಘಟಕದ ವೀಣಾ, ರತ್ನಮ್ಮ ಮತ್ತು ದೊಡ್ಡಬಳ್ಳಾಪುರ ಘಟಕದ ರವಿ ಜನವರಿ 27 ರಿಂದ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ. ಸಾವಿರಾರು ಕಾರ್ಮಿಕರು ಅವರ ಜತೆಗೆ ಧರಣಿ ಕುಳಿತಿದ್ದಾರೆ.

ಇಷ್ಟಕ್ಕೂ ಮಣಿಯದಿದ್ದರೆ ಫೆಬ್ರವರಿ ಒಂದರಿಂದ ಮಹಿಳಾ ಕಾರ್ಮಿಕರು ಹಂತ ಹಂತವಾಗಿ ಜೈಲ್‌ಭರೋ ಚಳುವಳಿ ಹಮ್ಮಿಕೊಂಡಿದ್ದಾರೆ. ಪುರುಷ ಕಾರ್ಮಿಕರು ಅರೆಬೆತ್ತಲೆ ಪ್ರದರ್ಶನ ನಡೆಸಿ ಮಾಲಿಕನ ಬೆತ್ತಲೆ ಬುದ್ಧಿಯನ್ನು ಜನತೆ ಮುಂದೆ ಪ್ರದರ್ಶಿಸಲಿದ್ದಾರೆ.

ಫೆಬ್ರವರಿ 4 ರಿಂದ ರಾಜ್ಯಾದ್ಯಂತ ಸಿಐಟಿಯು ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದು, ಕರ್ನಾಟಕದ ದುಡಿಯುವ ಜನತೆ ಬೆಂಬಲವನ್ನು ಈ ಕಾರ್ಮಿಕರಿಗೆ ನೀಡಲು ನಿರ್ಧರಿಸಿದ್ದು ಈ ಮಾಲೀಕ ಕಾರ್ಮಿಕರ ನ್ಯಾಯಯುತ ಬೇಡಿಕೆ ಒಪ್ಪಿಕೊಳ್ಳುವಂತೆ ಮಾಡುವ ಶಪಥ ಗೈದಿದೆ.

ವರದಿ: **ಜಯರಾಂ**

ವಿಷ್ಣು ಟೆಕ್ಸ್‌ಟೈಲ್ಸ್ ಲಿ ನ ಆಡಳಿತವರ್ಗದವರು ಕಾರ್ಮಿಕರ ಮೇಲೆ ನಡೆಸುತ್ತಿರುವ ಗೂಂಡಾಗಿರಿಯನ್ನು ಖಂಡಿಸಿ ಒಂದು ದಿನದ ಮುಷ್ಕರ

ವಿಷ್ಣು ಟೆಕ್ಸ್‌ಟೈಲ್ಸ್ 'ಲಿ' ನಲ್ಲಿ ಕಳೆದ 15 ವರ್ಷಗಳಿಂದಲೂ ಸುಮಾರು 400 ಜನ ಕಾರ್ಮಿಕರು ಕೆಲಸ ಮಾಡಿಕೊಂಡು ಬರುತ್ತಿದ್ದು ತಮ್ಮ ಹಿತರಕ್ಷಣೆಗಾಗಿ ಸಂಘವನ್ನು ರಚಿಸಿಕೊಂಡಿರುವುದನ್ನು ಸಹಿಸದ ಆಡಳಿತವರ್ಗ ಸಂಘದ ಪದಾಧಿಕಾರಿಗಳನ್ನು ವಿನಾಕಾರಣ ವಜಾ ಮಾಡಿರುವುದನ್ನು ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯಿಸ್ ತೀವ್ರವಾಗಿ ಖಂಡಿಸಿದೆ.

ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳನ್ನು ಬಹಳ ಕಡಿಮೆ ಕೂಲಿಗೆ 8 ಗಂಟೆಗಿಂತಲೂ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಿದ್ದು 10 ರಿಂದ 12 ವರ್ಷದ ಬಾಲ ಕಾರ್ಮಿಕರನ್ನು ನೇಮಿಸಿಕೊಂಡು ಶೋಷಣೆ ಮಾಡುತ್ತಿದ್ದಾರೆ. ಮಹಿಳೆಯರನ್ನು ರಾತ್ರಿ ವೇಳೆಯಲ್ಲಿ ದುಡಿಸಿಕೊಳ್ಳುವುದು ಕಾನೂನಿನಲ್ಲಿ ಅಪರಾಧವಾಗಿದ್ದರೂ ಸಹ ಇಲ್ಲಿ ರಾತ್ರಿ ಪಾಳಿಯಲ್ಲಿ ಮಹಿಳೆಯನ್ನು ದುಡಿಸಿಕೊಳ್ಳುತ್ತಿದ್ದಾರೆ. ಬೇರೆ ರಾಜ್ಯದಿಂದ ಬಂದಿರುವ ಹೆಣ್ಣು ಮಕ್ಕಳು ಬರೀ ಊಟಕ್ಕಾಗಿ ದುಡಿಯುವ ಪರಿಸ್ಥಿತಿ ಬಂದಿದೆ ಎಂದು ಖಂಡಿಸಿದರು.

ಸಂಘ ಈ ಎಲ್ಲಾ ವಿಷಯಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿದಿದ್ದರೂ ಸಹ ಈ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ಆಪಾದಿಸಿದೆ.

ಕಾನೂನಿನಲ್ಲಿರುವ ಸಾಮಾನ್ಯ ಸೌಲಭ್ಯಕ್ಕಾಗಿ ಕಾರ್ಮಿಕರು ಹೋರಾಟಕ್ಕೆ ಇಳಿಯಬೇಕಾಗಿ ಬಂದಿದೆ. ಆಡಳಿತ ವರ್ಗದ ಈ ಕಾರ್ಮಿಕ ವಿರೋಧಿ ನೀತಿಯನ್ನು ಕೈಬಿಡುವಂತೆ ಒತ್ತಾಯಿಸಿ ಮತ್ತು ನಾಗರೀಕ ಸೌಲಭ್ಯಗಳನ್ನು ನೀಡುವುದಕ್ಕಾಗಿ ವಿನಾಕಾರಣ ವಜಾ ಮಾಡಿರುವ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳ ಬೇಕೆಂದು ಒತ್ತಾಯಿಸಿ ಜನವರಿ 17 ರಂದು ಒಂದು ದಿನದ ಮುಷ್ಕರವನ್ನು ನಡೆಸಲಾಯಿತು.

ಹಳದಿಪುರ ಹಂಚಿನ ಕಾರ್ಖಾನೆ ಮಾಲಿಕವರ್ಗದ ನೀತಿ ಖಂಡನೆ

ಹೊನ್ನಾವರ:- ತಾಲೂಕಿನ ಹಳದಿಪುರ ವಿಕಾಸ ಟೈಲ್ ನಲ್ಲಿ ಕಳೆದ ವರ್ಷದಿಂದ ಕಾರ್ಮಿಕರು ಸಂಘ ರಚಿಸಿಕೊಂಡು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಆಡಳಿತ ವರ್ಗಕ್ಕೆ ಬೇಡಿಕೆ ಪಟ್ಟಿ ಸಲ್ಲಿಸಲಾಗಿ ಅದನ್ನು ತಿರಸ್ಕರಿಸಿ ಅಲ್ಪಮತ ಸಂಘದೊಂದಿಗೆ ನಾಮಕಾವಸ್ತೆ ಮಾತುಕತೆ ನಾಟಕವಾಡಿ ಕಾರ್ಮಿಕವರ್ಗಕ್ಕೆ ಅನ್ಯಾಯ ಮಾಡಿದ್ದು ಮಾಲಿಕ ವರ್ಗದ ಮಲತಾಯಿ ಧೋರಣೆ ಎಂದು ಹಂಚು ಕಾರ್ಮಿಕರ ಸಂಘ ತೀವ್ರವಾಗಿ ಖಂಡಿಸುತ್ತಾ ನ್ಯಾಯಯುತವಾಗಿ ಬಹುಮತದ ಸದಸ್ಯರ ಸಂಘದೊಂದಿಗೆ ಮಾತುಕತೆ ನಡೆಸಬೇಕೆಂದು ಮತ್ತು ಕಾರ್ಮಿಕರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದೆ.

ಬೇರೆ ಕಾರ್ಖಾನೆಯಲ್ಲಿ ಕೊಡುತ್ತಿರುವ ಸಂಬಳ-ತುಟ್ಟಿಭತ್ಯೆ 15 ಶೇ. ಬೋನಸ್ ಇನ್ನಿತರ ಕನಿಷ್ಟ ಸೌಲಭ್ಯವನ್ನು ಕೊಡಬೇಕೆಂದು ಸಂಘ ಒತ್ತಾಯಿಸಿದೆ. ಇಲ್ಲದಿದ್ದಲ್ಲಿ ಮುಂಬರುವ ದಿನಗಳಲ್ಲಿ ಉಗ್ರ ಚಳುವಳಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸುತ್ತಾ ಕಾರ್ಮಿಕ ಇಲಾಖೆ ಮಧ್ಯಪ್ರವೇಶ ಮಾಡಿ ವಿವಾದ ಪರಿಹರಿಸಬೇಕಾಗಿ ಅಗ್ರಹಿಸಿದೆ.

ಹಾಸನ ಜಿಲ್ಲಾ ವಿದ್ಯಾರ್ಥಿಗಳ ಸಮ್ಮೇಳನ

ಶಿಕ್ಷಣದ ವ್ಯಾಪಾರೀಕರಣ ಶಿಕ್ಷಣದಲ್ಲಿ ವೇದ ಉಪನಿಷತ್, ಸಂಸತ ಹೇರಿಕೆ ಟ್ಯೂಶನ್ ಹಾವಳಿ ವಿರುದ್ಧ ಹಾಸನ ಜಿಲ್ಲಾ ವಿದ್ಯಾರ್ಥಿಗಳು ಭಾರತ ವಿದ್ಯಾರ್ಥಿ ಫೇಡರೇಷನ್‌ನ ಆಶ್ರಯದಲ್ಲಿ ಜನವರಿ 11 ರಂದು ಜಿಲ್ಲಾ ಸಮ್ಮೇಳನ ನಡೆಸಿದರು.

ವಿಮಾ ನೌಕರರ ಸಂಘದ ಮಂಜುನಾಥ ದ್ವಜಾರೋಹಣ ಮಾಡುವ ಮುಖಾಂತರ ಉದ್ಘಾಟನೆಗೊಂಡ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ.ನ ಜಿಲ್ಲಾ ಸಂಚಾಲಕ ಹೆಚ್.ಟಿ ಗುರುರಾಜ್ ಮಾತನಾಡಿದರು. ವಿದ್ಯಾರ್ಥಿಗಳ ನಡುವಿನ ಕೋಮುಭಾವನೆ ರಾಷ್ಟದ ಪ್ರಗತಿಗೆ ಮಾರಕ ವಾಗಲಿದೆ. ಇದರ ವಿರುದ್ಧ ವಿದ್ಯಾರ್ಥಿಗಳು ಪ್ರಗತಿ ಪರರು ಹೋರಾಡುವ ಅಗತ್ಯತೆ ಬಗ್ಗೆ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಕೆ.ಎನ್. ಉಮೇಶ್ ಮಾತನಾಡಿ ವಿದ್ಯೆಯನ್ನು ಮಠಾಧಿಪತಿಗಳಿಗೆ, ಉದ್ಯಮಿಗಳಿಗೆ, ಭ್ರಷ್ಟರಾಜಕಾರಣಿಗಳಿಗೆ ಮಾರಾಟ ಮಾಡಿ ಸರಸ್ವತಿ ಯನ್ನು ವೇಶ್ಯೆ ಗೊಳಿಸಿದ್ದಾರೆಂದರು. ಬಿಜಿವಿಎಸ್‌ನ ಧರ್ಮೇಶ ಉಪಸ್ಥಿತರಿದ್ದರು.

ಹೊಸ ಜಿಲ್ಲಾ ಸಮಿತಿ:

ಅಧ್ಯಕ್ಷೆ- ಸುನೀತಾ ಹೆಬ್ಬಾರ್, ಉಪಾಧ್ಯಕ್ಷರುಗಳು- ಮಮತ ಹೆಚ್.ಆರ್, ನವೀನ್ ಕುಮಾರ, ಬಿಂದು ಹಾಗೂ ಅರವಿಂದ, ಕಾರ್ಯದರ್ಶಿ- ಎನ್. ಆರ್. ಪ್ರಕಾಶ್, ಸಹಕಾರ್ಯದರ್ಶಿಗಳು:- ಶಶಿಕಲ ಭಾರತಿ ಹೆಬ್ಬಾರ್, ಯೋಗೇಶ್. ಬಿ. ಎಸ್ ಮತ್ತು ಪರಮೇಶ್



ಜನವರಿ 10 ರಂದು ಸಿಪಿಐ(ಎಂ) ನ ಬಳ್ಳಾರಿ ಜಿಲ್ಲಾ ಕಚೇರಿಯಲ್ಲಿ ಕಂಪ್ಯೂಟರನ್ನು ರಾಜ್ಯಕಾರ್ಯದರ್ಶಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಎಸ್.ಸೂರ್ಯನಾರಾಯಣ ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಕ್ಷದ ಇತರ ಹಿರಿಯ ಮುಖಂಡರಾದ ವಿ.ಜೆ.ಕೆ.ನಾಯರ್, ಪ್ರೊ. ಶೇಷಾದ್ರಿ, ಟಿ.ಜಿ.ವಿಠ್ಠಲ್, ಎನ್.ಪ್ರಸನ್ನ ಕುಮಾರ್ ಹಾಜರಿದ್ದರು.

ಕೃಷ್ಣ-ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿಯ ಸಭೆಯ ತೀರ್ಮಾನಕ್ಕೆ ರೈತರ ವಿರೋಧ

ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿಯ ಸಭೆ ಬೇಸಿಗೆ ಬೆಳೆಗೆ ಫೆಬ್ರವರಿ 28 ರ ವರೆಗೆ ನೀರು ಬಿಡಲು ತೀರ್ಮಾನಿಸಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ-ಶಹಾಪುರ ತಾಲೂಕು ಸಮಿತಿ ತೀವ್ರವಾಗಿ ಖಂಡಿಸಿದೆ.

ಮಳೆಗಾಲದ ಬೆಳೆ ಅತಿ ಮಳೆಯಿಂದ ಪೂರ್ತಿ ನಷ್ಟವಾಗಿ ರೈತರು ದಿವಾಳಿ ಎದ್ದು ಅತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಬೇಸಿಗೆ ಬೆಳೆಯಾದರೂ ಕೈಸೇರಿ ಬದುಕಲು ಪ್ರಯತ್ನ ಪಡಬೇಕೆಂಬ ಕಾರಣದಿಂದ ಸಾಲ ಸೂಲ ಮಾಡಿಕೊಂಡು ಹತ್ತಾರು ಸಾವಿರ ರೂಪಾಯಿ ಶೇಂಗಾ ಬೀಜ ಬಿತ್ತಿರುವಾಗ ಕೃಷಿ ಇಲಾಖೆಯ ಶಿಫಾರಸ್ಸಿನಂತೆ ಡಿಸೆಂಬರ್ 15 ರಿಂದ ಜನವರಿ 15 ರ ಒಳಗೆ ಶೇಂಗಾ ಬಿತ್ತಿದರೆ ಮಾತ್ರ ಬೆಳೆ ಬರಲು ಸಾಧ್ಯವೆಂಬ ವೈಜ್ಞಾನಿಕ ಸತ್ಯ ಇರುವಾಗ ನೀರಾವರಿ ಸಲಹಾ ಸಮಿತಿ ಸಭೆಯು ಇದ್ಯಾವದನ್ನು ಗಮನಿಸದೆ ಹಾಗೂ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಜನಪ್ರತಿನಿಧಿಗಳಾದ ಶಾಸಕರು, ಮಂತ್ರಿಗಳು, ಪಾರ್ಲಿಮೆಂಟ್ ಸದಸ್ಯರು ಹಾಗೂ ರೈತ ಪ್ರತಿನಿಧಿಗಳು ಕೂಡಾ ಯಾವುದೇ ಮುಂದಾಲೋಚನೆ ಮಾಡಿಲ್ಲ ಎಂದಿರುವ ಕರ್ನಾಟಕ ಪ್ರಾಂತ ರೈತ ಸಂಘದ ಶಹಾಪುರ ತಾಲ್ಲೂಕು ಸಮಿತಿ ಸಲಹಾ ಸಮಿತಿ ತೀರ್ಮಾನವನ್ನು ಹಿಂತೆಗೆದು ಕೊಂಡು 120 ದಿನದ ಶೇಂಗಾ ಬೆಳೆಗೆ ಕನಿಷ್ಟ ಎಪ್ರಿಲ್ 20 ರ ಒಳಗೆ ಕಾಲುವೆಯಲ್ಲಿ ನೀರು ಬಿಟ್ಟು ಬೆಳೆ ಕಾಪಾ ಡಬೇಕೆಂದು ಇಲ್ಲವಾದರೆ ಕರ ನಿರಾಕರಣೆ, ಶಾಸಕರುಗಳಿಗೆ, ಮಂತ್ರಿ ಗಳಿಗೆ, ಅಧಿಕಾರಿ ಗಳಿಗೆ ಹಾಗೂ ನೀರಾವರಿ ಸಲಹಾ ಸಮಿತಿಯ ಸದಸ್ಯರಿಗೆ ಘೇರಾವು, ಮನೆ ಮುತ್ತಿಗೆ ಹಾಕಬೇಕಾಗುತ್ತದೆಂದು ಎಚ್ಚರಿಸಿದೆ.

ಡಿ.ವೈ.ಎಫ್.ಐ. ಹೊಸಪೇಟೆ ತಾಲ್ಲೂಕು ಸಮ್ಮೇಳನ

ಹೊಸ ಪೇಟೆ ಜ.17: ಇತ್ತೀಚಿನ ದಿನಗಳಲ್ಲಿ ಜಾತಿವಾರು ಸಂಘಟನೆಗಳು ಹೆಚ್ಚೆಚ್ಚು ಕ್ರಿಯಾಶೀಲವಾಗುತ್ತಿರುವುದು ಹಾಗೂ ಅಂತಹ ಸಂಘಟನೆಗಳಲ್ಲಿ ಯುವಜನರು ವಿಶೇಷವಾಗಿ ಭಾಗವಹಿಸಿಸುತ್ತಿರುವುದು ಪ್ರಜಾಸತ್ತಾತ್ಮಕ ಚಳುವಳಿಗೆ ಅತ್ಯಂತ ಅಪಾಯಕಾರಿ ಸಂಗತಿಯಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹೊಸಪೇಟೆ ತಾಲೂಕು ಅಧ್ಯಕ್ಷರಾದ ಎಂ. ಜಂಬಯ್ಯ ನಾಯಕ್ ಅಭಿಪ್ರಾಯಪಟ್ಟರು. ಡಿ.ವೈ.ಎಫ್.ಐ.ನ 5ನೇ ತಾಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಯುವಜನತೆಯಲ್ಲಿ ಅಸಮಧಾನ ಹಾಗೂ ಜಿಗುಪ್ಸೆ ಹೆಚ್ಚಾಗಿದ್ದು ಇದನ್ನೇ ಕೇಂದ್ರವಾಗಿಟ್ಟುಕೊಂಡು ಅನೇಕ ಜಾತಿ ಸಂಘಟನೆಗಳು ಯುವಜನತೆಯನ್ನು ದಾರಿತಪ್ಪಿಸುತ್ತಿರುವುದು ಅತ್ಯಂತ ಕಳವಳಕಾರಿಯಾಗಿದೆ. ಆದ್ದರಿಂದ ಪ್ರಜಾಸತ್ತಾತ್ಮಕ ಚಳವಳಿಯನ್ನು ಕಟ್ಟಿ ಬೆಳೆಸುವ ಡಿ.ವೈ.ಎಫ್.ಐ. ನಂತಹ ಸಂಘಟನೆಗಳು ಮಾತ್ರ ಯುವಜನರ ಇಂತಹ ಸಮಸ್ಯೆಗಳಿಗೆ ಸಮರ್ಪಕ ಉತ್ತರ ನೀಡಲು ಸಾಧ್ಯ ಎಂದರು.

ಸಮ್ಮೇಳನದ ಮುಖ್ಯ ಅತಿಥಿಯಾದ ಡಿ.ವೈ.ಎಫ್.ಐ.ನ ಜಿಲ್ಲಾಧ್ಯಕ್ಷರಾದ ಬಿ. ಗಣೇಶ ಮಾತನಾಡಿ ಜನಪರ ಚಳುವಳಿಯನ್ನು ಸಂಘಟಿಸುವಲ್ಲಿ ಡಿ.ವೈ.ಎಫ್.ಐ. ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದೆಯಲ್ಲದೇ ನಮ್ಮ ಸಂಘಟನೆಯ ಚರಿತ್ರೆ ಇದನ್ನು ಸಾಬೀತು ಪಡಿಸಿದೆ ಎಂದರು.

ಮತ್ತೊಬ್ಬ ಮುಖ್ಯ ಅತಿಥಿಯಾದ ಕಾಂ|| ಎಲ್. ಮಂಜುನಾಥ ಅಂತರ್ರಾಷ್ಟ್ರೀಯ ಸನ್ನಿವೇಶಗಳ ಕುರಿತು ಮಾತನಾಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ಧ್ವಜಾರೋಹಣ ಮಾಡಿದ ಎಸ್.ಅಶೋಕ ನಡೆಸಿಕೊಟ್ಟರು.

ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಸಿ.ಐ.ಟಿ.ಯುನ ಜಿಲ್ಲಾ ಮುಖಂಡರಾದ ವೆಂಕಟರಮಣ ಡಿ.ವೈ.ಎಫ್.ಐ. ಕಳೆದ ಹಲವಾರು ವರ್ಷಗಳಿಂದ ಹೊಸಪೇಟೆಯಲ್ಲಿ ಅನೇಕ ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕಾಗಿ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದೆ ಎಂದರು.

ಮುಂಬರುವ ದಿನಗಳಲ್ಲಿ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸಲು ಹಾಗೂ ವ್ಯಾಪಕವಾಗಿ ವಿಸ್ತರಿಸಲು ಸಾಧ್ಯವಾಗುವಂತೆ, ಡಿ.ವೈ.ಎಫ್.ಐ.ನ ತಾಲೂಕು ಸಮಿತಿಯನ್ನು ಸಮ್ಮೇಳನವು ಆಯ್ಕೆಮಾಡಿತು.

ನೂತನ ಸಮಿತಿಯ ಅಧ್ಯಕ್ಷರಾಗಿ ಎ. ಕರುಣಾನಿಧಿ, ಉಪಾಧ್ಯಕ್ಷರಾಗಿ ನೀಲಕಂಠ, ಎಸ್. ಅಶೋಕ, ಕಾರ್ಯದರ್ಶಿಯಾಗಿ ಜೆ.ಯು. ರಮೇಶ್ ಆಯ್ಕೆಯಾದರು. ಹಾಗೂ 16 ಜನ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಕಾರ್ಯಕ್ರಮ ನಿರ್ವಹಿಸಿದ ಎ. ಕರುಣಾನಿಧಿ ಕೊನೆಯಲ್ಲಿ ವಂದಿಸಿದರು.

ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಏತಕ್ಕೆ?

ಕಾರ್ಮಿಕ ಕಾನೂನುಗಳನ್ನು ಸಡಿಲಿಸಿ ಮಾಲಕರ ಪರವಾಗಿ ಬದಲಾಯಿಸಲು ಎನ್ನುತ್ತಾರೆ ಸಿಐಟಿಯು ಮುಖಂಡ ಡಬ್ಲ್ಯು.ಆರ್.ವರದರಾಜನ್. ಅಧಿಕಾರಕ್ಕೆ ಬಂದ ನಂತರದ ಕಳೆದ ಒಂಭತ್ತು ತಿಂಗಳ ಅವಧಿಯಲ್ಲಿ ಒಂದಾದರೂ ಕಾರ್ಮಿಕರ ಪರವಾದ ಕ್ರಮಕೈಗೊಳ್ಳದ ವಾಜಪೇಯಿ ಸರಕಾರ ಈಗ ಕಾರ್ಮಿಕರು ಹೋರಾಟಗಳಿಂದ ಗಳಿಸಿದ ರಕ್ಷಣೆಗಳನ್ನು ಕಿತ್ತುಕೊಳ್ಳಲು ಈ ಆಯೋಗ ರಚಿಸಿದೆ. ಹೇಗೆ? ಈ ಲೇಖನ ಓದಿ

ಜನವರಿ 11 ರಂದು ಕೇಂದ್ರ ಕಾರ್ಮಿಕ ಮಂತ್ರಿ ಡಾ. ಸತ್ಯ ನಾರಾಯಣ ಜತಿಯಾ ಇದ್ದಕ್ಕಿದ್ದಂತೆ ಪ್ರಕಟಿಸಿದರು - ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ರಚಿಸಲಾಗುವುದು ಎಂದು. ಒಬ್ಬ ಅಧ್ಯಕ್ಷ, ಇಬ್ಬರು ಪೂರ್ಣಕಾಲದ ಸದಸ್ಯರು, ಏಳು ಅರೆಕಾಲಿಕ ಸದಸ್ಯರಿರುವ ಈ ಆಯೋಗಕ್ಕೆ ಎರಡು ವರ್ಷದ ಅವಧಿ ನೀಡಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಪರಿಸರದಲ್ಲಿ ತೀವ್ರ ಬದಲಾವಣೆಗಳಾಗಿವೆ, ಆದರಿಂದ ಶ್ರಮ ಮಾರುಕಟ್ಟೆಯಲ್ಲೂ ತೀವ್ರ ಬದಲಾವಣೆಗಳಾಗಿವೆ. ಈ ಹಿನ್ನೆಲೆಯಲ್ಲಿ ಈ ಆಯೋಗದ ಮುಖ್ಯ ಕೆಲಸವೆಂದರೆ "ಈಗಿರುವ ಕಾರ್ಮಿಕ ಕಾನೂನುಗಳನ್ನು ಭಾರತದ ಆರ್ಥಿಕವನ್ನು ತೆರೆಯುವ ಮತ್ತು ಜಾಗತೀಕರಣದ ಸಂದರ್ಭದಲ್ಲಿ ತರ್ಕಸಂಗತಗೊಳಿಸುವುದು"

ಈ ಬಿಜೆಪಿ ನೇತೃತ್ವದ ಸರಕಾರ ಮಾಲಕರ ಒತ್ತಡದಿಂದ ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸದೆಯೇ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ತರುತ್ತಲಿದೆ ಎಂದು ಸಿಐಟಿಯು ಕಾರ್ಮಿಕ ವರ್ಗವನ್ನು ಎಚ್ಚರಿಸಿತ್ತು. ಈಗ ಈ ಆಯೋಗದ ರಚನೆಯನ್ನು ಕಾರ್ಮಿಕ ಸಂಘಗಳೊಡನೆ ಯಾವುದೇ ಚರ್ಚೆ ನಡೆಸದೆ ಏಕಪಕ್ಷೀಯವಾಗಿ ಪ್ರಕಟಿಸಲಾಗಿದೆ.

ಎಂತಹ ಬದಲಾವಣೆ?

ಕಾರ್ಮಿಕ ಕಾನೂನುಗಳಲ್ಲಿ ಎಂತಹ ಬದಲಾವಣೆ ಸರಕಾರ ಬಯಸುತ್ತದೆ ಎಂಬುದು ಈಗಾಗಲೇ ಬಯಲಾಗಿದೆ. ಕೈಗಾರಿಕಾ ವಿವಾದ ಕಾನೂನು, ಕೂಲಿ ಪಾವತಿ ಕಾನೂನು, ಕಾಂಟ್ರ್ಯಾಕ್ಟ್ ಕಾರ್ಮಿಕರ ಕಾನೂನು, ಮತ್ತಿತರ ಹಲವಾರು ಕಾನೂನುಗಳನ್ನು ಈ ಸರಕಾರ ಬದಲಿಸಬಯಸುತ್ತದೆ.

ನೌಕರರ ರಿಟ್ರೆಂಚ್‌ಮೆಂಟನ್ನು ಸುಲಭಗೊಳಿಸುವುದು ದುಡಿಮೆಯ ಅವಧಿಯನ್ನು 8 ರಿಂದ 12 ಗಂಟೆಗೇರಿಸುವುದು, ಎಲ್ಲೆಡೆ ಕಾಂಟ್ರ್ಯಾಕ್ಟ್ ಕಾರ್ಮಿಕರ ಬಳಕೆಯನ್ನು ಕಾನೂನುಬದ್ಧಗೊಳಿಸುವುದು ಹಾಗೂ ಕಾರ್ಮಿಕ ಸಂಘಗಳ ರಿಜಿಸ್ಟ್ರೇಶನ್ ಮತ್ತು ಮಾನ್ಯತೆಗೆ ಸಂಬಂಧಪಟ್ಟ ಕಾನೂನುಗಳನ್ನು ಇನ್ನಷ್ಟು ಕಠಿಣಗೊಳಿಸುವುದು - ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿರುವುದು ಸರಕಾರದ ಹೇಳಿಕೆಗಳಿಂದಲೇ ಸ್ಪಷ್ಟವಾಗಿದೆ. ಈಗಿರುವ ಕಾರ್ಮಿಕ ಕಾನೂನುಗಳು 'ಹಳಸಲಾಗಿವೆ'ಯಂತೆ. ಇದರಿಂದ ಗಡುಸಾಗಿಬಿಟ್ಟಿರುವ ಶ್ರಮ ಮಾರುಕಟ್ಟೆಯನ್ನು 'ಮೆದು' ಗೊಳಿಸುವುದು ಸರಕಾರದ ಉದ್ದೇಶವಂತೆ - ಅಂದರೆ ಮಾಲಕರು ಸುಲಭವಾಗಿ ಅದನ್ನು ಮಣಿಸಲು ಅವಕಾಶವಾಗುವಂತೆ!

ಇದಲ್ಲದೆ ಇಲೆಕ್ಟ್ರಾನಿಕ್ ಇಲಾಖೆ ಮಹಿಳಾ ನೌಕರರ ಕೆಲಸದ ಅವಧಿ ಹೆಚ್ಚಿಸಬೇಕು, ಅವರನ್ನು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿಕೊಳ್ಳಬಾರದೆಂಬ ನಿಯಮವನ್ನು ತೆಗೆದುಹಾಕಬೇಕು ಎಂದು ಸೂಚಿಸಿದೆ. ವಾಣಿಜ್ಯ ಇಲಾಖೆ ರಫ್ತು ಸಂಸ್ಕರಣ ವಲಯಗಳಲ್ಲಿನ ಘಟಕಗಳಿಗೆ ಕಾರ್ಮಿಕ ಕಾನೂನುಗಳಿಂದ ಸಂಪೂರ್ಣ ವಿನಾಯ್ತಿ ನೀಡಬೇಕೆಂದು ಸೂಚಿಸಿದೆ. ಮಾಹಿತಿ ತಂತ್ರಜ್ಞಾನ ತಂಡ ದೇಶದ ಇಲೆಕ್ಟ್ರಾನಿಕ್ ಘಟಕಗಳು 12 ಗಂಟೆಯ ಪಾಳಿ ನಡೆಸಲು ಅವಕಾಶ ಮಾಡಿಕೊಡಬೇಕು ಎಂದಿದೆ. ಅಷ್ಟೇ ಅಲ್ಲ, 700 ದಿನಗಳ ಕೆಲಸ ಮಾಡಿದ ಮೇಲೆಯೇ ನೌಕರರಿಗೆ ಖಾಯಂ ನೌಕರರ ಸ್ಥಾನಮಾನ ನೀಡಬೇಕು ಎಂದೂ ಸೂಚಿಸಲಾಗಿದೆ.

ಲೇಬರ್ ಕೋರ್ಟುಗಳು ತೆಗೆದುಕೊಳ್ಳುವ ದೂರುಗಳ ಪ್ರಮಾಣಕ್ಕೂ ಮಿತಿ ಹಾಕಬೇಕೆಂದು ಸರಕಾರದ ಯೋಚನೆಯಿದೆ. 'ಕೇವಲ ನಿರ್ದಿಷ್ಟ ದೂರು'ಗಳನ್ನಷ್ಟೇ ಲೇಬರ್ ಕೋರ್ಟುಗಳು ಸ್ವೀಕರಿಸುವಂತೆ ನಿಯಮಾವಳಿ ರೂಪಿಸಬೇಕೆಂಬ ಪ್ರಸ್ತಾಪವಿದೆ. ಇನ್ನೊಂದು ಸೂಚನೆಯೆಂದರೆ 'ಅಶಿಸ್ತು ಮತ್ತು ನಿಕೃಷ್ಟ ಕೆಲಸ ನಿರ್ವಹಣೆ'ಯ ಆಧಾರದ ಮೇಲೆ ನೌಕರರನ್ನು 'ಸುಲಭ'ವಾಗಿ ವಜಾ ಮಾಡಲು ಅವಕಾಶ ಮಾಡಿಕೊಡಬೇಕು ಎಂದು.

ಬೋನಸ್ ಕಾನೂನನ್ನು ತಿದ್ದುಪಡಿ ಮಾಡಿ ಅದರಲ್ಲಿರುವ ಮಿತಿಗಳನ್ನು ತೆಗೆಯಬೇಕು ಎಂಬುದು ಎಲ್ಲಾ ಕಾರ್ಮಿಕ ಸಂಘಗಳು ಒಟ್ಟಾಗಿ ಬಹಳ ದಿನಗಳಿಂದ ಇಟ್ಟಿರುವ ಬೇಡಿಕೆ. ಅದನ್ನು ಒಪ್ಪದ ಸರಕಾರ ಅದರ ಬದಲು ಬೋನಸ್ ಕಾನೂನನ್ನು ಆಮೂಲಾಗ್ರವಾಗಿ ಬದಲಿಸಿ ಅದನ್ನು ಉತ್ಪಾದಕತೆಯೊಂದಿಗೆ ಜೋಡಿಸಿ 'ನಷ್ಟದಲ್ಲಿರುವ ಉದ್ದಿಮೆಗಳು' ಬೋನಸ್ ಕಕ್ಕಬೇಕಾದ ಬಂಧನದಿಂದ ಪರಿಹಾರ ನೀಡಬೇಕೆಂದು ಹೇಳುತ್ತಿದೆ. ಇದರರ್ಥ ಕನಿಷ್ಟ ಬೋನಸ್ಸಿನ ಪರಿಕಲ್ಪನೆಗೆ ತಿಲಾಂಜಲಿ ಕೊಟ್ಟಂತೆ.

"ಕೆಲವು ಕೆಲಸಗಳನ್ನು ಹೊರಗಿನಿಂದ ಮಾಡಿಸಿಕೊಳ್ಳುವುದು ಈಗ ಅಂತರ್‌ರಾಷ್ಟ್ರೀಯ ಪ್ರವೃತ್ತಿ. ಆದಕ್ಕೆ ಇಲ್ಲಿಯೂ ಅವಕಾಶ ನೀಡಬೇಕು" ಎಂದು ಕೆಲವು ಉದ್ದಿಮೆಗಾರರ ಒತ್ತಾಯವನ್ನು ಕಾರ್ಮಿಕ ಇಲಾಖೆ ಒಪ್ಪಿಕೊಂಡಿದೆಯಂತೆ. ಇದು ಸುಪ್ರೀಂ ಕೋರ್ಟ್ ಕಾಂಟ್ರ್ಯಾಕ್ಟ್ ಶ್ರಮಿಕರ ಬಗ್ಗೆ ನೀಡಿದ ತೀರ್ಪನ್ನು ಬದಿಗೊತ್ತುವ ಕ್ರಮವಲ್ಲದೆ ಬೇರೇನೂ ಅಲ್ಲ. ಸುಪ್ರೀಂ ಕೋರ್ಟ್ ಏರ್ ಇಂಡಿಯಾ ಕೇಸಿನಲ್ಲಿ ಕಾಂಟ್ರ್ಯಾಕ್ಟ್ ಕಾರ್ಮಿಕರನ್ನು ಕುರಿತಂತೆ ಮಾಲಕರ ಮೇಲೆ ಕೆಲವು ಜವಾಬ್ದಾರಿ ಹಾಕಿತ್ತು. ಕಾರ್ಮಿಕವರ್ಗವನ್ನು ಮೂಲ ಹಾಗೂ ಅಂಚಿನಲ್ಲಿರುವ ಕಾರ್ಮಿಕರೆಂದು ವಿಭಜಿಸಿ ಕೆಲವೇ ಮೂಲ ಕಾರ್ಮಿಕರು, ಬಹುಪಾಲು ಅಂಚಿನಲ್ಲಿರುವ ಅಂದರೆ ಅನಿಯಮಿತ ಕಾರ್ಮಿಕರನ್ನು ದುಡಿಸಿಕೊಳ್ಳುವ ಕ್ರಮವನ್ನು ಕಾನೂನು ಬದ್ಧಗೊಳಿಸುವ ಪ್ರಯತ್ನ ಇದು.

ಮಾಲಕ-ಪರ ಪಕ್ಷಪಾತ

ಇವನ್ನೆಲ್ಲಾ ಕಾರ್ಮಿಕ ಆಂದೋಲನದ ಬೆನ್ನ ಹಿಂದೆಯೇ ಮಾಡಲಾಗುತ್ತಿದೆ ಎನ್ನುವುದು ಬಿಜೆಪಿ ನೇತೃತ್ವದ ಸರಕಾರದ ಕಾರ್ಮಿಕ-ವಿರೋಧಿ ನಿಲುವಿಗೆ ಸಾಕ್ಷಿ. ಕಳೆದ ಒಂಭತ್ತು ತಿಂಗಳಲ್ಲಿ ಅದು ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನವನ್ನು ಕರೆಯುವ ಗೋಜಿಗೂ ಹೋಗಿಲ್ಲ. 1998 ರಲ್ಲಿ ಸ್ಥಾಯೀ ಕಾರ್ಮಿಕ ಸಮಿತಿಯ ಸಭೆ ಕರೆಯಲಾಗಿತ್ತು. ಕೊನೆಗೆ ಅದನ್ನೂ ಇದ್ದಕ್ಕಿದ್ದಂತೆ ಮುಂದೂಡಲಾಯಿತು.

ಇನ್ನೊಂದೆಡೆ ಇದೇ ಸರಕಾರ 'ರಾಷ್ಟ್ರೀಯ ನವೀಕರಣ ನಿಧಿ' (ಎನ್. ಆರ್. ಎಫ್) ನಿಲ್ಲಿಸಲಾಗುವುದು ಎಂದು ಭಯವೇನೂ ಬೇಡ ಎಂದು ಮಾಲಕರಿಗೆ ಭರವಸೆ ನೀಡಿದೆ. ವಾಸ್ತವವಾಗಿ ಈ ಎನ್.ಆರ್.ಎಫ್.ನ 90% ಭಾಗ ಕಾರ್ಮಿಕರನ್ನು ವಿ.ಆರ್. ಎಸ್.(ಸ್ವಯಂ ನಿವೃತ್ತಿ ಯೋಜನೆ) ಹೆಸರಿನಲ್ಲಿ ಕೆಲಸದಿಂದ ರಿಟ್ರೆಂಚ್ ಮಾಡಲಿಕ್ಕೆ ಬಳಕೆಯಾಗಿವೆ.

ಈಗ ಸರಕಾರ ಮಾಲಕರ ಬೇಡಿಕೆಗಳನ್ನು ಈಡೇರಿಸಲು ಈ ರಾಷ್ಟ್ರೀಯ ಆಯೋಗ ರಚನೆಯ ಹಾದಿ ಹಿಡಿದಿದೆ.

ಉದ್ದಿಮೆಯ ಪ್ರಗತಿಯಲ್ಲಿ ಕಾರ್ಮಿಕರು ಸಾಮಾಜಿಕ ಭಾಗಿದಾರರು ಎಂಬ ವಿಚಾರದಿಂದ ತ್ರಿಪಕ್ಷೀಯ ಕಾರ್ಮಿಕ ವೇದಿಕೆಗಳು ರಚನೆ ಗೊಂಡಿದ್ದವು. ಈಗ ಸರಕಾರ ಅವನ್ನೆಲ್ಲಾ ಬದಿಗೊತ್ತಿ, ಕಾರ್ಮಿಕ ಸಂಘಗಳನ್ನು ಮೂಲೆಗೊತ್ತಿ ಈ ವಿಚಾರಕ್ಕೆ ಅಪಚಾರ ಎಸಗುತ್ತಿವೆ.

ಕಳೆದ ಎಂಟು ತಿಂಗಳಲ್ಲಿ ಈ ಸರಕಾರ ಒಂದೇ ಒಂದು ಕಾರ್ಮಿಕರ ಪರವಾದ ಕ್ರಮ ಕೈಗೊಂಡಿಲ್ಲ. ಬೋನಸ್ ಕಾನೂನಿನ ತಿದ್ದುಪಡಿ ಬಗ್ಗೆ ಕಾರ್ಮಿಕ ಆಯೋಗದ ಐಕ್ಯ ಒತ್ತಾಯವನ್ನು ಅದು ಸ್ವೀಕರಿಸಿಲ್ಲ. ದೀರ್ಘಕಾಲದಿಂದ ಕಾಯುತ್ತಿರುವ ಕೃಷಿ ಕೂಲಿಕಾರರ ಕಾನೂನು ಭೂಮಾಲಕರ ಒತ್ತಡದಿಂದಾಗಿ ಈಗಲೂ ಪಕ್ಕಕ್ಕೆ ಸರಿದಿದೆ. ಆಡಳಿತದಲ್ಲಿ ಕಾರ್ಮಿಕರ ಪಾತ್ರ ಕುರಿತಂತೆ ಮಸೂದೆಯೊಂದು ಒಂಭತ್ತು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಈ ಸರಕಾರ ಅದನ್ನು ಕೈಗೆತ್ತಿಕೊಳ್ಳುವ ಮುತುವರ್ಜಿ ತೋರಿಸಿಲ್ಲ. ಆದರೆ ಮಾಲಕರಿಗೆ ಅನುಕೂಲ ಮಾಡಿಕೊಡಲು, ಕಾರ್ಮಿಕ ವರ್ಗದ ಹಕ್ಕುಗಳನ್ನು ಕಸಿದುಕೊಳ್ಳಲು ಮತ್ತು ಶ್ರಮ ಮಾರುಕಟ್ಟೆಯಲ್ಲಿ ಮೆದುತನ ಇರಬೇಕು ಎನ್ನುತ್ತಾ ಕಾರ್ಮಿಕರ ಮೇಲೆ ಗುಲಾಮಿಕೆ ಹೇರಲು ಕಾರ್ಮಿಕ ಕಾನೂನುಗಳ ಆಮೂಲಾಗ್ರ ಬದಲಾವಣೆಗೆ ಮಾತ್ರ ಅದು ಮುಂದಾಗಿದೆ.

ಮೊದಲ ರಾಷ್ಟ್ರೀಯ ಕಾರ್ಮಿಕ ಆಯೋಗ ನೇಮಿಸಿ 30 ವರ್ಷಗಳಾದವು. ಅವನ್ನು ಬದಲಿಸಬೇಕು ಎಂದು ಗೋಳಿಡುವ ಈ ಸರಕಾರ ಆ ಆಯೋಗದ ಹಲವಾರು ಶಿಫಾರಸುಗಳು 1969 ರಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿವೆಯೇ, ಹಿಂದಿನ ಆಯೋಗದ ಶಿಫಾರಸುಗಳನ್ನು ಪರಿಶೀಲಿಸಿರುವ ಗೋಜಿಗೇ ಹೋಗದೆ ಈ ಎರಡನೇ ಆಯೋಗದ ವಿಚಾರ ಏಕೆ ಬಂತು ಎಂಬುದನ್ನು ಮರೆಮಾಚುತ್ತಿದೆ. ಇದು ಉದ್ದೇಶಪೂರ್ವಕವಾದ ಯತ್ನ.

ಕಾಲ ಮಿಂಚಿಲ್ಲ

ಈಗಲೂ ಕಾಲ ಮಿಂಚಿಲ್ಲ. ಎರಡನೇ ಆಯೋಗದಲ್ಲಿ ಯಾರ್ಯಾರು ಇರಬೇಕು, ಅದು ಏನನ್ನೆಲ್ಲಾ ಪರಿಶೀಲಿಸಬೇಕು ಎಂಬ ಬಗ್ಗೆ ಕಾರ್ಮಿಕ ಸಂಘಗಳೊಡನೆ ಹೊಸದಾಗಿ ಸಮಾಲೋಚನೆಯನ್ನು ಸರಕಾರ ಆರಂಭಿಸಬೇಕು ಎಂದು ಸಿಐಟಿಯು ಹೇಳಿದೆ. ರಾಷ್ಟ್ರೀಯ ಆಯೋಗವನ್ನು ರಚಿಸುವ ನಿಟ್ಟಿನಲ್ಲಿ ಸರಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಬಿಟ್ಟರೆ ಈ ಆಯೋಗ, ಐಎಂಎಫ್-ವಿಶ್ವಬ್ಯಾಂಕ್ ಆದೇಶಗಳಿಗನು ಗುಣವಾಗಿ 'ಸುಧಾರಣೆ'ಗಳನ್ನು ಒಪ್ಪುವಂತಹವರನ್ನೇ ಆಯೋಗದ ಸದಸ್ಯರಾಗಿ ನೇಮಿಸಬಹುದು.

ಮಾಲಕರಿಗೆ, ಬಂಡವಾಳಶಾಹಿ ಪತ್ರಿಕೆಗಳಿಗೆ ಸರಕಾರದ ಈ ಪ್ರಕಟಣೆ ಬಹಳ ಹರ್ಷ ತಂದಿದೆ. ಅವರು ಅಸಂಘಟಿತ ವಲಯದ ಬಗ್ಗೆ ಮೊಸಳೆ ಕಣ್ಣೀರು ಹರಿಸುತ್ತಿದ್ದಾರೆ. ಅಸಂಘಟಿತ ಕಾರ್ಮಿಕರ ರಕ್ಷಣೆಗೆ ಒಂದು ಸಮಗ್ರ ಶಾಸನ ಸೂಚಿಸಲು ಈ ಆಯೋಗಕ್ಕೆ ಹೇಳಲಾಗುತ್ತದೆ ಎಂದು ಸರಕಾರ ಹೇಳುತ್ತಿದೆ. ಇದು ಈಗ ಇರುವ ರಕ್ಷಣೆಯನ್ನು ಕೂಡಾ ಕಿತ್ತುಕೊಳ್ಳಲು ಒಂದು ನೆಪ. ಯಾವುದೇ ಸಂಘಕ್ಕೆ ಸೇರಿದ್ದರೂ ಕಾರ್ಮಿಕ ಈ ಬಗ್ಗೆ ಎಚ್ಚರದಿಂದಿರಬೇಕು.

ತಾನು 'ಹುಲಿ'ಯಾಗಿದ್ದ ದಿನಗಳಲ್ಲಿ ಈ ರೀತಿ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಿ ಶ್ರಮ ಮಾರುಕಟ್ಟೆಯನ್ನು 'ಉದಾರ' ಗೊಳಿಸಿದ ಪೂರ್ವ ಏಶ್ಯಾದ ದೇಶಗಳಲ್ಲಿನ ಬಿಕ್ಕಟ್ಟಿನಿಂದ ಅಲ್ಲಿಯ ಕಾರ್ಮಿಕ ವರ್ಗದ ಪರಿಸ್ಥಿತಿ ಏನಾಗಿದೆ ಎಂಬುದನ್ನು ಎಲ್ಲರೂ ಕಾಣಬಹುದಾಗಿದೆ. ಅಲ್ಲಿ ಈಗ ಕಾರ್ಮಿಕ ಸಂಘಗಳು ಕಾರ್ಮಿಕ ಕಾನೂನುಗಳ ಸಡಿಲಿಕೆಯನ್ನು ವಿರೋಧಿಸುತ್ತಿದ್ದಾರೆ. ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗೆ ತಿದ್ದುಪಡಿ ತರಲು ಒತ್ತಾಯಿಸುತ್ತಿದ್ದಾರೆ. ಈ ದೇಶಗಳ ಕಾರ್ಮಿಕರ ಅನುಭವದಿಂದ ಪಾಠ ಕಲಿತು ಸರಕಾರದ ಈ ಪ್ರಯತ್ನಗಳನ್ನು ಒಗ್ಗಟ್ಟಿನಿಂದ ಹಿಮ್ಮೆಟ್ಟಿಸಬೇಕು. ○

"ಈಗ ಕಾರ್ಮಿಕ ಕಾನೂನುಗಳ ಮೂಲಕ ಜಾಗತೀಕರಣದ ಪ್ರಯತ್ನ"

ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ನೇಮಕದ ಪ್ರಕಟಣೆಯ ಬಗ್ಗೆ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರೂ ಆದ ಡಾ. ಎಂ.ಕೆ.ಪಂಧೆಯವರ ಪ್ರತಿಕ್ರಿಯೆ ಇದು. 'ಡೆಕನ್ ಹೆರಾಲ್ಡ್' ಪತ್ರಿಕೆ ಅವರೊಡನೆ ನಡೆಸಿದ ಸಂದರ್ಶನದ ಕೆಲವು ಭಾಗಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ಸಂಗ್ರಹಿಸಿ ಕೊಡಲಾಗಿದೆ.

● *ಸಿಐಟಿಯು ದೇಶದ ಒಂದು ಪ್ರಮುಖ ಕಾರ್ಮಿಕ ಸಂಘಟನೆ. ರಾಷ್ಟ್ರೀಯ ಕಾರ್ಮಿಕ ಆಯೋಗದ ರಚನೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅದರ ಕಾರ್ಯವ್ಯಾಪ್ತಿ ಬಗ್ಗೆ ನಿಮಗೆ ಸಂತೋಷವೇ?*

ಡಾ. ಪಂಧೆ: ಸರಕಾರ ಕಾರ್ಮಿಕ ಸಂಘಗಳೊಡನೆ ಚರ್ಚಿಸದೆಯೇ ಆಯೋಗದ ಕಾರ್ಯವ್ಯಾಪ್ತಿಯನ್ನು ನಿರ್ಧರಿಸಿದೆ. ಆದ್ದರಿಂದ ಕಾರ್ಮಿಕ ಸಂಘಗಳೊಡನೆ ಕಾರ್ಮಿಕ ಸ್ಥಾಯೀ ಸಮಿತಿಯಲ್ಲಿ ಒಂದು ಚರ್ಚೆಯ ನಂತರವೇ ಇದನ್ನು ಅಂತಿಮಗೊಳಿಸಬೇಕು ಎಂದು ಸಿಐಟಿಯು ಕಾರ್ಮಿಕ ಮಂತ್ರಿಗಳಿಗೆ ಸೂಚಿಸಿತ್ತು. ಈಗ ಈ ಸಭೆ ಫೆಬ್ರವರಿ 6 ರಂದು ನಡೆಯಲಿದೆ.

● *ನಿಮ್ಮ ಪ್ರಕಾರ ಈ ಕಾರ್ಯವ್ಯಾಪ್ತಿಯಲ್ಲಿನ ಲೋಪ-ದೋಷಗಳೇನು?*

ಡಾ. ಪಂಧೆ: ಪ್ರಮುಖ ಲೋಪವೆಂದರೆ ಕಾರ್ಮಿಕ ಕಾನೂನುಗಳ ಮೂಲಕ ಜಾಗತೀಕರಣ ತರಲು ಪ್ರಯತ್ನಿಸಲಾಗುತ್ತಿದೆ. ಈ ಆಯೋಗ ಪರಿಶೀಲಿಸುವ ಕಾನೂನುಗಳನ್ನು ನೋಡಿದರೆ ಅವು ಆರೋಗ್ಯ, ಕೂಲಿ ಮತ್ತು ವೇತನದ ನಡುವಿನ ಸಂಬಂಧ, ಆಡಳಿತದಲ್ಲಿ ಕಾರ್ಮಿಕರ ಪಾತ್ರ ಮತ್ತಿತರ ಪ್ರಶ್ನೆಗಳ ಬಗ್ಗೆ ಕಣ್ಣೋಟ ರೂಪಿಸಲೆಂದು ಅಲ್ಲ ಎಂಬುದು ಕಾಣುತ್ತದೆ. ಮಹಿಳೆಯರ ನೌಕರಿ, ಅವರ ಕೆಲಸದ ಪರಿಸ್ಥಿತಿ, ಕಾರ್ಮಿಕ ಸಂಘ ಮತ್ತು ಆರ್ಥಿಕ ಬೆಳವಣಿಗೆಯ ಸಂಬಂಧ, ಇತ್ಯಾದಿ ಪ್ರಶ್ನೆಗಳ ಚರ್ಚೆಗೆ ಈ ಆಯೋಗದಲ್ಲಿ ಅವಕಾಶವಿಲ್ಲ. ವಾಸ್ತವಿಕವಾಗಿ ರಾಷ್ಟ್ರೀಯ ಕಾರ್ಮಿಕ ಆಯೋಗ ಈ ಎಲ್ಲಾ ವಿಷಯಗಳಲ್ಲಿ ಒಂದು ವಿಶಾಲ ಕಣ್ಣೋಟ ಒದಗಿಸುವಂತದ್ದಾಗಿರಬೇಕು. ಆದರೆ ಇಲ್ಲಿ ಕಾನೂನುಗಳನ್ನು ಬದಲಿಸುವ ಮೇಲೆಯೇ ಒತ್ತು ಹಾಕಲಾಗಿದೆಯೇ ವಿನಹ ದೀರ್ಘಾವಧಿಯ ನೀತಿ ನಿರ್ಧಾರಣೆಯ ಮೇಲಲ್ಲ.

ಮೊದಲ ಆಯೋಗ ಇಂತಹ ಹಲವು ಪ್ರಶ್ನೆಗಳನ್ನು ಪರಿಶೀಲಿಸಿತ್ತು. ಅದರ ಕಾರ್ಯವ್ಯಾಪ್ತಿಯನ್ನು ಕಾರ್ಮಿಕ ವಿಷಯಗಳ ತ್ರಿಪಕ್ಷೀಯ ಸಮಿತಿ ನಿರ್ಧರಿಸಿತ್ತು. ಇಷ್ಟೇ ಅಲ್ಲ, ರಾಷ್ಟ್ರೀಯ ಆಯೋಗ ರಚನೆಯ ಪ್ರಕಟಣೆ ಮಾಡುತ್ತಲೇ ಇನ್ನೊಂದು ಕಡೆ ಸರಕಾರ ಏಕಪಕ್ಷೀಯವಾಗಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಮುಂದಾಗಿದೆ. ಇದನ್ನು ತಪ್ಪಿಸಬೇಕು. ಉದಾಹರಣೆಗೆ ಕಾಂಟ್ರ್ಯಾಕ್ಟ್ ಕಾರ್ಮಿಕರ ಕಾನೂನು, ಕೈಗಾರಿಕಾ ವಿವಾದ ಕಾನೂನನ್ನು ತಿದ್ದುಪಡಿ ಮಾಡುವ ಯೋಜನೆಯನ್ನು ಸರ್ಕಾರ ಹೊಂದಿದೆ. ಕೈಗಾರಿಕಾ ವಿವಾದ ಕಾನೂನಿನಲ್ಲಿ ಒಂದು ಉದ್ದಿಮೆಯನ್ನು ಮುಚ್ಚಲು 90 ದಿನಗಳ ನೋಟಿಸು ಅಗತ್ಯ. ಎಕ್ಸಿಟ್ ಪಾಲಿಸಿಯಡಿ ಈ ನೋಟೀಸು ಅವಧಿಯನ್ನು ಕೈಬಿಡಬೇಕು ಎಂದು ಸರಕಾರ ಪ್ರಯತ್ನಿಸುತ್ತಿದೆ. ಅದೇ ರೀತಿ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆ ILOದ ಪ್ರಕಾರ ಮಹಿಳೆಯನ್ನು ಆಸ್ಪತ್ರೆ ಮೊದಲಾದ ಅಗತ್ಯ ಸೇವೆಗಳನ್ನು ಬಿಟ್ಟು ಬೇರೆಡೆ ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಬಾರದು ಎಂದಿದ್ದರೂ ಸರಕಾರ ರಫ್ತು ಸಂಸ್ಕರಣಾ ವಲಯಗಳಲ್ಲಿ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ನೀಡಬಯಸುತ್ತದೆ.

ಈ ರಾಷ್ಟ್ರೀಯ ಆಯೋಗವನ್ನು ವಿವಿಧ ಕಾನೂನುಗಳ ಅಧ್ಯಯನಕ್ಕೆಂದೇ ರಚಿಸಿರುವಾಗ ಅದರ ಶಿಫಾರಸು ಬರುವ ಮೊದಲೇ ಸರಕಾರ ಏಕೆ ತಿದ್ದುಪಡಿ ಮಾಡಬೇಕು ಎಂಬುದು ಸಿಐಟಿಯು ತರ್ಕ.

● *ಈ ಆಯೋಗದಲ್ಲಿ ಯಾರಿರಬೇಕು?*


ಡಾ. ಪಂಧೆ: ಈ ಬಗ್ಗೆ ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸಿಲ್ಲ. ಸರಕಾರ ಬಿ.ಎಂ.ಎಸ್. ಗೆ ಮಾತ್ರ ಪ್ರಾತನಿಧ್ಯ ನೀಡಬಹುದೆಂಬುದು ನಮ್ಮ ಸಂದೇಹ. 10 ಲಕ್ಷಕ್ಕಿಂತ ಹೆಚ್ಚು ಸದಸ್ಯತ್ವವಿರುವ ಎಲ್ಲಾ ಐದು ಕಾರ್ಮಿಕ ಸಂಘಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ನಾವು ಬಯಸುತ್ತೇವೆ.

ಆಯೋಗ ಈ ಎಲ್ಲಾ ಕಾನೂನುಗಳನ್ನು ಅಧ್ಯಯನ ಮಾಡಿ ನೀಡುವ ಶಿಫಾರಸುಗಳಲ್ಲಿ ನಿಜವಾಗಿಯಾದರೂ ಏನಾದರೂ ಸಹಾಯ ಸಿಗುತ್ತದೋ ಎಂಬ ಸಂದೇಹ ನಮಗೆ. ಈ ಸಂಸ್ಥೆಗಳ ಶಿಫಾರಸುಗಳನ್ನು ಜಾರಿಗೆ ತರಲು ಸರಕಾರ ತಾನು ಬದ್ಧ ಎಂದು ಹೇಳಬೇಕು.

ಹಲವು ವರ್ಷಗಳಿಂದ ಇಂತಹ ಸಮಿತಿಗಳ, ಆಯೋಗಗಳ ಶಿಫಾರಸುಗಳನ್ನು ಜಾರಿಗೆ ತಂದಿಲ್ಲ. ತ್ರಿಪಕ್ಷೀಯ ಕಾರ್ಮಿಕ ಸಮಿತಿಯನ್ನೇ ತಗೊಳ್ಳಿ. ಕಳೆದ ಐದು ವರ್ಷಗಳಿಂದ ಅದರ ಸಭೆ ನಡೆದಿಲ್ಲ. ರಾಷ್ಟ್ರೀಯ ಕೃಷಿ ಕಾರ್ಮಿಕರ ಸಮಿತಿ 10 ವರ್ಷಗಳ ಹಿಂದೆಯೇ ತನ್ನ ವರದಿ ಸಲ್ಲಿಸಿದೆ. ಅದರ ಶಿಫಾರಸುಗಳನ್ನು ಜಾರಿಗೆ ತಂದಿಲ್ಲ.

● *ರಾಷ್ಟ್ರೀಯ ಕಾರ್ಮಿಕ ಆಯೋಗಕ್ಕೆ ನೀಡಿದ ಎರಡು ವರ್ಷಗಳ ಅವಧಿ ಬಹಳ ದೀರ್ಘವಾಯಿತೆಂದು ನಿಮಗನಿಸುತ್ತದೆಯೇ?*

ಡಾ. ಪಂಧೆ: ಹೌದು, ಅಷ್ಟೇ ಅಲ್ಲ ಈ ಎರಡು ವರ್ಷದ ಅವಧಿಯ ನಂತರ ಎಲ್ಲಾ ಸಮಿತಿ,ಆಯೋಗಗಳಂತೆ ಈ ಅವಧಿಯನ್ನು ವಿಸ್ತರಿಸಲೂ ಬಹುದು. ○



ಪಡಿತರ ವ್ಯವಸ್ಥೆ

ಕೆಲವು ಸರ್ಕಾರಿ ಮತ್ತು ಖಾಸಗಿ ಸುಳ್ಳುಗಳು

ನಾಳೆ ಬಾ....... ' ಎನ್ನುವ ರೇಶನ್ ಅಂಗಡಿಗಳು, ಬಾಗಿಲೇ ತೆಗೆಯದ 'ಸ್ಟಾಕು ಇಲ್ಲಾ' ಎನ್ನುವ ಬೋರ್ಡು ಯಾವಾಗಲೂ ಹಾಕಿಕೊಂಡಿರುವ, ಹೋದಾಗಲೆಲ್ಲಾ ಈ ತಿಂಗಳ ಅಕ್ಕಿ ಬಂದಿಲ್ಲ ಎನ್ನುವ ರೇಶನ್ ಅಂಗಡಿಗಳು ಯಾರಿಗೂ ಅಪರಿಚಿತವಲ್ಲ. ರೇಶನ್ ವ್ಯವಸ್ಥೆ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಹಸಿವು ಬಡತನವನ್ನು ಹದ್ದುಬಸ್ತಿನಲ್ಲಿಡಲು ಜನಗಳ ಹೋರಾಟಗಳಿಂದ ರೂಪಿತವಾದ ವ್ಯವಸ್ಥೆ. ನಮ್ಮ 50 ವರ್ಷಗಳ ಹಲವು ಇದ್ದ ಬದ್ದ ಪ್ರಗತಿಪರ ಕ್ರಮಗಳಿಗೆ ಜಾಗತೀಕರಣ-ಉದಾರೀಕರಣದ ಗ್ರಹಣ ಬಡಿಯುತ್ತಿರುವಾಗ ರೇಶನ್ ವ್ಯವಸ್ಥೆಗೂ ಇದೇ ಗತಿ. ರೇಶನ್ ವ್ಯವಸ್ಥೆಯ ವಿರುದ್ಧ ಹಲವಾರು ಸುಳ್ಳುಗಳು ಸರ್ಕಾರಿ ಮತ್ತು ಖಾಸಗೀ ಯಂತ್ರ ಸೇರಿ-ಚಾಲ್ತಿಯಲ್ಲಿವೆ. ಈ ಸುಳ್ಳುಗಳು ಈಗ ಭೂತಾಕಾರ ಪಡೆಯುತ್ತಿವೆ. ಬಡವರ ಮೇಲೆ ಜಾಗತೀಕರಣ-ಉದಾರೀಕರಣದ ದಾಳಿ ನಡೆಯುತ್ತಿರುವಾಗ ಹಿಂದೆಂದಿಗಿಂತಲೂ ಹೆಚ್ಚಿಗೆ ಬೇಕಾದ ರೇಶನ್ ವ್ಯವಸ್ಥೆಯ ವಿರುದ್ಧ ಸುಳ್ಳುಗಳನ್ನು ಬಯಲುಗೊಳಿಸುವ, ರೇಶನ್ ವ್ಯವಸ್ಥೆ ಹೇಗಿರಬೇಕು, ದೇಶಕ್ಕ ಮೇಲ್ಪಂಕ್ತಿ ಹಾಕಿಕೊಟ್ಟ ಕೇರಳದ ಮಾದರಿ, ಈ ಬಗ್ಗೆ ನಾವು ಏನು ಮಾಡಬೇಕು ಎಂದು ತಿಳಿಸುವ ಲೇಖನ-ಸಿಪಿಐ(ಎಂ) ರಾಜ್ಯ ಸಮಿತಿ ರೇಶನ್ ವ್ಯವಸ್ಥೆ ಸುಧಾರಿಸುವ, ಬಲ ಪಡಿಸುವ ಹೋರಾಟಕ್ಕೆ ಕರೆ ಕೊಟ್ಟಿರುವ ಹಿನ್ನೆಲೆಯಲ್ಲಿ.

ಸುಳ್ಳು - 1
ರೇಶನ್ ವ್ಯವಸ್ಥೆ ಬೇಕಾಗಿಲ್ಲ

ನಮ್ಮ ದೇಶದಲ್ಲಿ ಸರ್ಕಾರದ ಪ್ರಕಾರವೇ ಶೇಕಡಾ 38 ರಷ್ಟು ಬಡತನದ ರೇಖೆಯ ಕೆಳಗೆ ಇದ್ದಾರೆ. ಇದರರ್ಥ ಅವರಿಗೆ ಯಾವುದೇ ಮನುಷ್ಯನಿಗೆ ಪ್ರತಿ ದಿನ ಕನಿಷ್ಟ ಬೇಕಾಗಿರುವ 370 ಗ್ರಾಂ ಧಾನ್ಯದ ಆಹಾರವೂ ಸಿಗುವುದಿಲ್ಲ ಅಂತ. ಬಡವರು ಹಸಿವು, ಪೋಷಕ ಆಹಾರದ ಅಭಾವದಿಂದ ನರಳುತ್ತಿದ್ದಾರೆ. ಸರ್ಕಾರದ ಲೆಕ್ಕದಲ್ಲಿ ಬಡವರು ಅಲ್ಲ ಎಂದು ಘೋಷಿಸಲ್ಪಟ್ಟ ಕುಟುಂಬಗಳಲ್ಲೂ ಹೆಚ್ಚಿನ ಕುಟುಂಬಗಳಲ್ಲಿ ಆಹಾರದ ಭದ್ರತೆ ಇದೆ ಎಂದು ಹೇಳಲು ಸಾಧ್ಯವಿಲ್ಲ. ದೇಶದ ಅದರಲ್ಲೂ ಗ್ರಾಮೀಣ ಪ್ರದೇಶದ ಹೆಚ್ಚಿನ (ಶೇಕಡಾ 80) ಜನ ಅಸಂಘಟಿತ ವಲಯದಲ್ಲಿ ದುಡಿಯುವವರು, ಅವರಿಗೆ ಖಾತರಿ ಕೆಲಸ, ಖಾತರಿ ನಿಗದಿತ ವರಮಾನ ಇಲ್ಲದಿರುವ ಹಿನ್ನೆಲೆಯಲ್ಲಿ ದೇಶದ ಮೂರನೇ ಎರಡು ಭಾಗಕ್ಕೂ ಹೆಚ್ಚು ಜನರಿಗೆ ಆಹಾರದ ಭದ್ರತೆ ಒದಗಿಸುವ ಅಗತ್ಯ ಇದೆ. 1992-93ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇ ಪ್ರಕಾರ ನಾಲ್ಕು ವರ್ಷದ ಕೆಳಗಿನ ಮಕ್ಕಳಲ್ಲಿ ಶೇಕಡಾ 53 ಮಕ್ಕಳು ಪೋಷಕ ಇರುವ ಆಹಾರದ ಅಭಾವದಿಂದ ನರಳುತ್ತಿದ್ದರು. ಶೇಕಡಾ 21 ಮಕ್ಕಳು ತೀವ್ರವಾಗಿ ನರಳುತ್ತಿದ್ದರು.

ಆದ್ದರಿಂದ ದೇಶದ ಬಹುಭಾಗದ ಕುಟುಂಬಗಳಿಗೆ ಎಟಕುವ ಬೆಲೆಯಲ್ಲಿ ಸಾಕಷ್ಟು ಆಹಾರವನ್ನು ಒದಗಿಸಬಹುದಾದ ಸಾಧನವಾಗಿ ರೇಶನ್ ವ್ಯವಸ್ಥೆಯ ಅಗತ್ಯ ಇದೆ. ಇಂದು ಎಂದಿಗಿಂತಲೂ ಹೆಚ್ಚಾಗಿದೆ.

ಸುಳ್ಳು-2
ರೇಶನ್ ವ್ಯವಸ್ಥೆ ತೃಪ್ತಿಕರವಾಗಿದೆ

ಇದಕ್ಕಿಂತ ದೊಡ್ಡ ಸುಳ್ಳು ಬೇರೆ ಇರಲಿಕ್ಕಿಲ್ಲ. ದೇಶದ ದಟ್ಟ ದರಿದ್ರರಿಗೆ ಆಹಾರ ಭದ್ರತೆ ಒದಗಿಸುವ ಉದ್ದೇಶಕ್ಕಾಗಿ ರೂಪಿಸಿದ ರೇಶನ್ ವ್ಯವಸ್ಥೆಯ-ಉದ್ದೇಶದ ಕನಿಷ್ಟ ಪೂರೈಕೆ ಆಗಿಲ್ಲ ಎಂಬುದಕ್ಕೆ ದಿನೇ ದೇಶದ ವಿವಿಧ ಪ್ರದೇಶಗಳಿಂದ ಹಸಿವಿನಿಂದ ಸಾಯುತ್ತಿರುವ ಬಗ್ಗೆ ಬರುತ್ತಿರುವ ಸುದ್ದಿಗಳೇ ಸಾಕ್ಷಿ. ದೇಶದ ಬಹುಭಾಗಗಳಲ್ಲಿ ರೇಶನ್ ಅಂಗಡಿಗಳೇ ಇಲ್ಲ. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ರೇಶನ್ ವ್ಯವಸ್ಥೆಯ ವ್ಯಾಪ್ತಿ ಕಡಿಮೆ. ನಗರ ಪ್ರದೇಶಗಳಲ್ಲೂ ದಟ್ಟದರಿದ್ರರಿಗೆ ರೇಶನ್ ಕಾರ್ಡು ಇರುವುದಿಲ್ಲ-ವಿಶೇಷವಾಗಿ ಮನೆ ಇಲ್ಲದವರಿಗೆ. ಕೆಲವು ಬಡವರು ವಾಸಿಸುವ ಕೊಳೆಗೇರಿಗಳಲ್ಲಿ ರೇಶನ್ ಅಂಗಡಿಗಳೇ ಇಲ್ಲ. ಒಂದು ಸರ್ವೆ ಪ್ರಕಾರ ಬಡವರಲ್ಲಿ (ಸರ್ಕಾರದ ಪ್ರಕಾರ) ಐವರಲ್ಲಿ ಇಬ್ಬರು (ಅಂದರೆ ಶೇಕಡಾ 40) ಯಾವತ್ತೂ ರೇಶನ್ ಅಂಗಡಿಯಿಂದ ಏನನ್ನೂ ಕೊಂಡದ್ದಿಲ್ಲ. 1990 ರಲ್ಲಿ ಬಿರುಸಿನಿಂದ ಆರಂಭವಾದ ನರಸಿಂಹರಾವ್ ಕಾಂಗ್ರೆಸ್‌ನ ಉದಾರೀಕರಣ ಜಾಗತೀಕರಣದ ನಂತರ ರೇಶನ್ ವ್ಯವಸ್ಥೆಯಲ್ಲಿ 5 ವರ್ಷಗಳಲ್ಲಿ ವಿತರಿಸಲಾಗುವ ಧಾನ್ಯಗಳ ಮೊತ್ತ 90 ಲಕ್ಷ ಟನ್‌ಗಳಷ್ಟು ಇಳಿದಿದೆ. ಧಾನ್ಯಗಳ ಸರಾಸರಿ ಸೇವನೆ ಇಳಿಕೆಯಾಗಿದೆ. 1952 ರಲ್ಲಿ ಪ್ರತಿತಿಂಗಳು ಪ್ರತಿವ್ಯಕ್ತಿಗೆ ಧಾನ್ಯಗಳ ಬಳಕೆ 17 ಕೆ.ಜಿ. ಇದ್ದಿದ್ದು, 1993-94 ರಲ್ಲಿ 13 ಕೆಜಿಗೆ ಇಳಿದಿದೆ. ದೇಶದ ಬಡವರ ಸರಾಸರಿ ಧಾನ್ಯ ಬಳಕೆ ಕಳೆದ 50 ವರ್ಷಗಳಲ್ಲಿ ಏರುವ ಬದಲು ಇಳಿದಿದೆ. ರೇಶನ್ ವ್ಯವಸ್ಥೆ ಮೂಲಕ ಈಗ ವಿತರಣೆಯಾಗುತ್ತಿರುವ ಧಾನ್ಯ (ಕಳೆದ ಹತ್ತು ವರ್ಷಗಳ ಸರಾಸರಿ) 153 ಕೋಟಿ ಟನ್. ಇದು ದೇಶದ ಬಡತನದ ರೇಖೆಯ ಕೆಳಗಿರುವವರ ಅಗತ್ಯದ ಒಂದು ಸಣ್ಣಭಾಗ (5.1) ವನ್ನು ಪೂರೈಸಲು ಸಾಲದು. ಇನ್ನೂ ರೇಶನ್ ವ್ಯವಸ್ಥೆಯಿಂದ ಸೋರಿ ಹೋಗುವಿಕೆ, ಭ್ರಷ್ಟಾಚಾರ, ಇತ್ಯಾದಿ ವಿತರಣೆ ಸಮಸ್ಯೆಗಳು ಬೇರೆ ಯಾವುದೇ ರೀತಿಯಲ್ಲಿ ರೇಶನ್ ವ್ಯವಸ್ಥೆ ತೃಪ್ತಿಕರ ಎಂದು ಹೇಳಲು ಸಾಧ್ಯವಿಲ್ಲ.

ಸುಳ್ಳು-3
ರೇಶನ್ ವ್ಯವಸ್ಥೆ ಬಡತನದ ರೇಖೆಯ ಮೇಲೆ ಇರುವವರಿಗೆ ಬೇಕಾಗಿಲ್ಲ

ಈ ಸುಳ್ಳು ದೇಶದ ಬಡತನ, ಹಸಿವಿನ ಪ್ರಮಾಣ ಗೊತ್ತಿಲ್ಲದವರು ಮಾತ್ರ ಹೇಳಲು, ನಂಬಲು ಸಾಧ್ಯ. ಹೆಚ್ಚಿನ ದೇಶಗಳಲ್ಲಿ ಯಾವ ಕುಟುಂಬಗಳಿಗೆ ಆಹಾರ ಭದ್ರತೆ ಒದಗಿಸಬೇಕು ಎಂದು ನಿರ್ಧರಿಸಲು ಆ ಕುಟುಂಬ ತನ್ನ ಆದಾಯದ ಎಷ್ಟು ಭಾಗವನ್ನು ಆಹಾರಕ್ಕೆ ಬಳಸುತ್ತದೆ ಎಂಬ ಸಂಖ್ಯೆಯನ್ನು ಆಧಾರವಾಗಿಡಲಾಗುತ್ತದೆ. ಕುಟುಂಬದ ವರಮಾನ ಹೆಚ್ಚಿದಂತೆ ಜೀವನದ ಮಟ್ಟ ಹೆಚ್ಚಿದಂತೆ ಆಹಾರಕ್ಕೆ ಖರ್ಚು ಮಾಡುವ ಪ್ರಮಾಣ ಕಡಿಮೆಯಾಗುತ್ತದೆ. ಅಂದರೆ ವರಮಾನದ ದೊಡ್ಡ ಪ್ರಮಾಣವನ್ನು ಮನೆ, ಬಟ್ಟೆ, ಶಿಕ್ಷಣ ಇತ್ಯಾದಿ ಗಳಿಗೆ ಬಳಸುತ್ತದೆ ಎಂದು ಅರ್ಥ. ಜನ ಕಲ್ಯಾಣ ಯೋಜನೆಗಳು ಬಹಳ ದುರ್ಬಲವಾಗಿರುವ ಅಮೇರಿಕಾ ದಲ್ಲೇ ಕುಟುಂಬದ ವರಮಾನ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಆಹಾರಕ್ಕೆ ವೆಚ್ಚ ಮಾಡುತ್ತಿದ್ದರೆ 'ಆಹಾರ ಸ್ಟಾಂಪ್'ಗಳನ್ನು ಉಚಿತವಾಗಿ ವಿತರಣೆ ಮಾಡಲಾಗು ತ್ತದೆ. ನಮ್ಮ ದೇಶದಲ್ಲಿ ಈ ಸಂಖ್ಯೆ ಬಳಸಿದರೆ ಹೆಚ್ಚು ಕಡಿಮೆ ಎಲ್ಲಾ ಜನರಿಗೆ ರೇಶನ್ ವ್ಯವಸ್ಥೆಯ ಅಗತ್ಯ ಬೀಳುತ್ತದೆ. ಶೇಕಡಾ 90 ಜನರ ಆಹಾರದ ವೆಚ್ಚ ಕುಟುಂಬದ ವರಮಾನದ ಅರ್ಧಕ್ಕಿಂತಲೂ ಹೆಚ್ಚು. ಆದ್ದರಿಂದ ಬಡತನದ ರೇಖೆಯ ಮೇಲೆ ಇರುವವರಿಗೆ ರೇಶನ್ ವ್ಯವಸ್ಥೆ ಬೇಕಾಗಿಲ್ಲ ಎನ್ನುವುದು ಸರಿಯಲ್ಲ. ಅದು ಮಾತ್ರವಲ್ಲ ಶೇಕಡಾ 90 ಜನರ ವರಮಾನವೇ ನಿಗದಿತವಲ್ಲ. ಕೆಲವೇ ದಿನಗಳ ಆಹಾರ ಪೂರೈಕೆ ಅಭಾವ ಆಹಾರದ ಬೆಲೆ ಏರಿಕೆ, ಉದ್ಯೋಗದ ವಿಧಾನ ಈ ಕುಟುಂಬಗಳನ್ನು ನಾಶ ಮಾಡಬಲ್ಲದು- ಆಹಾರ ಭದ್ರತೆ ಕೊಡುವ ರೇಶನ್ ವ್ಯವಸ್ಥೆ ಇಲ್ಲದಿದ್ದರೆ.

ಸುಳ್ಳು-4
ರೇಶನ್ ವ್ಯವಸ್ಥೆಯನ್ನು ಬಡವರಿಗೆ ಸೀಮಿತ ಗೊಳಿಸಿದರೆ ಮಾತ್ರ ಅದನ್ನು ಮುಂದುವರೆಸಲು ಸಾಧ್ಯ

ನರಸಿಂಹರಾಯರ ಸರ್ಕಾರ ಉದಾರೀಕರಣದ ಆರ್ಥಿಕ ನೀತಿ ಆರಂಭಿಸಿದಾಗಿನಿಂದ, ರೇಶನ್ ವ್ಯವಸ್ಥೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಸೀಮಿತ ಗೊಳಿಸುವ ಕಡಿತಗೊಳಿಸುವ, ಕುಂಠಿತಗೊಳಿಸುವ ಹುನ್ನಾರ ನಡೆದಿದೆ. ಆ ಮೇಲೆ ಅದನ್ನು ಚಿದಂಬರಂ ಸಂಯುಕ್ತ ರಂಗ ಸರ್ಕಾರದಲ್ಲೂ ಮುಂದುವರೆಸಿದರು- ಎಡಪಕ್ಷಗಳ ಬಲವಾದ ವಿರೋಧ ಇದ್ದಾಗ್ಯೂ. ಈ ಪ್ರಯತ್ನವನ್ನು ರೇಶನ್ ವ್ಯವಸ್ಥೆಯ ಆಮೂಲಾಗ್ರ ಸುಧಾರಣೆ, ಅದನ್ನು ಬಡವರಿಗೆ ನಿಜವಾಗಿ ತಲುಪಿಸಲು ಬದಲಾವಣೆ ಎಂದು ಪ್ರತಿಬಿಂಬಿಸಲಾಗುತ್ತಿದೆ. ಈ ಬದಲಾವಣೆಯನ್ನು ತಂದಿರುವ ರೀತಿಯಿಂದ ಮಾತ್ರ ರೇಶನ್ ವ್ಯವಸ್ಥೆಗೆ ಮಾಡುತ್ತಿರುವ ವೆಚ್ಚವನ್ನು ಐ.ಎಂ.ಎಫ್.ನ ಒತ್ತಡದಿಂದ ಕಡಿಮೆ ಮಾಡುವ ಹುನ್ನಾರ ಎಂಬುದು ಸ್ಪಷ್ಟ. ಬಡತನದ ರೇಖೆಯ ಮೇಲೆ ಇರುವವರನ್ನು ರೇಶನ್ ವ್ಯವಸ್ಥೆಯಿಂದ ಹೊರಗಿಡುವುದು ಇದರ ಮುಖ್ಯ ಭಾಗ. ಇದಕ್ಕಾಗಿ ಬಡತನ ರೇಖೆಯನ್ನು ಬೇಕಾಬಿಟ್ಟಿಯಾಗಿ ಬಳಸಲಾಗುತ್ತಿದೆ. ಇದಕ್ಕಾಗಿ ಲಖ್‌ವಾಲಾ ಫಾರ್ಮುಲಾವನ್ನು ಬೇಕಾಬಿಟ್ಟಿಯಾಗಿ ಬಳಸಲಾಗುತ್ತಿದೆ. ಇದಕ್ಕಾಗಿ ಕುಟುಂಬ ವರಮಾನವನ್ನು ಮಾನದಂಡವಾಗಿ ಬಳಸಲಾಗುತ್ತಿದೆ. ಇದನ್ನು ಜಾರಿ ಮಾಡುತ್ತಿರುವ ರೀತಿಯಲ್ಲಿ ಹಲವಾರು ನಿಜವಾದ ಬಡವರೇ (ಸರ್ಕಾರದ ಪ್ರಕಾರವೇ) ಈ ವ್ಯವಸ್ಥೆಯಿಂದ ವಂಚಿತರಾಗುವ ಸಂಭವವೇ ಹೆಚ್ಚು. ಸಾರ್ವತ್ರಿಕ ವ್ಯಾಪಕ ರೇಶನ್ ವ್ಯವಸ್ಥೆಯಿಂದ ಸೀಮಿತ ರೇಶನ್ ವ್ಯವಸ್ಥೆಗೆ ಹೀಗೆ ಬದಲಾಯಿಸಿದಾಗಲೆಲ್ಲ ಈ ನಿಜವಾದ ಬಡವರನ್ನೂ ಹೊರಗಿಡುವ ಶೇಕಡಾವಾರು ಹೆಚ್ಚಾಗಿ ಇಂತಹ ಪ್ರಯತ್ನ ನಡೆಸಿದ ಜಮೈಕಾ ಮತ್ತು ಶ್ರೀಲಂಕಾದಲ್ಲಿ ಶೇಕಡಾ 50 ರಷ್ಟು ಬಡವರು ತಪ್ಪಾಗಿ ಈ ವ್ಯವಸ್ಥೆಯಿಂದ ವಂಚಿತರಾಗಿದ್ದಾರೆ. ಇಲ್ಲೂ ಈಗಾಗಲೇ ಇದೇ ರೀತಿಯ ಅನುಭವವಾಗಿದೆ. ಇದಲ್ಲದೆ ಬಡವರಿಗೂ ಕುಟುಂಬಕ್ಕೆ 10 ಕೆ.ಜಿ ಧಾನ್ಯವನ್ನು ಮಾತ್ರ ರೇಶನ್ ವ್ಯವಸ್ಥೆ ಮೂಲಕ ಒದಗಿಸಲಾಗುತ್ತದೆ. ಬಡವರಲ್ಲದವರಿಗೆ ಹೆಚ್ಚಿನ ಬೆಲೆಯಲ್ಲಿ ಮಾರಲಾಗುತ್ತದಷ್ಟೆ. ಇದೇ ಸಮಯದಲ್ಲಿ ರೇಶನ್‌ನಲ್ಲಿ ಕೊಡಲಾಗುವ ಧಾನ್ಯದ ಬೆಲೆಯನ್ನು ಏರಿಸಲಾಗಿದೆ. ಇದಲ್ಲದೆ ರಾಜ್ಯವಾರಾಗಿ ಕಳೆದ 10 ವರ್ಷಗಳಲ್ಲಿ ರೇಶನ್ ವ್ಯವಸ್ಥೆಯಲ್ಲಿ ಹಂಚಿದ ಸರಾಸರಿ ಧಾನ್ಯಕ್ಕೆ ಅದನ್ನು ಸೀಮಿತ ಗೊಳಿಸಲಾಗಿದೆ. ರೇಶನ್ ವ್ಯವಸ್ಥೆಯ ಜಾರಿಯಲ್ಲಿ ರಾಜ್ಯದಿಂದ ರಾಜ್ಯಕ್ಕೆ ಭಾರಿ ವ್ಯತ್ಯಾಸಗಳಿರುವುದರಿಂದ ಈ ವ್ಯವಸ್ಥೆ ರೇಶನ್ ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಗೊಳಿಸಲಿದೆ. ಕೇರಳದಂತಹ ರೇಶನ್ ಜಾರಿಯಲ್ಲಿ ಮುಂದುವರೆದಿರುವ ರಾಜ್ಯಗಳಿಗೆ ಈ ವ್ಯವಸ್ಥೆಯಲ್ಲಿ ತೀವ್ರ ಕಡಿತವಾಗಲಿದೆ. ಹೆಚ್ಚು ಕಡಿಮೆ ವ್ಯಾಪಕ ಹಾಗೂ ಕುಟುಂಬಕ್ಕೆ 10 ಕೆ.ಜಿ.ಗಿಂತಲೂ ಹೆಚ್ಚು ಧಾನ್ಯ ಕೊಡುತ್ತಿರುವ ಕೇರಳದಲ್ಲಿ ಇದರಿಂದಾಗಿ ತೀವ್ರ ಕಡಿತವಾಗಲಿದೆ. ಇದಲ್ಲದೆ ಹೆಚ್ಚಿದ ಧಾನ್ಯಗಳ ಬೆಲೆಯ ಭಾರವನ್ನು ರಾಜ್ಯಗಳು ವಹಿಸಬೇಕಾಗಿದೆ. ರೇಶನ್ ವ್ಯವಸ್ಥೆಯನ್ನು ಸೀಮಿತಗೊಳಿಸುವುದಕ್ಕೇ (ಬಡವರನ್ನು ನಿರ್ಧರಿಸುವ ಪ್ರಯತ್ನಕ್ಕೆ) ಹೆಚ್ಚಿನ ಅನಗತ್ಯ ವೆಚ್ಚವಾಗುತ್ತದೆ. ಅಲ್ಲದೆ ತಪ್ಪುವ ಸಂಭವ ಹೆಚ್ಚು. ಆದ್ದರಿಂದ ಸಾರ್ವತ್ರಿಕ ರೇಶನ್ ವ್ಯವಸ್ಥೆಯನ್ನು ಮುಂದುವರೆಸುವುದು ಹೆಚ್ಚು ಸರಿಯಾದ ಕ್ರಮ. ರೇಶನ್ ವ್ಯವಸ್ಥೆಯನ್ನು ಸುಧಾರಿಸುವ ನೆಪದಲ್ಲಿ ಕಡಿತಗೊಳಿಸುವ ಕ್ರಮ ಸಲ್ಲ.

ಸುಳ್ಳು 5
ರೇಶನ್ ವ್ಯವಸ್ಥೆಗೆ ಬೇಕಾದ ಸಬ್ಸಿಡಿ ದುಬಾರಿ ನಮ್ಮ ಆರ್ಥಿಕ ತಡೆಯಲಾರದಷ್ಟು

ರೇಶನ್ ವ್ಯವಸ್ಥೆಗೆ ಬೇಕಾದ ಸಬ್ಸಿಡಿ ಆರ್ಥಿಕ ತಡೆಯಲಾರದಷ್ಟು ಬೆಳೆಯುತ್ತಿದೆ ಎಂಬುದು ಸುಳ್ಳು. ಆಹಾರ ಸಬ್ಸಿಡಿ (ಸಮಾನ ಬೆಲೆಗಳಲ್ಲಿ) 90 ರ ದಶಕದಲ್ಲಿ ನಿಜವಾಗಿ ಹೇಳಬೇಕಾದರೆ ಕಡಿಮೆಯಾಗುತ್ತಿದೆ. ಒಟ್ಟು ಉತ್ಪನ್ನದ ಅಂಶವಾಗಿ ಆಹಾರ ಸಬ್ಸಿಡಿ ಬದಲಾಗೇ ಇಲ್ಲ. ನಮ್ಮ ದೇಶದ ತಲಾ ಆಹಾರ ಸಬ್ಸಿಡಿ ಬ್ರೆಜಿಲ್, ಪಾಕಿಸ್ತಾನ ಶ್ರೀಲಂಕಾದಂತಹ ದೇಶಗಳಿಗಿಂತಲೂ ಕಡಿಮೆ. 1992-93 ರಲ್ಲಿ ಸಬ್ಸಿಡಿಯ ಮೊತ್ತ ಹಲವು ವರ್ಷಗಳಲ್ಲಿ ಅತ್ಯಂತ ಕಡಿಮೆಯಾಗಿತ್ತು. ಇದಲ್ಲದೆ ಸಬ್ಸಿಡಿಯ ಮೊತ್ತ ಪೂರ್ತಿಯಾಗಿ ಸರ್ಕಾರ ಬೆಳೆಗಾರರಿಗೆ ಕೊಟ್ಟ ಬೆಲೆ ಮತ್ತು ರೇಶನ್ ಬೆಲೆಯ ವ್ಯತ್ಯಾಸ ಮಾತ್ರವಲ್ಲ. ಸಬ್ಸಿಡಿಯ ಮೊತ್ತದ ದೊಡ್ಡ ಭಾಗ ಲೆವಿ ಧಾನ್ಯದ ಸಂಗ್ರಹಣೆ, ಶೇಖರಣೆ ಮತ್ತು ದೊಡ್ಡ ಪ್ರಮಾಣದಲ್ಲಿ ಬಹಳ ಸಮಯ ಶೇಖರಣೆಯ ವೆಚ್ಚ- ಈ ಭಾಗ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಇದರಲ್ಲಿ ಶೇಖರಿಸಿದ ಧಾನ್ಯ ಹಾಳಾಗುವುದರ ಖರ್ಚೂ ಸೇರಿದೆ. ಕನಿಷ್ಟ ಅಗತ್ಯ ಪ್ರಮಾಣಕ್ಕಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಶೇಖರಣೆ ಮಾಡಬೇಕಾಗಿರುವುದರ ವೆಚ್ಚ ಅನಗತ್ಯವಾಗಿ ರೇಶನ್ ಧಾನ್ಯಗಳ ಸಬ್ಸಿಡಿಯನ್ನು ಹೆಚ್ಚಿಸುತ್ತಿದೆ. ರೇಶನ್ ಮೂಲಕ ಹೆಚ್ಚು ಧಾನ್ಯಗಳ ಬೆಲೆ ಮತ್ತು ಮಾರುಕಟ್ಟೆ ಬೆಲೆ ನಡುವೆ ಇರುವ ಅಂತರ ಕಡಿಮೆಯಾದರೂ ಮತ್ತು ಧಾನ್ಯದ ಗುಣಮಟ್ಟ ಕಳಪೆಯಾದದ್ದರಿಂದಲೂ ಹೆಚ್ಚಾಗಿ ದಾಸ್ತಾನು ಅಗತ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇದೆ. ರೇಶನ್ ವ್ಯವಸ್ಥೆಯ ಮೂಲಕ ಹೆಚ್ಚಿನ ಧಾನ್ಯವನ್ನು ವಿತರಿಸುವುದರಿಂದ ಈ ವೆಚ್ಚವನ್ನು ತಗ್ಗಿಸಲು ಸಾಧ್ಯ. ಸರ್ಕಾರ ರೇಶನ್ ಧಾನ್ಯಗಳ ಬೆಲೆಯನ್ನು ಕಾಪಾಡಿಕೊಂಡು ಬರಲು ಸಬ್ಸಿಡಿ ಹೆಚ್ಚುತ್ತಿದೆ ಎಂಬ ಅಪಪ್ರಚಾರ ಮಾಡುತ್ತದೆ. 1990 ಮತ್ತು 1994 ರ ನಡುವೆ ರೇಶನ್ ಮೂಲಕ ಹಂಚುವ ಧಾನ್ಯದ ಬೆಲೆ ಶೇಕಡಾ 80 ರಷ್ಟು ಏರಿದೆ. ಆದರೆ ಅದೇ ಧಾನ್ಯಗಳ ಬೆಲೆ ಮಾರುಕಟ್ಟೆಯಲ್ಲಿ ಏರಿದ್ದು ಕೇವಲ ಶೇಕಡಾ 44 ರಷ್ಟು. ಅಂದರೆ ರೇಶನ್ ಧಾನ್ಯಗಳ ಬೆಲೆ ಮಾರುಕಟ್ಟೆಯ ದರಕ್ಕಿಂತ ಹೆಚ್ಚಿನ ದರದಲ್ಲಿ ಏರಿದಂತಾಯಿತು.

ಇದು ಮಾತ್ರವಲ್ಲ ಸಬ್ಸಿಡಿ ಸಹ ತಮ್ಮ ಆರ್ಥಿಕ ತಡೆಯಲಾಗದಷ್ಟೇನೂ ಅಲ್ಲ.

ಸುಳ್ಳು-6
ರೇಶನ್ ವ್ಯವಸ್ಥೆ ಆರ್ಥಿಕ ಬೆಳವಣಿಗೆಗೆ ಮಾರಕ

ರೇಶನ್ ವ್ಯವಸ್ಥೆ ಮೂಲಕ ದೇಶದ ಬಡವರಿಗೆ ಮತ್ತು ದೊಡ್ಡ ವಿಭಾಗದ ಜನರಿಗೆ ಆಹಾರ ಭದ್ರತೆ ಒದಗಿಸುವುದು ಅಗತ್ಯ ಮಾನವೀಯ ಕ್ರಮ ಮಾತ್ರವಲ್ಲ ಸರಿಯಾದ ಆರ್ಥಿಕ ಕ್ರಮ ಸಹ. ಆಹಾರ ಭದ್ರತೆ ಜತೆ ಭೂ ಸುಧಾರಣೆಯಂತಹ ಸಮಾನತೆ ತರುವ ಹಾಗೂ ದೇಶದ ಬಹು ಭಾಗ ಜನರಿಗೆ ಉತ್ಪಾದಕ ಕೆಲಸಗಳಲ್ಲಿ ತೊಡಗುವ ಅವಕಾಶ ಕೊಟ್ಟರೆ ದೇಶದ ಆರ್ಥಿಕಕ್ಕೆ ಅದು ದೊಡ್ಡ ರೀತಿಯಲ್ಲಿ ಉತ್ತೇಜಕವಾಗಬಲ್ಲದು. ನಮ್ಮ ದೇಶದ ಕೈಗಾರಿಕೆಗೆ ಬೇಕಾದ ಕಚ್ಚಾವಸ್ತು ಕೈಗಾರಿಕೆಯ ಉತ್ಪನ್ನಗಳನ್ನು ಕೊಳ್ಳುವ ಶಕ್ತಿ ಇರುವ ದೊಡ್ಡ ಆಂತರಿಕ ಮಾರುಕಟ್ಟೆಗೆ ಆಹಾರ ಭದ್ರತೆ ಮುಖ್ಯ ಉತ್ತೇಜಕ ಕ್ರಮವಾಗಬಲ್ಲದು. ತೀವ್ರ ಕೈಗಾರಿಕಾ ಬೆಳವಣಿಗೆ ಕಂಡ ಜಪಾನ್, ದ.ಕೋರಿಯಾ ಇತ್ತ ದಕ್ಷಿಣ ಏಶ್ಯಾದ

ಪುಟ 6 ನೋಡಿ

ಕೇರಳ ಮಾದರಿ ರೇಶನ್ ವ್ಯವಸ್ಥೆ ಹೇಗೆ ಜಾರಿ ಮಾಡಿತು?

ಕೇರಳದ ಸಾರ್ವತ್ರಿಕ ರೇಶನ್ ವ್ಯವಸ್ಥೆ ವಿಶ್ವಕ್ಕೆ ಮಾದರಿಯಾದದ್ದು. ಭಾರತದ ಆರೋಗ್ಯ ಸಂಸ್ಥೆ ಐ.ಸಿ.ಎಂ.ಆರ್. ಶಿಫಾರಸಿನಂತೆ ಕನಿಷ್ಟ ತಲಾ ಪ್ರತಿ ತಿಂಗಳು 13.8 ಕೆ.ಜಿ. ಧಾನ್ಯ ಒದಗಿಸುವುದು ಸಾಧ್ಯವಾಗಿರುವ ಏಕ ಮಾತ್ರ ರಾಜ್ಯ ಕೇರಳದ ರೇಶನ್ ವ್ಯವಸ್ಥೆ ಆಕಾಶದಿಂದ ಕಳಚಿ ಬಿದ್ದಿದ್ದಲ್ಲ. ಅದು ಕೇರಳದ ಸಾಮಾಜಿಕ ಆರ್ಥಿಕ ಹೋರಾಟಗಳ ಸಮಾಜ ಬದಲಾವಣೆಯ ಹೋರಾಟದ ಫಲ. 1942 ರಲ್ಲಿ ಎರಡನೇ ಮಹಾಯುದ್ಧ ಕಾಲದಲ್ಲಿ ಮಲಬಾರ್, ಕೊಚ್ಚಿನ್, ತಿರುವಾಂಕೂರು ಪ್ರಾಂತ್ಯಗಳಲ್ಲಿ ಬಾರಿ ಆಹಾರ ದಂಗೆಯ ಫಲವಾಗಿ ಬ್ರಿಟಿಷ್ ಸರ್ಕಾರವೇ 1943 ರಲ್ಲಿ ರೇಶನ್ ವ್ಯವಸ್ಥೆ ತಂದಿತ್ತು. ಇ.ಎಂ.ಎಸ್. ನಾಯಕತ್ವದಲ್ಲಿ ನಡೆದ ಈ ಹೋರಾಟದ ಒತ್ತಡದ ಫಲವಾಗಿ ಆರಂಭವಾದ ರೇಶನ್ ವ್ಯವಸ್ಥೆ ಸ್ವಾತಂತ್ರ್ಯ ನಂತರದಲ್ಲಿ ಮುಂದುವರೆದು 1957 ರಲ್ಲಿ ಅಧಿಕಾರಕ್ಕೆ ಬಂದ ಇ.ಎಂ.ಎಸ್. ನಾಯಕತ್ವದ ಸರ್ಕಾರ ರೇಶನ್ ವ್ಯವಸ್ಥೆಯನ್ನು ವ್ಯಾಪಕಗೊಳಿಸಿತು. ಸುಮಾರು ಆರು ಸಾವಿರ ರೇಶನ್ ಅಂಗಡಿಗಳ ಜಾಲವನ್ನು ಸ್ಥಾಪಿಸಿ ಅಕ್ಕಿ, ಗೋಧಿ, ಸಕ್ಕರೆ, ಸೀಮೆ ಎಣ್ಣೆಗಳನ್ನು ವಿತರಿಸಲು ಆರಂಭಿಸಿತು. ಕೇಂದ್ರ ಸರ್ಕಾರ ಆ ರೇಶನ್ ವ್ಯವಸ್ಥೆ ಚೆನ್ನಾಗಿ ನಡೆಯದಂತೆ ಹಲವು ತೊಡಕುಗಳನ್ನು ನಿರ್ಮಿಸಿತು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ 1964 ರಲ್ಲಿ ಕಾಂಗ್ರೆಸ್ಸಿನ ಜನ-ವಿರೋಧಿ ನೀತಿಗಳಿಂದ ಕುಪಿತರಾದ ಜನ ಪುನಃ ಆಹಾರ ದಂಗೆಗಳನ್ನು ನಡೆಸಿದರು. ಕಮ್ಯುನಿಸ್ಟ್ ಸರ್ಕಾರ ರೇಶನ್ ವ್ಯವಸ್ಥೆ ನಡೆಯುವಂತೆ ಮಾಡಿದ್ದು ಕಾಂಗ್ರೆಸ್‌ಗೆ ತಿರುಗು ಬಾಣವಾಯಿತು. ಸ್ವಾಭಾವಿಕವಾಗಿ ಆ ಚಳುವಳಿಯ ನೇತೃತ್ವವನ್ನು ಕಮ್ಯುನಿಸ್ಟ್ ಪಕ್ಷ ವಹಿಸಿತ್ತು. ಈ ಚಳುವಳಿಯ ಫಲವಾಗಿ 1964 ನವೆಂಬರ್ ಕೇರಳದ ರೇಶನ್ ಪದ್ಧತಿ ಆರಂಭವಾಯಿತು. ಚಳುವಳಿಯ ಒತ್ತಡದಿಂದ ಇಂದಿಗೂ ಈ ರೇಶನ್ ವ್ಯವಸ್ಥೆ ಕೆಲಸ ಮಾಡುತ್ತಾ ಬಂದಿದೆ. ಇದಲ್ಲದೆ ಕೇರಳದ ಸಾರ್ವಜನಿಕ ವಿತರಣಾ ವ್ಯವಸ್ಥೆ ಎರಡನೇ ಹಂತಕ್ಕೂ ಹೋಗಿದೆ. ಆಹಾರ ಧಾನ್ಯಗಳಲ್ಲದೆ ಸೋಪು, ಎಣ್ಣೆ ಇತ್ಯಾದಿ ಅವಶ್ಯಕ ವಸ್ತುಗಳನ್ನು ಅಗ್ಗದ ದರದಲ್ಲಿ ಮಾರುವ 'ಮಾವೇಲಿ ಸ್ಟೋರ್'ಗಳ ಜಾಲವನ್ನು ನಿರ್ಮಿಸಲಾಗಿವೆ. ರಾಜ್ಯದಾದ್ಯಂತ 663 ಮಾವೇಲಿ ಸ್ಟೋರ್‌ಗಳು, 11 ಜಿಲ್ಲಾ ಸೂಪರ್ ಸ್ಟೋರ್‌ಗಳು, 21 ಸಂಚಾರಿ ಮಾವೇಲಿ ಸ್ಟೋರ್‌ಗಳು ಕೆಲಸ ಮಾಡುತ್ತಿವೆ. 1974 ರಿಂದ ಇವು ಕೆಲಸ ಮಾಡುತ್ತಿವೆ.

ವೇದ-ಉಪನಿಷತ್ತು, ಸಂಸ್ಕೃತಗಳನ್ನು ಕಡ್ಡಾಯಮಾಡಿ ಮುಂದಿನ ಶತಮಾನದ ಸವಾಲುಗಳನ್ನೆದುರಿಸಬಹುದೇ?

ಪಶ್ಚಿಮ ಬಂಗಾಳ ಶಿಕ್ಷಣ ಮಂತ್ರಿಗಳು ಮುಂದಿಟ್ಟ ಪ್ರಶ್ನೆ

ಇನ್ನು ಸರಿಯಾಗಿ 705 ದಿನಗಳಲ್ಲಿ ಹೊಸ ಶತಮಾನ ಆರಂಭವಾಗಲಿದೆ, ಹೊಸ ಸಹಸ್ರಮಾನ ಆರಂಭವಾಗಲಿದೆ. ಈ ಹೊಸ ಅವಧಿಯ ಸವಾಲುಗಳನ್ನು ಎದುರಿಸುವುದು ಹೇಗೆ? ಅದು ಅಂತರ್ರಾಷ್ಟ್ರೀಯ ಶ್ರಮ ವಿಭಜನೆಯ ಕಾಲವಾಗಲಿದೆ. ಅದರಲ್ಲಿ ಯಾವುದೇ ದೇಶದ ಸ್ಥಾನ ಆ ದೇಶದ ಶಿಕ್ಷಣವನ್ನವಲಂಬಿಸುತ್ತದೆ. ನಾವು ಈ ಸವಾಲನ್ನು ಎದುರಿಸಲು ಹೇಗೆ ಸಿದ್ಧರಾಗಬೇಕು? - ಇದು ಪಶ್ಚಿಮ ಬಂಗಾಳದ ಶಿಕ್ಷಣ ಮಂತ್ರಿ ಕಾಂತಿ ಬಿಸ್ವಾಸ್‌ರವರು ಬೆಂಗಳೂರಿನಲ್ಲಿ ಜನವರಿ 28 ರಂದು ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ನೂರಾರು ಮಂದಿಯ ಮುಂದಿಟ್ಟ ಪ್ರಶ್ನೆ.

'ಶಿಕ್ಷಣ ಮತ್ತು ಕೋಮುವಾದ' ಎಂಬ ಈ ವಿಚಾರ ಸಂಕಿರಣವನ್ನು 'ಅಧ್ಯಯನ' ಏರ್ಪಡಿಸಿತ್ತು. ಪ್ರಖ್ಯಾತ ವಿಚಾರವಾದಿ ಹಾಗೂ ಶಿಕ್ಷಣತಜ್ಞ ಡಾ. ಜಿ.ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ವಿಚಾರ ಸಂಕಿಣರದ ಆಶಯ ಭಾಷಣವನ್ನು ಕಾಂತಿ ಬಿಸ್ವಾಸ್‌ರವರು ಮಾಡಿದರು. ವಿಚಾರ ಸಂಕಿರಣದಲ್ಲಿ ಮಾತನಾಡಿದ ಇತರ ಪ್ರಮುಖರೆಂದರೆ ಪ್ರಖ್ಯಾತ ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಹಾಗೂ ಇತಿಹಾಸಕಾರ ಡಾ. ಚಂದ್ರಶೇಖರ್.

ಏಕೆ ಆಹ್ವಾನಿಸಿರಬಹುದು?

ತಮ್ಮ ಆಶಯ ಭಾಷಣದ ಆರಂಭದಲ್ಲೇ ಕಾಂತಿಬಿಸ್ವಾಸ್‌ರವರು ತಮ್ಮನ್ನು ದೂರದ ಬೆಂಗಳೂರಿಗೆ ಏಕೆ ಆಹ್ವಾನಿಸಿರಬಹುದು ಎಂದು ಹಲವರಲ್ಲಿ ಏಳಬಹುದಾದ ಪ್ರಶ್ನೆಗೆ ಬಹುಶಃ ಈ ಮೂರರಲ್ಲಿ ಯಾವುದಾದರೂ ಒಂದು ಕಾರಣವಿರಬಹುದು ಎಂದರು - 1) 1985 ರಲ್ಲಿ 'ಹೊಸ ಶಿಕ್ಷಣ ನೀತಿ'ಯ ಪ್ರಸ್ತಾವ ಬಂದಾಗ ಶಿಕ್ಷಣ ನೀತಿಯ ಬಗ್ಗೆ ಮಾತ ನಾಡಲು ಹಲವು ವಿಶ್ವ ವಿದ್ಯಾಲಯಗಳು, ರಾಜ್ಯಗಳು ತಮ್ಮನ್ನು ಮಾತನಾಡಲು ಕರೆದಿದ್ದವು. ಅದೇ ರೀತಿ ಈಗ ಆಗುತ್ತಿರಬಹುದು.

2) 17 ವರ್ಷಗಳ ಕಾಲ ಶಿಕ್ಷಣ ಮಂತ್ರಿಯಾಗಿರುವ 'ದುರದೃಷ್ಟ' ಬೇರೆ ಯಾರಿಗೂ ಇರಲಿಕ್ಕಿಲ್ಲ ಎಂದಿರಬಹುದು.

3) ಸಂಘ ಪರಿವಾರದ ಮುಖವಾಣಿಗಳಾದ 'ಪಾಂಚಜನ್ಯ' ಮತ್ತು ಆರ್ಗನೈಸರ್ ಅಕ್ಟೋಬರ್ ತಿಂಗಳ ಶಿಕ್ಷಣ ಮಂತ್ರಿಗಳ ಸಭೆಯ ನಂತರ ತನ್ನ ಬಗ್ಗೆ ಜರೆದು - ಬರೆದು ನೀಡಿದ ಪ್ರಚಾರದಿಂದ ಮಾರುಕಟ್ಟೆಯಲ್ಲಿ ತನ್ನ ಬೆಲೆ ಹೆಚ್ಚಿರಬಹುದು ಎಂದು ವ್ಯಂಗ್ಯವಾಗಿ ನುಡಿದರು. 'ನಾನು ಶಿಕ್ಷಣರಂಗದ ಕುರಿತಾದ ಕೆಲವು ತಥ್ಯಗಳನ್ನು ನಿಮ್ಮಮುಂದಿಡುತ್ತೇನೆ. ನನ್ನ ಅಥವಾ ಎಡರಂಗ ಸರಕಾರದ ಅಭಿಪ್ರಾಯ ಹೇಳುವುದಿಲ್ಲ. ನೀವೇ ನಿರ್ಧರಿಸಿ' ಎನ್ನುತ್ತಾ ಸಭಿಕರನ್ನು ಯೋಚನೆಗೆ ಹಚ್ಚಿದ ಹಲವು ಅಂಕೆ-ಸಂಖ್ಯೆಗಳನ್ನು ಮುಂದಿಟ್ಟರು.

ಭವ್ಯಪರಂಪರೆ - ಆದರೆ ಈಗ?

ನಮ್ಮ ಶಿಕ್ಷಣ ಪರಂಪರೆ ಭವ್ಯವಾಗಿದೆ. ಕ್ರಿ.ಪೂ. 6ನೇ ಶತಮಾನದಲ್ಲೇ ತಕ್ಷಶಿಲಾ ವಿಶ್ವವಿದ್ಯಾಲಯ ವಿಶ್ವವಿಖ್ಯಾತವಾಗಿತ್ತು. ಕ್ರಿ.ಪೂ. 4-5ನೇ ಶತಮಾನದಲ್ಲಿ ನಳಂದಾ ಮತ್ತಿತರ ವಿಶ್ವವಿದ್ಯಾಲಯಗಳು ವಿಶ್ವಾದ್ಯಂತ. ವಿದ್ವಾಂಸರನ್ನು ಆಕರ್ಷಿಸಿದ್ದವು. ಆದರೆ ಈಗಿನ ಪರಿಸ್ಥಿತಿಯೇನು? ಈಗಿನ ಪರಿಸ್ಥಿತಿಯನ್ನು ಚಿತ್ರಿಸಲು ಅವರು ನೀಡಿದ ಈ ಅಂಕಿಅಂಶಗಳನ್ನು ಗಮನಿಸಿ-

- *ಯುನೆಸ್ಕೋದ ವಿಶ್ವ ಶಿಕ್ಷಣ ವರದಿಯ ಪ್ರಕಾರ ವಿಶ್ವದ ಜನಸಂಖ್ಯೆಯಲ್ಲಿ ಭಾರತದ ಪಾಲು 16% ಆದರೆ ವಿಶ್ವದ ವಯಸ್ಕ ನಿರಕ್ಷರಸ್ಥರಲ್ಲಿ ಭಾರತದ ಪಾಲು 32.8%*
- *2005 ರ ವೇಳೆಗೆ ಇದು 35.5% ಕ್ಕೇರಬಹುದು ಎಂದು ಅಂದಾಜು ಮಾಡಲಾಗಿದೆ. ಮುಂದೊಂದು ದಿನ ವಿಶ್ವದಲ್ಲಿ ಅನಕ್ಷರಸ್ಥರನ್ನು ನೋಡ ಬೇಕೆಂದಿದ್ದರೆ ಅವರು ಭಾರತಕ್ಕೆ ಬರಬೇಕು ಎಂಬ ಅಮೇರಿಕನ್ ತಜ್ಞ ರೊಬ್ಬರ ಮಾತು ನಿಜಕ್ಕೂ ನೋವುಂಟು ಮಾಡುವಂತದ್ದು.*
- *ಸ್ವತಂತ್ರವಾಗುವಾಗ ಭಾರತದ ಜನಸಂಖ್ಯೆ 35 ಕೋಟಿ. ಈಗ 50 ವರ್ಷಗಳಲ್ಲಿ ನಿರಕ್ಷರಸ್ಥರ ಸಂಖ್ಯೆಯೇ 38 ಕೋಟಿ!*
- *ಶಿಕ್ಷಣದ ಮೂರನೇ ಹಂತದಲ್ಲಿ ಅಂದರೆ ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ವಿಶ್ವದ 6.9% ಮಾತ್ರ. ವಿದ್ಯಾರ್ಥಿನಿಯರ ಪ್ರಮಾಣವಂತೂ ಕೇವಲ 0.5%*
- 17 ರಿಂದ 20 ವಯೋಗುಂಪಿನವರಲ್ಲಿ 21% ಉಚ್ಚ ಶಿಕ್ಷಣ ಪಡೆಯುತ್ತಿದ್ದರೆ, ಭಾರತದಲ್ಲಿ ಈ ಪ್ರಮಾಣ ಕೇವಲ 6% ಪ್ರಾಥಮಿಕ ಹಂತದಲ್ಲಿ 6-10 ವಯೋಗುಂಪಿನಲ್ಲಿ ವಿದ್ಯಾರ್ಥಿಗಳ ಪ್ರಮಾಣ ಕೇವಲ 22%
- *ವಿಶ್ವದಲ್ಲಿ ಎಲ್ಲಾ ಸರಕಾರಗಳು ಸೇರಿ 1.4 ಲಕ್ಷ ಕೋಟಿ ಡಾಲರು ಖರ್ಚು ಮಾಡುತ್ತವೆ. ಭಾರತ ಖರ್ಚು ಮಾಡುವುದು ಕೇವಲ 1.17 ಕೋಟಿ ಡಾಲರು, ಅಂದರೆ ವಿಶ್ವದ ಖರ್ಚಿನ ಕೇವಲ 0.8%*
- ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ 175 ದೇಶಗಳಲ್ಲಿ ಭಾರತದ ಸ್ಥಾನ 115 ನೇಯದ್ದು. ಆದರೂ ಪ್ರಧಾನ ಮಂತ್ರಿ ವಾಜಪೇಯಿ ಯವರು ಇದೇ ಬೆಂಗಳೂರಿನಲ್ಲಿ ಮಾತನಾಡುತ್ತಾ ಶಿಕ್ಷಣದಲ್ಲಿ ಸರಕಾರದ ಪಾತ್ರವನ್ನು ಇನ್ನಷ್ಟು ಕಮ್ಮಿ ಮಾಡ ಬೇಕು ಎಂದಿದ್ದಾರೆ. ಮುಂದೆ ಇದರ ಅರ್ಥವೇನು?
- *25 ರಾಜ್ಯಗಳು ಹಾಗೂ 7 ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಬಜೆಟ್ ಮೊತ್ತ ಕೇಂದ್ರದ ಬಜೆಟ್ಟಿನಷ್ಟು. ಆದರೆ 42ನೇ ಸಂವಿಧಾನ ತಿದ್ದುಪಡಿಯ ನಂತರ ಶಿಕ್ಷಣ ಸಮವರ್ತಿ ಪಟ್ಟಿಗೆ ಬಂದರೂ ಶಿಕ್ಷಣಕ್ಕೆ ಮಾಡುವ ಒಟ್ಟು ಖರ್ಚಿನಲ್ಲಿ ಕೇಂದ್ರ ಸರ್ಕಾರದ ಪಾಲು ಕೇವಲ 8.9% ಉಳಿದ 91% ವನ್ನು ರಾಜ್ಯ ಸರಕಾರಗಳೇ ವಹಿಸಿಕೊಂಡಿವೆ. ಹಾಗಿದ್ದರೆ ಕೇಂದ್ರದ ಪಾತ್ರವೇನು?*
- *ಎಸ್.ಆರ್.ಬೊಮ್ಮಾಯಿಯವರು ಮಾನವ ಸಂಪನ್ಮೂಲ ಮಂತ್ರಿಗಳಾಗಿದ್ದಾಗ ನೇಮಕ ಮಾಡಿದ ಸಮಿತಿ ಪ್ರಾಥಮಿಕ ಶಿಕ್ಷಣಕ್ಕೆ 9ನೇ ಯೋಜನೆಯಲ್ಲಿ 40000 ಕೋಟಿ ರೂ. ಹೆಚ್ಚು ಖರ್ಚು ಮಾಡಬೇಕು ಎಂದು ಶಿಫಾರಸು ಮಾಡಿತ್ತು. ಆದರೆ ಈ ಸರಕಾರ ಶಿಕ್ಷಣ ಮತ್ತು ಇತರ ಸೌಲಭ್ಯಗಳಲ್ಲಿ ಮೀಸಲಿಟ್ಟಿರುವ ಒಟ್ಟು ಹಣ 21000 ಕೋಟಿ ರೂ. ಮಾತ್ರ.*
- *ಹಿಂದಿನ ಮೂರು ವರ್ಷಗಳಲ್ಲಿ ಬಜೆಟ್‌ನಲ್ಲಿ ಶಿಕ್ಷಣಕ್ಕೆ ನೀಡಿದ ಹಣ ಸುಮಾರು 18% ದಷ್ಟು ಹೆಚ್ಚಿತ್ತು. ಆದರೆ ಹಿಂದಿನ ಬಜೆಟ್‌ನಲ್ಲಿ ಇದು ಕೇವಲ 3% ಏರಿತು. ಆದರಲ್ಲೂ ವಯಸ್ಕ ಶಿಕ್ಷಣಕ್ಕೆ ಹಣ 2/3 ರಷ್ಟು ಕಡಿತವಾಯಿತು.*

ಈ ಅಂಕಿ-ಅಂಶಗಳು ಶಿಕ್ಷಣದ ಬಗ್ಗೆ ಕೇಂದ್ರದಲ್ಲಿನ ಸರಕಾರದ ನಿಲುವಿನ ನಿಜ ಸ್ವರೂಪವನ್ನು ಸಭಿಕರ ಮುಂದೆ ಬಿಚ್ಚಿಟ್ಟವು.

ಕಡ್ಡಾಯ ಏಕೆ?

ಅಕ್ಟೋಬರ್ ತಿಂಗಳಲ್ಲಿ ನಡೆದ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ ಮುಂದಿಟ್ಟ ಪ್ರಸ್ತಾಪಗಳ ಬಗ್ಗೆ ಕಾಂತಿ ಬಿಸ್ವಾಸ್‌ರವರು ಮಾತನಾಡುತ್ತಾ ವೇದ-ಉಪನಿಷತ್ತುಗಳ ಅಧ್ಯಯನ ಮಹತ್ವದ್ದೇನೋ ಸರಿ, ಆದರೆ ಅದನ್ನು ಕಡ್ಡಾಯ ಮಾಡಬೇಕೆಂಬ ಆಗ್ರಹ ಏಕೆ ಎಂದು ಪ್ರಶ್ನಿಸಿದರು. ಇವನ್ನು ಕಲಿಸುವುದಾದರೂ ಹೇಗೆ? ಏಕೆಂದರೆ ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಬಿಂಬಿಸುವ ವಿಚಾರಗಳು ಅದರಲ್ಲಿವೆ. ಉದಾ: ಅದರಲ್ಲಿ ಒಬ್ಬ ಸೋದರಿ ತನ್ನ ಸೋದರನೊಡನೆ ವಿವಾಹದ ಪ್ರಸ್ತಾಪ ಇಡುವ ಮಾತಿದೆ. ಇದನ್ನು ಹೇಗೆ ಬೋಧಿಸವುದು? ಬ್ರಾಹ್ಮಣರಲ್ಲದವರು ಇದನ್ನು ಬೋಧಿಸಬಾರದೆಂದಿದೆ. ಬ್ರಾಹ್ಮಣ ರಲ್ಲದ ಅಧ್ಯಾಪಕರು ಏನು ಮಾಡಬೇಕು? ಮಹಿಳೆಯರು ಬೋಧಿಸಬಾರದೆಂದಿದೆ. ಮಹಿಳಾ ಅಧ್ಯಾಪಕರು ಏನು ಮಾಡಬೇಕು? ಈ ಪ್ರಶ್ನೆಗಳಿಗೆ ಮುರುಳಿಮನೋಹರ ಜೋಷಿಯವರ ಉತ್ತರ ಕೇವಲ ಗಂಭೀರ ಮೌನ ಎಂದರು ಕಾಂತಿ ಬಿಸ್ವಾಸ್. ಅದೇ ರೀತಿ ಸಂಸ್ಕೃತ ಒಂದು ಸುಂದರ ಭಾಷೆಯೇನೋ ನಿಜ. ಆದರೆ ಜಗತ್ತಿನ ಎಲ್ಲೂ ಇಂತಹ ಪ್ರಾಚೀನ ಭಾಷೆಯನ್ನು ಕಡ್ಡಾಯ ಮಾಡಿಲ್ಲ. ವಾಸ್ತವವಾಗಿ ಸಂಸ್ಕೃತ ಭಾಷೆ ಹಿಂದುತ್ವದ ವಾಹಕವೆಂಬ ದೃಷ್ಟಿಯಿಂದಲೇ ಇವರು ಅದನ್ನು ಕಡ್ಡಾಯ ಮಾಡಬೇಕೆಂದಿದ್ದಾರೆ ಎಂದು ತಿಳಿದು ಬಂತು ಎಂದೂ ಅವರು ತಿಳಿಸಿದರು. ಸರಸ್ವತೀ ವಂದನೆಯನ್ನು ಎಲ್ಲರೂ ಕಡ್ಡಾಯ ಮಾಡಿ ವಾಸ್ತವವಾಗಿ ಇವರು ಸರಸ್ವತಿಗೆ ಗೌರವ ಕೊಡುತ್ತಿದ್ದಾರೋ ಅಥವಾ ಅವಮಾನ ಮಾಡುತ್ತಿದ್ದಾರೋ ಎಂದೂ ಅವರು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಶಿಮ್ಲಾದ ಉಚ್ಚ ಅಧ್ಯಯನ ಸಂಸ್ಥೆಯಲ್ಲಿ ಪ್ರೊ. ಅಮರ್ತ್ಯಸೇನ್‌ರ ಭಾಷಣದ ಬದಲು ಜೋಶಿಯವರ ಭಾಷಣ, ಇತಿಹಾಸ ಸಂಶೋಧನಾ ಮಂಡಳಿ, ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ ಇತ್ಯಾದಿಗಳ ನೇಮಕಗಳು, ಕಲ್ಕತ್ತೆಯ ಮೌಲಾನಾ ಆಝಾದ್ ಏಶ್ಯನ್ ಅಧ್ಯಯನ ಸಂಸ್ಥೆಗೆ ಒಬ್ಬ ನಿವೃತ್ತ ಐಪಿಎಸ್ ಅಧಿಕಾರಿಯನ್ನು ಮುಖ್ಯಸ್ಥನಾಗಿ ನೇಮಿಸಿದ್ದು ಶಿಕ್ಷಣದ ಬಗ್ಗೆ ಈ ವಾಜಪೇಯಿ ಸರಕಾರದ ನಿಲುವನ್ನು ಕುರಿತಂತೆ ಏನು ಸೂಚಿಸುತ್ತದೆ ಎಂಬುದನ್ನು ಅವರು ಸಭಿಕರ ನಿರ್ಧಾರಕ್ಕೆ ಬಿಟ್ಟರು.

ಅಟ್ಟಹಾಸ

ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಕೋಮುವಾದ ಪ್ರವೇಶಿಸಿದೆ ಎಂದು ಆತಂಕ ವ್ಯಕ್ತಪಡಿಸಿದ ಪ್ರೊ. ಬರಗೂರು ರಾಮ ಚಂದ್ರಪ್ಪ ಅಧಿಕಾರದ ಗದ್ದುಗೆಯಲ್ಲಿರುವವರು ಅಸಹಾಯಕತೆಯನ್ನು ಆರಾಧಿಸುತ್ತಾ, ಅಭಿನಯಿಸುತ್ತಾ ಅಟ್ಟಹಾಸ ನಡೆಸುತ್ತಿದ್ದಾರೆ ಎಂದು ಪ್ರಸ್ತುತ ಸನ್ನಿವೇಶವನ್ನು ವರ್ಣಿಸಿದರು. ಆಧುನಿಕತೆಯೊಂದಿಗೆ ಶಿಕ್ಷಣಕ್ಕೆ ಸೆರೆವಾಸದಿಂದ ವಿಮೋಚನೆಯಾಗಿತ್ತು. ಅಂದರೆ ಪ್ರಜಾಪ್ರಭುತ್ವೀಕರಣ ವಾಗಿತ್ತು, ಅದನ್ನೀಗ ಮತ್ತೆ ವರ್ಣಾಶ್ರಮ ವ್ಯವಸ್ಥೆಯೊಳಗೆ ಬಂಧಿಸುವ ಪ್ರಯತ್ನ ನಡೆದಿದೆ. ನಮ್ಮ ಆದ್ಯತೆಗಳನ್ನು ಬದಲಿಸುತ್ತಿದ್ದಾರೆ ಎಂದು ಶಿಕ್ಷಣ ರಂಗದಲ್ಲಿ ಕೋಮು ವಾದಿಗಳ ಪ್ರಯತ್ನದ ಬಗ್ಗೆ ಅವರು ಹೇಳಿದರು.

ಇತಿಹಾಸದ ವಿಕೃತ ಬೋಧನೆ ಬಹುಪಾಲು ಕೋಮುವಾದದ ಮೂಲ ಎಂಬ ಮಾತನ್ನು ನೆನಪಿಸಿಕೊಂಡ ಡಾ. ಚಂದ್ರಶೇಖರ್ ಇದರರ್ಥ ಇತಿಹಾಸದ ಬೋಧನೆಯನ್ನು ನಿಲ್ಲಿಸಬೇಕೆಂದಲ್ಲ ಎಂದರು. ಕೋಮುವಾದದ ವಿಜೃಂಭಣೆಗೆ ಕೋಮುವಾದವನ್ನು ಬಳಸುವುದನ್ನು ನಿಲ್ಲಿಸಬೇಕು, ಇತಿಹಾಸದ ಸರಿಯಾದ ಅಧ್ಯಯನ, ಬಳಕೆ ಪ್ರಜ್ಞಾವಂತ ರೆಲ್ಲರ ಜವಾಬ್ದಾರಿ ಎಂದು ಅವರು ಹೇಳಿದರು.

ಅಧ್ಯಕ್ಷ ಭಾಷಣ ಮಾಡುತ್ತಾ ಡಾ.ಜಿ.ರಾಮಕೃಷ್ಣ ಶಿಕ್ಷಣದ ಪ್ರಾಥಮಿಕ ಲಕ್ಷಣವನ್ನು ನೆನಪಿಟ್ಟುಕೊಳ್ಳಬೇಕು. ಅದು ಯಾರಿಗೋಸ್ಕರ ಎಂಬುದನ್ನು ಮರೆಯ ಬಾರದು ಎಂದರು. ಸಾಮಾಜಿಕವಾಗಿ ಪ್ರಗತಿಶೀಲರಾದವರೂ, ಸಾಂಸ್ಕೃತಿಕವಾಗಿ ಪ್ರತಿಗಾಮಿಗಳಾಗಿರುವಂತಹ ಕಲುಷಿತ ಬೌದ್ಧಿಕ ವಾತಾವರಣದ ಬಗ್ಗೆ ಖೇದ ವ್ಯಕ್ತಪಡಿಸಿದ್ದ ಅವರು ಇಂತಹ ಭೀಕರ ವಾತಾವರಣದಲ್ಲಿ ವಿರೋಧ ಹೇಗೆ ವ್ಯಕ್ತ ಪಡಿಸಬೇಕು ಎಂಬುದನ್ನು ಪರಿಶೀಲಿಸಿದರು. ಶಿಕ್ಷಣದ ಮೂಲಕ ವಿಷ ಉಣಿಸುವುದನ್ನು ನಿಲ್ಲಿಸಿ ಅಮೃತ ಉಣ್ಣಿಸಲಾಗದಿದ್ದರೂ, ವಿಷವುಣ್ಣಿಸುವುದನ್ನಾದರೂ ನಿಲ್ಲಿಸೋಣ ಎಂದ ಜಿ.ರಾಮಕೃಷ್ಣ ಅವರು ಕೋಮುವಾದಿಗಳಿಗೆ ಚರ್ಚೆ ಬೇಡವಾಗಿದ್ದರೂ ನಾವು ಈ ಚರ್ಚೆ ನಡೆಯುವಂತೆ ಮಾಡಬೇಕು, ಮಂಥನ ನಡೆಯುವಂತೆ ಮಾಡಬೇಕು ಎಂದರು.

ಆರಂಭದಲ್ಲಿ ಶ್ರೀಧರಮೂರ್ತಿ ಸ್ವಾಗತ ಬಯಸಿದರು, ಎಸ್.ವೈ.ಗುರುಶಾಂತ್ ಭಾಷಣಕಾರರಾ ಪರಿಚಯಮಾಡಿಕೊಟ್ಟರು. ಕೊನೆಯಲ್ಲಿ ಚೆಲುವರಾಜ್ ಅವರು ವಂದಿಸಿದರು.

ಪಡಿತರ ವ್ಯವಸ್ಥೆ..............

ಪುಟ 5 ರಿಂದ

ದೇಶಗಳಲ್ಲಿ ಭೂ ಸುಧಾರಣೆ, ಆಹಾರ ಭದ್ರತೆ ಇಂತಹ ಕ್ರಮಗಳನ್ನು ಕೈಗೊಂಡು ಆಂತರಿಕ ಮಾರುಕಟ್ಟೆ, ಕೊಳ್ಳುವ ಶಕ್ತಿ ಹೆಚ್ಚಿಸಿದ್ದರು ಎಂಬುದನ್ನೂ ಇಲ್ಲಿ ಗಮನಿಸಬಹುದು. ಅಲ್ಲದೆ ಆಹಾರ ಭದ್ರತೆಯನ್ನು ಪುಕ್ಕಟ್ಟೆಗೆ ಕೊಡಬೇಕಾದಷ್ಟು ದಾಸ್ತಾನಿನಲ್ಲಿರುವ ಧಾನ್ಯವನ್ನು ಕೂಲಿಯಾಗಿ ಬಳಸಿ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಕಾಮಗಾರಿ ಮಾಡಲು ಬಳಸಿದರೆ ಅದೂ ಆರ್ಥಿಕಕ್ಕೆ ಭಾರಿ ಉತ್ತೇಜನ ನೀಡಬಲ್ಲದು.

ಸುಳ್ಳು-7
ರೇಶನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು ಅಸಾಧ್ಯ

ಇದು ಅಪ್ಪಟ ಸುಳ್ಳು. ಇಂದಿನ ಭಾರತದ ಸಾಮಾಜಿಕ ಆರ್ಥಿಕ ವ್ಯವಸ್ಥೆಯೊಳಗೆ ಇದು ಸಾಧ್ಯ ಎಂಬುದನ್ನು ಕೇರಳ ಮಾಡಿತೋರಿಸಿದೆ. 1966 ರಿಂದ ವ್ಯಾಪಕವಾಗಿ ಜಾರಿಯಲ್ಲಿರುವ ಕೇರಳ ರೇಶನ್ ವ್ಯವಸ್ಥೆ ದೇಶದಲ್ಲೇ ಅಪ್ರತಿಮವಾದದ್ದು. ಅದು ಕೇರಳದಲ್ಲಿ ಶೇಕಡಾ 97 ಮನೆಗಳನ್ನು ವ್ಯಾಪಿಸಿ ಹೆಚ್ಚುಕಡಿಮೆ ಸಾರ್ವತ್ರಿಕವಾಗಿದೆ- ಗ್ರಾಮೀಣ ಪ್ರದೇಶಗಳನ್ನೂ ಸೇರಿ. ಕೇರಳ ಆಹಾರ ಧಾನ್ಯಗಳ ಕೊರತೆಯ ರಾಜ್ಯವಾದರೂ ಅದರ ಆಹಾರಧಾನ್ಯಗಳ (48 ಲಕ್ಷ ಟನ್ ವಾರ್ಷಿಕ)ಲ್ಲಿ ಕೇವಲ 10 ಲಕ್ಷ ಟನ್ ಮಾತ್ರ ಅದು ಉತ್ಪಾದಿಸಿದರೂ 24 ಲಕ್ಷ ಟನ್‌ನಷ್ಟು (ಒಟ್ಟು ಬಳಕೆಯ ಅರ್ಧದಷ್ಟು) ರೇಶನ್‌ವ್ಯವಸ್ಥೆಯ ಮೂಲಕ ವಿತರಿಸಲಾಗುತ್ತಿದೆ. ರಾಜ್ಯದಲ್ಲಿ 59 ಲಕ್ಷ ಕಾರ್ಡುದಾರರಿದ್ದು ಅವರಿಗೆ 14 ಸಾವಿರಕ್ಕೂ ಹೆಚ್ಚು ರೇಶನ್ ಅಂಗಡಿಗಳ ಮೂಲಕ ಧಾನ್ಯ ವಿತರಿಸಲಾಗುತ್ತಿದೆ. ಇವುಗಳಲ್ಲಿ 12 ಸಾವಿರ ಗ್ರಾಮೀಣ ಪ್ರದೇಶದಲ್ಲಿವೆ. ಇಲ್ಲಿ ನಾಲ್ಕ ನೂರು ಮನೆಗಳಿಗೆ ಒಂದು ರೇಶನ್ ಅಗಡಿ ಇದೆ. ರಾಜ್ಯದ ಯಾವ ಭಾಗದಲ್ಲಿದ್ದರೂ ಒಬ್ಬ ವ್ಯಕ್ತಿ ಎರಡು ಕಿ.ಮೀ ಗಿಂತ ಹೆಚ್ಚು ನಡೆಯ ಬೇಕಿಲ್ಲ ತನ್ನ ರೇಶನ್ ಅಂಗಡಿ ತಲುಪಲು. ಶೇಕಡಾ 85 ರಷ್ಟು ಜನ ಕೇರಳದಲ್ಲಿ ತಮ್ಮ ಎಲ್ಲಾ ಅಥವಾ ಹೆಚ್ಚಿನ ಆಹಾರ ಧಾನ್ಯಗಳ ಅಗತ್ಯವನ್ನು ರೇಶನ್ ವ್ಯವಸ್ಥೆ ಮೂಲಕ ಪೂರೈಸುತ್ತಾರೆ.

ಇದರ ಸಾಮಾಜಿಕ ಪ್ರಯೋಜನಗಳು ಸ್ಪಷ್ಟ. ಮಕ್ಕಳು ಪೋಷಕಾಂಶಗಳ ಅಭಾವದ ಸಮಸ್ಯೆ ಸ್ವಾಭಾವಿಕವಾಗಿ ಅತ್ಯಂತ ಕಡಿಮೆ. ತೀವ್ರತರದ ಪೋಷಕಾಂಶಗಳ ಅಭಾವ ಇರುವ 4 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಶೇಕಡವಾರು ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರಗಳಲ್ಲಿ (ಅನುಕ್ರಮವಾಗಿ) 21,24,31 ಶೇಕಡಾ. ಆದರೆ ಕೇರಳದಲ್ಲಿ ಕೇವಲ 6.

ಸುಳ್ಳು-8
ಉದಾರೀಕರಣದ ನೀತಿ ರೇಶನ್ ವ್ಯವಸ್ಥೆ ಮೇಲೆ ಪರಿಣಾಮ ಬೀರಿಲ್ಲ

ಈಗಾಗಲೇ ಸಮರ್ಪಕವಾಗಿಲ್ಲದ ರೇಶನ್ ವ್ಯವಸ್ಥೆ ಮೇಲೆ 90 ರ ದಶಕದ ಉದಾರೀಕರಣ ನೀತಿ ಆರಂಭವಾದ ಮೇಲೆ ಪ್ರಹಾರದ ಮೇಲೆ ಪ್ರಹಾರ ಆರಂಭವಾಗಿದೆ. ಐ.ಎಂ.ಎಫ್. ಪ್ರೇರಿತ ನೀತಿ ಎಲ್ಲಾ ಸಬ್ಸಿಡಿಗಳನ್ನು (ಅದರಲ್ಲೂ ಆಹಾರ ಸಬ್ಸಿಡಿಯನ್ನು ವಿಶೇಷವಾಗಿ) ನಿರ್ದಾಕ್ಷಿಣ್ಯವಾಗಿ ಕಡಿತಗೊಳಿಸಲು ಒತ್ತಡ ಹಾಕುತ್ತಲೇ ಇದೆ. ಆರ್ಥಿಕ ಖೋಟಾವನ್ನು ಕಡಿಮೆ ಮಾಡಲು ಆಹಾರ ಸಬ್ಸಿಡಿ ಕಡಿತ ಐಎಂಎಫ್. ಸೂಚಿಸುವ ಮುಖ್ಯ ಕ್ರಮ. ರೇಶನ್‌ವ್ಯವಸ್ಥೆಯ ವ್ಯಾಪಕತೆಯನ್ನು ಪರಿಣಾಮಕಾರಿತನವನ್ನು ಕುಂಠಿತಗೊಳಿಸುವ ಕೊನೆಗೆ ಅದನ್ನು ನಾಶಮಾಡುವ ಎಲ್ಲಾ ಹುನ್ನಾರಗಳು ಉದಾರೀಕರಣ ನೀತಿಯ ನೇರ ಫಲ. ಸಾಮ್ರಾಜ್ಯಶಾಹಿ ದೇಶಗಳ ಕೃಷಿ ಮತ್ತು ಆಹಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದ ಕೃಷಿ (ಅದರಲ್ಲೂ ಆಹಾರ ಧಾನ್ಯದಲ್ಲಿ ಸ್ವಾವಲಂಬನೆ)ಯ ನಾಶಮಾಡುವುದು ಮುಖ್ಯ ಗುರಿಯಾಗಿದೆ. ಈ ದೇಶಗಳಲ್ಲಿ ಹೆಚ್ಚುವರಿ ಬೆಳೆದ ಗೋಧಿ, ಜೋಳ, ಹಾಲು ಉತ್ಪನ್ನಗಳನ್ನು ನಾವು ಆಮದು ಮಾಡುವುದು, ನಮ್ಮ ಕೃಷಿ ಅವರಿಗೆ ಬೇಕಾದ ಹತ್ತಿ, ಕೊಕೊ, ರಬ್ಬರು ಮುಂತಾದ ಕೈಗಾರಿಕಾ ಕಚ್ಚಾ ವಸ್ತುಗಳನ್ನು ಹೆಚ್ಚಿಗೆ ಬೆಳೆಯುವುದು, ಅವನ್ನು ಕಡಿಮೆ ಬೆಲೆಯಲ್ಲಿ ಮಾರುವಂತೆ ಮಾಡುವುದು, ದೇಶದ ಆರ್ಥಿಕ ಸಾರ್ವಭೌಮತೆ ನಾಶ ಮಾಡುವ ಮೂಲಕ ಹತೋಟಿ ಹೆಚ್ಚಿಸುವುದು ಇವೆಲ್ಲಾ ನಮ್ಮ ಉದಾರೀಕರಣದ ನೀತಿಗಳ ನೇರ ಫಲ.

ಉದಾರೀಕರಣ ಆರಂಭವಾದ ಮೇಲೆ ರೇಶನ್ ಧಾನ್ಯಗಳ ಬೆಲೆ ನಾಲ್ಕು ವರ್ಷಗಳಲ್ಲಿ ಶೇಕಡಾ 85 ರಷ್ಟು (ಮಾರುಕಟ್ಟೆ ಬೆಲೆಗಳ ಹೆಚ್ಚಳದ ದರದ ಎರಡು ಪಟ್ಟು) ಹೆಚ್ಚಿದ್ದು ರೇಶನ್ ಧಾನ್ಯಗಳ ವಿತರಣೆಯ ಪ್ರಮಾಣ ಕಡಿಮೆಯಾದದ್ದು ನೇರ ಸಾಕ್ಷಿ ಇದಕ್ಕೆ.

ರೇಶನ್ ವ್ಯವಸ್ಥೆ ಹೇಗಿರಬೇಕು?

ನಾವು ಎಂತಹ ರೇಶನ್ ವ್ಯವಸ್ಥೆಗೆ ಹೋರಾಡಬೇಕು ಎನ್ನುವುದನ್ನು ಎಡಪಕ್ಷಗಳ 1998ರ ಚುನಾವಣಾ ಪ್ರಣಾಳಿಕೆ ಸ್ಪಷ್ಟ ಪಡಿಸಿದೆ. ಇದು ಸಿಪಿಐ(ಎಂ) ತನ್ನ ರಾಜಕೀಯ ನಿರ್ಣಯಗಳಲ್ಲಿ ಹೇಳುತ್ತಾ ಬಂದ ಎಡ ಪ್ರಜಾಸತ್ತಾತ್ಮಕ ರಂಗದ ಕಾರ್ಯಕ್ರಮದಲ್ಲಿ ಹೇಳಲಾಗಿದೆ. ಅವರ ಮುಖ್ಯ ಅಂಶಗಳೆಂದರೆ-

- ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿ ಮಾಡಲು ಪ್ರತಿ ಪಂಚಾಯತ್‌ನಲ್ಲೂ ಒಂದು ರೇಶನ್ ಅಂಗಡಿ ತೆರೆಯುವ ವ್ಯವಸ್ಥೆ ಆಗಬೇಕು.
- ಈ ಅಂಗಡಿಗಳ ಮೂಲಕ 14 ಅಗತ್ಯ ಸಾಮಗ್ರಿಗಳ ಪೂರೈಕೆ ನ್ಯಾಯ ಬೆಲೆಗಳಲ್ಲಿ ಆಗಬೇಕು.
- ಬಡತನದ ರೇಖೆಯ ಕೆಳಗಿರುವವರಿಗೆ ಅರ್ಧ ಬೆಲೆಯಲ್ಲಿ ಸಾಮಗ್ರಿಗಳನ್ನು ಪೂರೈಸಬೇಕು.
- ಆಹಾರ ಕಾರ್ಪೋರೇಶನ್ ಮಳಿಗೆಗಳಲ್ಲಿ ದಾಸ್ತಾನು ವಿತರಣೆಯಲ್ಲಿ ಪೋಲು, ಭ್ರಷ್ಟಾಚಾರ, ಅನಗತ್ಯ ವೆಚ್ಚ ಕಡಿತ ಮಾಡಬೇಕು.

ಈಗ ನಾವೇನು ಮಾಡಬೇಕು?

- ರೇಶನ್ ಅಂಗಡಿಗಳಲ್ಲಿ ಆಹಾರ ಕಚೇರಿಗಳಲ್ಲಿ ಭ್ರಷ್ಟಾಚಾರ ಸೋರುವಿಕೆಯ ಸಂದರ್ಭದಲ್ಲಿ ಅವುಗಳನ್ನು ಬಯಲು ಪಡಿಸುವುದು. ರೇಶನ್ ಅಂಗಡಿಗಳ ಸ್ಥಾಪನೆ ಹಾಗೂ ಅವರು ಸರಿಯಾಗಿ ಕೆಲಸ ಮಾಡಲು ಹೋರಾಟ. ರೇಶನ್ ಧಾನ್ಯಗಳ ಗುಣಮಟ್ಟ, ಬೆಲೆಗಳ ಬಗ್ಗೆ ದೂರುಗಳಿದ್ದರೆ ಅವನ್ನು ಸರಿಪಡಿಸಲು ಹೋರಾಟ.
- ರೇಶನ್ ಧಾನ್ಯಗಳ ಬೆಲೆ ಏರಿಕೆಯ ವಿರುದ್ಧ ಹೋರಾಟ. ಮಾದರಿ ರೇಶನ್ ವ್ಯವಸ್ಥೆ ಜಾರಿ ಮಾಡಲು ಪ್ರಚಾರ ಪ್ರಕ್ಷೋಭೆ.

ಕರ್ನಾಟಕದಲ್ಲಿ ಪಡಿತರ ವ್ಯವಸ್ಥೆ

ಕರ್ನಾಟಕ ಸರಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ 1997-98 ರ ವರದಿಯ ಪ್ರಕಾರ ಕರ್ನಾಟಕದಲ್ಲಿರುವ ಒಟ್ಟು ರೇಶನ್ ಕಾರ್ಡು ಗಳ ಸಂಖ್ಯೆ 1 ಕೋಟಿ 2 ಲಕ್ಷ. (ಇವುಗಳಲ್ಲಿ ಸುಮಾರು 12 ಲಕ್ಷ ನಕಲಿ ಕಾರ್ಡುಗಳೆಂದು ಹೇಳಲಾಗಿದೆ)

- ಈ ಒಂದು ಕೋಟಿಯಷ್ಟು ಕಾರ್ಡುಗಳಲ್ಲಿ 24.32 ಲಕ್ಷ ಸಾಮಾನ್ಯ ಕಾರ್ಡುಗಳು-ಎಂದರೆ ನಗರಗಳಲ್ಲಿ 11840 ರೂ.ಗಿಂತ ಹೆಚ್ಚು ವಾರ್ಷಿಕ ಆದಾಯ ಇರುವ ಕುಟುಂಬಗಳಿಗೆ ಕೊಡುವ ಕಾರ್ಡುಗಳು.
- ನಗರ ಪ್ರದೇಶಗಳಲ್ಲಿ 11840 ರೂ.ಗಳಿಗಿಂತ ಕಮ್ಮಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 6400 ರೂ.ಗಿಂತ ಕಮ್ಮಿ ವಾರ್ಷಿಕ ಆದಾಯದ ಕುಟುಂಬಗಳಿಗೆ ನೀಡುವ ಹಸಿರು ಕಾರ್ಡುಗಳ ಸಂಖ್ಯೆ 59.18 ಲಕ್ಷ(ಗ್ರಾಮೀಣ ಪ್ರದೇಶಗಳಲ್ಲಿ 53.98 ಲಕ್ಷ)
- 6400 ರೂ. ವಾರ್ಷಿಕ ಆದಾಯಕ್ಕಿಂತ ಹೆಚ್ಚಿರುವ ಗ್ರಾಮೀಣ ಕುಟುಂಬಗಳಿಗೆ ನೀಡುವ ಕೇಸರಿ ಕಾರ್ಡುಗಳ ಸಂಖ್ಯೆ 18.9 ಲಕ್ಷ
- ರಾಜ್ಯದಲ್ಲಿ ಒಟ್ಟು ಸುಮಾರು 20 ಸಾವಿರ 'ನ್ಯಾಯಬೆಲೆ ಅಂಗಡಿ'ಗಳಿವೆ. ಇವುಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ಅಂಗಡಿಗಳ ಸಂಖ್ಯೆ ಸುಮಾರು 15 ಸಾವಿರ.
- ರಾಜ್ಯದಲ್ಲಿ 40,000 ಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಗಳನ್ನು ಇನ್‌ಫಾರ್ಮಲ್ ರೇಶನಿಂಗ್ ಏರಿಯಾ ಎಂದು ಸೂಚಿಸಲಾಗಿದೆ. ಇಂತಹ 50 ಪ್ರದೇಶಗಳಿವೆ.
- 1997-98 ರಲ್ಲಿ ಪಡಿತರ ವ್ಯವಸ್ಥೆಯ ಮೂಲಕ ಹಂಚಿಕೆ ಮಾಡಿದ ಅಕ್ಕಿಯ ಪ್ರಮಾಣ 8.3 ಲಕ್ಷ ಮೆಟ್ರಿಕ್ ಟನ್, ಗೋಧಿಯ ಪ್ರಮಾಣ 2.3 ಲಕ್ಷ ಮೆಟ್ರಿಕ್ ಟನ್, ಸಕ್ಕರೆಯ ಪ್ರಮಾಣ 2 ಲಕ್ಷ ಟನ್ ಹಾಗೂ ಸೀಮೆ ಎಣ್ಣೆ 5.5 ಲಕ್ಷ ಲೀಟರ್. ತಾಳೆಎಣ್ಣೆ ಹಂಚಿಕೆ 1997-98 ರಲ್ಲಿ ಸುಮಾರಾಗಿ ಇಲ್ಲವೇ ಇಲ್ಲ.

ಇಲ್ಲಿ ಗಮನಿಸಬಹುದಾದ ಸಂಗತಿಯೆಂದರೆ ಕೇರಳಕ್ಕೆ ಹೋಲಿಸಿದರೆ ಸುಮಾರು ಎರಡು ಪಟ್ಟು ಕಾರ್ಡುದಾರರಿರುವ ನಮ್ಮ ರಾಜ್ಯದಲ್ಲಿ ಈ ಕಾರ್ಡುಗಳ ಮೂಲಕ ಆಹಾರಧಾನ್ಯಗಳ ಪೂರೈಕೆ ಕೇರಳದ ಅರ್ಧಕ್ಕಿಂತಲೂ ಕಮ್ಮಿ.

ಕೇರಳದಲ್ಲಿ ಈ ಮೇಲೆ ಹೇಳಿದಂತೆ ಐ.ಸಿ.ಎಮ್.ಆರ್. ಹೇಳಿದ ಕನಿಷ್ಟ ಪ್ರಮಾಣದ ಅಂದರೆ 13.8 ಕೆ.ಜಿ. ಧಾನ್ಯ ನೀಡುತ್ತಿದ್ದಾರೆ. ಕರ್ನಾಟಕದಲ್ಲಿ ಸರಕಾರದ ವರದಿ ಪ್ರಕಾರವೇ ಅದು ಕೇವಲ 10. ಕೆ.ಜಿ.

ಎಸ್.ಎಫ್.ಐ. ಧಾರವಾಡ-ಹಾವೇರಿ ಜಿಲ್ಲಾ ಸಮ್ಮೇಳನ

ಹುಬ್ಬಳ್ಳಿ: ಇತ್ತೀಚಿನ ರಾಷ್ಟ್ರ ರಾಜಕೀಯ ಬದಲಾವಣೆಗಳ ಹಿನ್ನೆಲೆಯಲ್ಲಿ ಮೂಲ ಭೂತವಾದಿಗಳ ಅಟ್ಟಹಾಸ ಮೆರೆದಿದ್ದು ಸಂಘ ಪರಿವಾರದ ಹಾಗೂ ಶಿವಸೇನೆಯಂತಹ ಸಂಘಟನೆಗಳು ಅಘೋಷಿತ ತುರ್ತು ಪರಿಸ್ಥಿತಿಯನ್ನು ದೇಶದ ಮೇಲೆ ಹೇರುತ್ತಿವೆ ಎಂದು ಕ.ವಿ.ವಿ. ಗಾಂಧಿ ಅಧ್ಯಯನ ಪೀಠ ಮುಖ್ಯಸ್ಥ ಪ್ರೊ|| ಶಿವಾನಂದ ಶೆಟ್ಟರು ಹೇಳಿದ್ದರು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ನ 9ನೇ ಧಾರವಾಡ-ಹಾವೇರಿ ಜಿಲ್ಲಾ ವಿದ್ಯಾರ್ಥಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಾ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ರೀತಿಯಲ್ಲಿ ನಡೆಯುತ್ತಿರುವ ಕಲಾವಿದರ ಮೇಲೆ, ಚಿತ್ರ ಮಂದಿರಗಳ ಮೇಲೆ, ಕ್ರೀಡೆಗಳ ವಿಷಯದಲ್ಲಿ ಹತ್ಯೆ ನಡೆಸುತ್ತಿರುವ ಬೆಳವಣಿಗೆಗಳು ಸಾಂಸ್ಕೃತಿಕ ತುರ್ತು ಪರಿಸ್ಥಿತಿಯ ಕುರುಹುಗಳಾಗಿವೆ. ಇಂತಹ ಅಘೋಷಿತ ಸಾಂಸ್ಕೃತಿಕ ತುರ್ತು ಪರಿಸ್ಥಿತಿಯಿಂದ ದೇಶವನ್ನು ಹಾಗೂ ದೇಶದ ವೈವಿದ್ಯತೆಯನ್ನು ಭಾಷೆ ಸಂಸ್ಕೃತಿ, ಪರಂಪರೆ, ಕ್ರೀಡೆಯನ್ನು ರಕ್ಷಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇತ್ತೀಚೆಗೆ ದೇಶದಲ್ಲಾಗುತ್ತಿರುವ ಬದಲಾವಣೆಗಳು ಅತಂಕಕಾರಿಯಾಗಿವೆ. ಕೇಂದ್ರ ಸರ್ಕಾರವು ಕೋಮುವಾದಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದ್ದು ಇದೇ ಸಮಾಜದಲ್ಲಿ ಅಲ್ಪ ಸಂಖ್ಯಾತರ ಬದುಕಿನಲ್ಲಿ ಭಯದ ವಾತಾವರಣವನ್ನು ಮೂಡಿಸುತ್ತಿವೆ. ಭಯ ಹಸಿವಿನಿಂದ ಮುಕ್ತ ಸಮಾಜವನ್ನು ನಿರ್ಮಿಸುತ್ತೇವೆ ಎಂಬ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂದ ವಾಜಪೇಯಿ ನೇತೃತ್ವದ ಸರ್ಕಾರ ಹಿಂದೆಂದೂ ದೇಶ ಕಾಣದಂತ ಭಯ ವಾತಾವರಣ ಸೃಷ್ಟಿಸುತ್ತದೆ ಎಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಾರ್ಮಿಕ ಮುಖಂಡರಾದ ನಿತ್ಯಾನಂದ ಸ್ವಾಮಿ ಹೇಳಿದರು.

ಶಿಕ್ಷಣದಲ್ಲಿ ವ್ಯಾಪಾರೀಕರಣವು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡುತ್ತಿದ್ದು ಶಿಕ್ಷಣದ ವ್ಯಾಪಾರೀಕರಣ ಹಾಗೂ ಭ್ರಷ್ಟಾಚಾರದ ವಿರುದ್ಧ ವಿದ್ಯಾರ್ಥಿಗಳು ಶಿಕ್ಷಕರು ಧ್ವನಿ ಎತ್ತುವುದು ಅವಶ್ಯವಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಪ್ರೊ|| ಎಲ್.ಆರ್ ಅಂಗಡಿ ಅಭಿಪ್ರಾಯಪಟ್ಟರು.

ಶಿಕ್ಷಣದಲ್ಲಿ ವ್ಯಾಪಾರೀಕರಣ ನಿಲ್ಲಿಸಲು ಪ್ರಯತ್ನಿಸದ ಕೇಂದ್ರ ಸರಕಾರ ಶಿಕ್ಷಣವನ್ನು ಕೋಮುವಾದೀಕರಿಸಲು ನಿರಂತರ ಪ್ರಯತ್ನ ಮಾಡುತ್ತಿದೆ. ಶಿಕ್ಷಣವನ್ನು ಕೋಮುವಾದಿಕರಿಸಿದ್ದೇ ಆದಲ್ಲಿ ಐಕ್ಯತೆ ಸಮಗ್ರತೆಗೆ ಧಕ್ಕೆಯುಂಟಾಗುತ್ತದೆ. ದೇಶದಲ್ಲಿ ನಿರ್ಮಾಣ ಪರವಾದ ಶಕ್ತಿಗಳ ಮತ್ತು ನಿರ್ನಾಮ ಪರವಾದ ಶಕ್ತಿಗಳ ಮಧ್ಯೆ ಸಂಘರ್ಷ ನಡೆಯುತ್ತಿದ್ದು ನಿರ್ಮಾಣ ಪರವಾದ ಜನತೆಯಲ್ಲೂ ಒಂದಾಗಿ ನಿರ್ನಾಮ ಪರವಾದ ನೀತಿಗಳನ್ನು ಹಿಮ್ಮೆಟ್ಟಿಸಿ ಶಿಕ್ಷಣ ಉಳಿಸಿ ರಾಷ್ಟ್ರ ರಕ್ಷಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳು ಮುಂದಾಗಬೇಕಾಗಿದೆ ಎಂದು ಅಧ್ಯಕ್ಷತೆಯನ್ನು ವಹಿಸಿದ್ದ ಎಸ್.ಎಫ್.ಐ. ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಮಹೇಶ ಪತ್ತಾರ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದರು. ದಾಕ್ಷಾಯಿಣಿ ಉಳ್ಳಾಗಡ್ಡಿ ಮಠ ವಂದಿಸಿದರು, ಪ್ರಕಾಶ ಅವರಾದಿ ಕಾರ್ಯಕ್ರಮ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು:

ಡಿ.ವೈ.ಎಫ್.ಐ. ಮುಖಂಡರಾದ ಕೆ. ಮಹಾಂತೇಶ ರವರ ನಿರ್ವಹಣೆಯಲ್ಲಿ ಪ್ರಗತಿಪರ ಹಾಡುಗಳ ತರಬೇತಿ ನಡೆಯಿತು. 'ರಾಮ್ ಕೆ ನಾಮ್' 'ಹಿಟ್ಲರ್' ಚಲನ ಚಿತ್ರಗಳ ವಿಡಿಯೋ ಪ್ರದರ್ಶನ ನಡೆಯಿತು.

150ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮ್ಮೇಳನದ ಸಮಾರೋಪ ಸಮಾವೇಶದಲ್ಲಿ ಮಾತನಾಡುತ್ತಾ ಭಾಷೆ, ಸಂಸ್ಕೃತಿ, ಧರ್ಮ ಅನೇಕ ವರ್ಷಗಳಿಂದ ನಡೆದು ಬಂದಿದ್ದು, ಅವುಗಳಲ್ಲಿ ಇರುವ ವೈವಿಧ್ಯತೆ ಭಾರತ ದೇಶದ ಶ್ರೇಷ್ಠತೆ ಹಾಗೂ

ಕ್ಯೂಬಾದಲ್ಲಿ ಯಶಸ್ವಿ ಅಂತರ್ರಾಷ್ಟ್ರೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನ

ಕ್ಯೂಬಾ ತನ್ನ ಅಂತರ್ರಾಷ್ಟ್ರೀಯ ಕರ್ತವ್ಯವನ್ನು ಪೂರೈಸುವುದರಲ್ಲಿ ಇನ್ನೊಂದು ಹೆಜ್ಜೆ ಇಟ್ಟಿದೆ. ರಾಜಧಾನಿ ಹವಾನಾದಲ್ಲಿ ಜನವರಿ 18 ರಿಂದ 5 ದಿನಗಳ ಅಂತರ್ರಾಷ್ಟ್ರೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನವನ್ನು ಅದು ಏರ್ಪಡಿಸಿತ್ತು. 48 ದೇಶಗಳಿಂದ 500 ಅರ್ಥಶಾಸ್ತ್ರಜ್ಞರು, 200 ಕ್ಯೂಬನ್ ವಿಶೇಷಜ್ಞರು ಹಾಗೂ 20 ಪ್ರತಿಭಾವಂತ ಕ್ಯೂಬನ್ ವಿದ್ಯಾರ್ಥಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 15 ಪ್ರಸಿದ್ಧ ಅಂತರ್ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳ ಡೈರೆಕ್ಟರುಗಳು ಸೇರಿದ್ದಾರೆ. ಇದನ್ನು ಕ್ಯೂಬಾದ ಅರ್ಥಶಾಸ್ತ್ರಜ್ಞರ ಸಂಘಟನೆ ಏರ್ಪಡಿಸಿದ್ದು, ಲ್ಯಾಟಿನ್ ಅಮೆರಿಕ ಮತ್ತು ಕ್ಯಾರಿಬಿಯನ್ ಅರ್ಥಶಾಸ್ತ್ರಜ್ಞರ ಸಂಘಟನೆ ಅದರಲ್ಲಿ ಸಹಕರಿಸಿತ್ತು.

ಸಮ್ಮೇಳನ 'ಜಾಗತೀಕರಣ ಮತ್ತು ಬೆಳವಣಿಗೆಯ ಸಮಸ್ಯೆ' ಗಳ ಬಗ್ಗೆ ಇದ್ದು ಬೆಳವಣಿಗೆಯ ಮೇಲೆ ನವ-ಉದಾರವಾದಿ ಜಾಗತೀಕರಣದ ಪರಿಣಾಮ ಹಾಗೂ ಇತ್ತೀಚಿನ ಅಂತರ್ರಾಷ್ಟ್ರೀಯ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಚರ್ಚಿಸಿತು. ಇದು ಎಲ್ಲಾ ಎಡ ಪಂಥೀಯ ಅರ್ಥಶಾಸ್ತ್ರಜ್ಞರ ಸಮ್ಮೇಳನ ವಾಗಿರಲಿಲ್ಲ. ಜಾಗತೀಕರಣ ಮತ್ತು ಅಂತರ್ರಾಷ್ಟ್ರೀಯ ಬಿಕ್ಕಟ್ಟಿನ ಬಗ್ಗೆ ಹಲವು ದೃಷ್ಟಿ ಕೋಣಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಭಾಗವಹಿಸಿದ್ದರು. ಲ್ಯಾಟಿನ್ ಅಮೆರಿಕದ ಹಲವಾರು ಸಂಘಟನೆಗಳು, ಅಲ್ಲದೆ ವಿಶ್ವಸಂಸ್ಥೆಯ ಹಲವಾರು ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದರು.

ಸಮ್ಮೇಳನಕ್ಕೆ 136 ಪ್ರೌಢ ಪ್ರಬಂಧಗಳು ಬಂದಿದ್ದು, ಅವುಗಳಲ್ಲಿ 60 ಪ್ರಬಂಧಗಳ ಬಗ್ಗೆ ಚರ್ಚೆ ನಡೆಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಸುರ್ಜಿತ್ ಸಮ್ಮೇಳನದಲ್ಲಿ ಭಾಗವಹಿಸಿದರು.

ಸಮ್ಮೇಳನದ ಸಮಾರೋಪದಲ್ಲಿ ಹಲವಾರು ಪರಿಣತರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಪ್ರತಿಧ್ವನಿಸುತ್ತಾ ಕ್ಯಾಸ್ಟ್ರೋ ಪ್ರಸ್ತುತ ಅಂತರ್ರಾಷ್ಟ್ರೀಯ ವ್ಯವಸ್ಥೆ ಅಗಾಧವಾದ ದುರಂತಮಯ ಬಿಕ್ಕಟ್ಟಿನೊಂದಿಗೆ ಕೊನೆಯಾಗಿ, ಹೊಸ ಜಾಗತಿಕ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ, ಅದು ಸಮಾಜವಾದಿ ವ್ಯವಸ್ಥೆಯಾಗಿ ಬರುತ್ತದೆ ಎಂದು ಘೋಷಿಸಿದರು.

ರಶ್ಯಾ ಉತ್ಪನ್ನ ಏಳುವರ್ಷದಲ್ಲಿ ಶೇಕಡಾ 40 ರಷ್ಟು ಕುಸಿದಿದೆ

ರಶ್ಯಾದ ಒಟ್ಟು ಉತ್ಪನ್ನದ ಪ್ರಮಾಣ ಸಮಾಜವಾದಿ ವ್ಯವಸ್ಥೆಯ ವಿಘಟನೆ ಆದ ನಂತರದ ಏಳುವರ್ಷಗಳಲ್ಲಿ ಶೇಕಡಾ 40 ರಷ್ಟು ಕುಸಿದಿದೆ. ಇದು ಯಾವುದೇ ದೇಶದಲ್ಲಿ ಕುಖ್ಯಾತ ದಾಖಲೆ ಆಗಿದೆ. ಆಗಸ್ಟ್‌ನ ಹಣಕಾಸು ಬಿಕ್ಕಟ್ಟಿನ ನಂತರ ರಶ್ಯಾದ ಬ್ಯಾಂಕುಗಳು 100 ಶತಕೋಟಿ ಡಾಲರು ನಷ್ಟ ಅನುಭವಿಸಿವೆ. ಬ್ಯಾಂಕ್ ಬಂಡವಾಳ ಶೇಕಡಾ 30 ರಷ್ಟು ಕುಸಿದಿದೆ. ಇದು ರಶ್ಯಾ ಬಂಡವಾಳ ಶಾಹಿ ಅಪ್ಪಿಕೊಂಡು ಕಂಡಿರುವ ಪ್ರಗತಿ!

ಇರಾಕ್ ಮಕ್ಕಳನ್ನು, ಭವಿಷ್ಯವನ್ನು ಕೊಲ್ಲುತ್ತಿರುವ ಅಮೆರಿಕನ್ ದಿಗ್ಬಂದನ ಮತ್ತು ಧಾಳಿ

ಅಮೆರಿಕದ ಆರ್ಥಿಕ ದಿಗ್ಬಂಧನ ಮತ್ತು ಧಾಳಿ ಇರಾಕಿನ ಮಕ್ಕಳು ಮತ್ತು ಭವಿಷ್ಯದ ಮೇಲೆ ಬೀರುತ್ತಿರುವ ಪರಿಣಾಮ ದಂಗುಬಡಿಸುವಂತದ್ದು.

- 1998 ರಲ್ಲಿ ಸ್ಕೂಲಿಗೆ ಸೇರಬೇಕಾಗಿದ್ದ ಮಕ್ಕಳಲ್ಲಿ ಶೇಕಡಾ 30 ಸ್ಕೂಲಿಗೆ ಸೇರಿಲ್ಲ.
- 2 ಲಕ್ಷ ಪ್ರಾಥಮಿಕ, ಮಾಧ್ಯಮಿಕ ಶಾಲೆಯ ಮಕ್ಕಳು ಸ್ಕೂಲು ಬಿಟ್ಟಿದ್ದಾರೆ ಇವರೆಡಕ್ಕೂ ಕಾರಣ ದಿಗ್ಬಂಧನದಿಂದ ಇರಾಕಿ ಸರ್ಕಾರದ ಕುಟುಂಬಗಳ ಮೇಲೆ ಆದ ಆರ್ಥಿಕ ಆಘಾತ.
- ದಿಗ್ಬಂಧನದಿಂದ ಪುಸ್ತಕಗಳ ತೀವ್ರ ಕೊರತೆಯಾಗಿದ್ದು ಕೇವಲ ಮೂರನೇ ಒಂದು ಭಾಗ ಪುಸ್ತಕಗಳು ಈಗ ಲಭ್ಯವಿವೆ.
- ಶಿಕ್ಷಣ ಕ್ಷೇತ್ರಕ್ಕೆ ದಿಗ್ಬಂಧನದ ಮೊದಲಿನ ಪ್ರಮಾಣದ ಹತ್ತನೇ ಒಂದು ಭಾಗ ಹಣ ಮಾತ್ರ ಲಭ್ಯವಿದೆ.
- ಅಮೆರಿಕನ್ ದಾಳಿಯಲ್ಲಿ ನಾಶವಾದ 3100 ಸ್ಕೂಲುಗಳನ್ನು ಪುನಃ ಕಟ್ಟಲು ಇರಾಕಿ ಸರ್ಕಾರದ ಬಳಿ ಹಣವಿಲ್ಲ. ಹೊಸ ಸ್ಕೂಲುಗಳನ್ನಂತೂ ಕಟ್ಟೇ ಇಲ್ಲ.
- ಪ್ರತಿ ವರ್ಷ ಶಿಕ್ಷಕರ ಸಂಖ್ಯೆ ಶೇಕಡಾ 10 ರಷ್ಟು ಕಡಿಮೆಯಾಗುತ್ತಿದೆ. ಮತ್ತು ಅಮೆರಿಕನ್ ದಾಳಿಯ ಮೊದಲು ಇರಾಕ್‌ಗೆ ಅನಕ್ಷರತೆ ನಿರ್ಮೂಲನಕ್ಕೆ ಅಂತರ್ರಾಷ್ಟ್ರೀಯ ಪ್ರಶಸ್ತಿ ಸಿಕ್ಕಿತ್ತು.
- ವಿಶ್ವಸಂಸ್ಥೆ ದಿಗ್ಬಂಧನವನ್ನು ಸಡಿಲಿಸಿದರೂ ಇರಾಕ್‌ನ ಹಲವು ಪೀಳಿಗೆಗಳ ಮೇಲೆ ಅದರ ಪರಿಣಾಮ ಈಗ ಶಾಶ್ವತವಾದಂತಾಗಿದೆ.

ಗ್ರೀಸ್‌ನಲ್ಲಿ ಶಿಕ್ಷಣ-ವಿರೋಧಿ 'ಸುಧಾರಣೆ'ಗಳಿಗೆ ವಿದ್ಯಾರ್ಥಿಗಳ ತೀವ್ರ ವಿರೋಧ

ಗ್ರೀಕ್ ರಾಜಧಾನಿ ಅಥೆನ್ಸ್‌ನಲ್ಲಿ ಎರಡು ಸಾವಿರ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು - ಸರ್ಕಾರ ತಂದಿರುವ ಶಿಕ್ಷಣ-ವಿರೋಧಿ 'ಸುಧಾರಣೆ' ಗಳನ್ನು ವಿರೋಧಿಸಿ. ಕೆಲವೇ ದಿನಗಳ ಹಿಂದೆ ಇನ್ನೂ ದೊಡ್ಡ ಏಳು ಸಾವಿರ ವಿದ್ಯಾರ್ಥಿಗಳ ಪ್ರತಿಭಟನಾ ಪ್ರದರ್ಶನ ನಡೆದಿತ್ತು. ಶಿಕ್ಷಕರ ಅಭಾವ, ಶಿಕ್ಷಕರ ನೇಮಕಾತಿಯಲ್ಲಿ ಪರೀಕ್ಷಾ ಪದ್ಧತಿಯಲ್ಲಿ ತಂದಿರುವ ಬದಲಾವಣೆ ಗಳನ್ನು ಶಿಕ್ಷಕರೂ, ವಿದ್ಯಾರ್ಥಿಗಳೂ ವಿರೋಧಿಸುತ್ತಿದ್ದಾರೆ. ಈಗ ದೇಶದಾದ್ಯಂತ 300 ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳು ಸ್ಕೂಲುಗಳನ್ನು ವಶಪಡಿಸಿ ಕೊಂಡಿದ್ದಾರೆ. ಇದು ಕಾಲೇಜುಗಳಿಗೆ, ವಿಶ್ವವಿದ್ಯಾಲಯಗಳಿಗೆ ಹರಡುವ ಸಂಭವವಿದೆ.

15 ಸಾವಿರ ರೋಮೆನಿಯನ್ ಗಣಿಗಾರರ ಜಾಥಾ

ರೋಮೆನಿಯಾದ 15 ಸಾವಿರ ಗಣಿಗಾರರು ದೀರ್ಘಕಾಲದ ಮುಷ್ಕರ ಆರಂಭಿಸಿದ್ದಾರೆ. ಮುಷ್ಕರ ಈಗಾಗಲೇ 3ನೇ ವಾರದಲ್ಲಿ ಕಾಲಿಕ್ಕಿದೆ. ಮುಷ್ಕರವನ್ನು ಪರಿಹರಿಸಲು ಸರ್ಕಾರ ಮುತುವರ್ಜಿ ವಹಿಸದಿರುವುದನ್ನು ಪ್ರತಿಭಟಿಸಿ ರಾಜಧಾನಿಗೆ ಜಾಥಾ ಹೊರಟಿದ್ದಾರೆ. ಗಣಿಗಾರರಿಗೆ ಹಲವು ತಿಂಗಳಿಂದ ಸಂಬಳ ಕೊಡದಿರುವುದು, ಗಣಿಗಳನ್ನು ಮುಚ್ಚಲು ಸರ್ಕಾರ ಹೊರಟಿರುವುದನ್ನು ಅವರು ಪ್ರತಿಭಟಿಸುತ್ತಿದ್ದಾರೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ, ಸರ್ಕಾರ ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಲು ತಯಾರಿ ನಡೆಸುತ್ತಲಿದೆ. ಜಾಥಾ ಬರುತ್ತಿರುವ ಹಲವಾರು ಕಡೆ ಗಣಿಗಾರರಿಗೂ ಸೈನಿಕರಿಗೂ ಘರ್ಷಣೆ ಆಗಿದೆ. ಹಲವಾರು ಕಡೆ ಸೈನ್ಯ ಗಣಿಗಾರರ ವಿರುದ್ಧ ಟ್ಯಾಂಕ್, ಸ್ಫೋಟಕಗಳನ್ನು ಬಳಸಿತ್ತು. ಗಣಿಗಾರರು ಸ್ಫೋಟಕಗಳಿಂದ ಪ್ರತಿ ಏಟು ಕೊಡುತ್ತಿದ್ದಾರೆ.



ಇಂಡೋನೇಶ್ಯಾದಲ್ಲಿ ಕೋಮುವಾದಿ ದಂಗೆಗಳಿಗೆ 47 ಬಲಿ - ಬಡತನ ಐದು ಪಟ್ಟು ಜಾಸ್ತಿ

ಇಂಡೋನೇಶ್ಯಾದ ಪೂರ್ವ ಪ್ರಾಂತ್ಯಗಳಲ್ಲಿ ಕೋಮುವಾದಿ ದಂಗೆಗಳು ಭುಗಿಲೆದ್ದಿವೆ. ಕ್ರಿಶ್ಚಿಯನ್ - ಮುಸ್ಲಿಮರ ನಡುವೆ ಹಲವಾರು ಕಾದಾಟ ನಡೆದಿದ್ದು, 47 ಕ್ಕಿಂತಲೂ ಹೆಚ್ಚು ಜನರು ಸತ್ತಿದ್ದಾರೆ. ಪ್ರಜಾಸತ್ತಾತ್ಮಕ ಹೋರಾಟದ ಪರಿಣಾಮ ಕಡಿಮೆ ಮಾಡಲು, ಐಎಂಎಫ್ ಆರ್ಥಿಕ ನೀತಿಗಳ ವಿರುದ್ಧ ಆಕ್ರೋಶವನ್ನು ಬೇರೆಡೆ ತಿರುಗಿಸಲು ಪಟ್ಟಭದ್ರ ಹಿತಾಸಕ್ತಿಗಳನ್ನು ಈ ದಂಗೆಗಳಿಗೆ ಕುಮ್ಮಕ್ಕು ಕೊಡುತ್ತಿವೆ ಎಂಬುದು ಸ್ಪಷ್ಟ.

ಇಂಡೋನೇಶಾದಲ್ಲಿ ಕಳೆದ ಒಂದೂವರೆ ವರ್ಷಗಳಿಂದ ತಲೆದೋರಿದ ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಬಡತನ ಸಂಖ್ಯೆ 2 ಕೋಟಿಯಿಂದ 10 ಕೋಟಿ ಏರಿದೆ. ಇದು ಇಂಡೋನೇಶಾದ ಜನಸಂಖ್ಯೆಯ ಸುಮಾರು ಅರ್ಧದಷ್ಟು. ಇದು ಆರ್ಥಿಕ ಬಿಕ್ಕಟ್ಟು ಇಂಡೋನೇಶ್ಯಾದ ಮೇಲೆ ಬೀರಿದ ಪರಿಣಾಮ.

ಗ್ವಾಟೆಮಾಲಾದಲ್ಲಿ ಭೂಮಿಗಾಗಿ ರೈತರ ರಾಸ್ತಾರೋಕೋ ಚಳುವಳಿ

ಗ್ವಾಟೆಮಾಲದ ರೈತರು ಮೆಕ್ಸಿಕೋಗೆ ಹೋಗುವ ಹೆದ್ದಾರಿಯಲ್ಲಿ ರಾಸ್ತಾ ರೋಕೋ ಚಳುವಳಿ ನಡೆಸಿದ್ದಾರೆ. ಸರ್ಕಾರ ಬಡ ರೈತರಿಗೆ ಭೂಮಿ, ಕೊಂಡುಕೊಳ್ಳಲು ಸಾಲ ಕೊಡಬೇಕೆಂದು ಮಾಡಿರುವ ಯೋಜನೆಗೆ ಸರ್ಕಾರ ಒಪ್ಪಿಗೆ ಕೊಡುವವರೆಗೆ ಈ ರೋಕೋ ಚಳುವಳಿ ಮುಂದುವರೆಸುವುದಾಗಿ ರೈತರು ಎಚ್ಚರಿಕೆ ಕೊಟ್ಟಿದ್ದಾರೆ. ಗ್ವಾಟೆಮಾಲಾದ ಭೂಮಿಯನ್ನು ದೈತ್ಯ ಅಮೆರಿಕದ ಕಂಪನಿಗಳು ಕಬಳಿಸಿದ್ದು ಬಡ ರೈತರಿಗೆ ಕೆಲಸ, ಭೂಮಿ ಎರಡೂ ಇಲ್ಲದೆ ಕಂಗಾಲಾಗಿದ್ದಾರೆ.

ವಿಶೇಷತೆಯಾಗಿದೆ. ಯಾವುದೇ ಕೋಮಿನ ಮೂಲಭೂತವಾದವು ಈ ವಿಶೇಷತೆಗೆ ಧಕ್ಕೆಯುಂಟು ಮಾಡುತ್ತದೆ ಎಂದು ಸಮುದಾಯದ ಅಧ್ಯಕ್ಷ ಸಿ. ಆರ್. ಭಟ್ ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳು ಚಳುವಳಿಯಲ್ಲಿ ಮುಂದಾಗಬೇಕು ಎಂದು ಇನ್ನೋರ್ವ ಅತಿಥಿ ಬಂಡಾಯ ಸಾಹಿತಿ ಶ್ರೀಶೈಲ ಹುದ್ದಾರ ಹೇಳಿದರು. ಈ ಸಮ್ಮೇಳನವೂ ಮುಂದಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಪ್ರಗತಿ ಪರ ಚಳುವಳಿ ಕಟ್ಟಲಿಕ್ಕೆ ಸಹಾಯವಾಗಲೆಂದು ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಕೆ.ಎನ್ ಉಮೇಶ್ ಹಾರೈಸಿದರು. ನೂತನವಾಗಿ ಆಯ್ಕೆಗೊಂಡ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಬಿ.ವಿ. ಕೋರಿಮಠ ಅಧ್ಯಕ್ಷತೆ ವಹಿಸಿದ್ದರು.

ನೂತನ ಪದಾಧಿಕಾರಿಗಳು:

ಅಧ್ಯಕ್ಷರಾಗಿ ಬಿ.ವಿ. ಕೋರಿಮಠ, ಕಾರ್ಯದರ್ಶಿಯಾಗಿ ದಾಕ್ಷಾಯಿಣಿ ಉಳ್ಳಾಗಡ್ಡಿಮಠ, ಉಪಾಧ್ಯಕ್ಷರಾಗಿ ಪ್ರಕಾಶ ಅವರಾದಿ, ಸಹಕಾರ್ಯದರ್ಶಿಗಳಾಗಿ ಸವಿತಾ ಪಾಟೀಲ, ಎಲ್. ಕುಲಕರ್ಣಿ ಸದಸ್ಯರಾಗಿ ಎಂ.ಎಸ್. ಶಿವಳ್ಳಿ, ಪಿ.ವೈ. ಮರೆಕ್ಕನವರ ಜೆ.ಎಂ. ಧಾರವಾಡ, ಶಂಕರಗೌಡ ಪಾಟೀಲ, ಗುರು ಕೆಂಚನಗೌಡ, ಶಂಕರ ತೋರಗಲ್, ಅಣ್ಣಿಗೇರಿ ಜಗದೀಶ್ ತೆಗ್ಗಿನಮನಿ ಎನ್.ಜಿ. ಜೇಡರ.

ರಾಯಚೂರು ಎಸ್.ಎಫ್.ಐ. 14ನೇ ಜಿಲ್ಲಾ ಸಮ್ಮೇಳನ

ಜನವರಿ 16,17,18 ರಂದು ಎಸ್.ಎಫ್.ಐ.ನ 14ನೇ ರಾಯಚೂರು-ಕೊಪ್ಪಳ ಜಿಲ್ಲಾ ಸಮ್ಮೇಳನ ರಾಯಚೂರು ರೈತ ಭವನದಲ್ಲಿ ನಡೆಯಿತು. ಸಮ್ಮೇಳನದ ಅಂಗವಾಗಿ ವಿದ್ಯಾರ್ಥಿಗಳಿಂದ ರ್‍ಯಾಲಿ ನಡೆಯಿತು..

ಸಮ್ಮೇಳನವನ್ನು ವಿಚಾರವಾದಿ, ಚಿತ್ರನಟರಾದ ಜಿ.ಕೆ. ಗೋವಿಂದರಾವ್ ಉದ್ಘಾಟಿಸಿ ಮಾತನಾಡುತ್ತ ಎಲ್ಲಿಯವರೆಗೂ ದೇಶದಲ್ಲಿ ಮಠಾದೀಶರು ನಾಶವಾಗುವುದಿಲ್ಲವೋ ಅಲ್ಲಿವರೆಗೂ ಜಾತೀಯತೆ, ಕೋಮುವಾದವನ್ನು ಅಳಿಸಿ ಹಾಕಲು ಸಾಧ್ಯವಿಲ್ಲವೆಂದರು. ಮತಾಂಧ ಶಕ್ತಿಗಳು ಈ ಹಿಂದೆ ಮುಸಿಮರ ಮೇಲೆ ದಾಳಿ ಮಾಡುತ್ತಿದ್ದರು, ಈಗ ಕ್ರಿಶ್ಚಿಯನ್ ಮಿಶನರಿ ಮೇಲೆ ದಾಳಿ ಮಾಡುತ್ತಿದ್ದಾರೆ. ಇದು ನಿಲ್ಲದೇ ಹೊದರೆ ಮುಂದಿನ ದಿನಗಳಲ್ಲಿ ನಮ್ಮ ನಿಮ್ಮ ಮೇಲೆ ಈ ಕಾವಿಪಡೆಗಳು ದಾಳಿ ಮಾಡಬಹುದು. ಸುರತ್ಕಲ್ ಇನ್ನಿತರ ಕಡೆ ನಡೆಸಿದ ದಾಳಿಯನ್ನು ಪ್ರಜ್ಞಾವಂತ ಜನತೆ ಅರಿತು ಇಂಥ ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಬೇಕೆಂದರು.

ಇಂದು ಶಿಕ್ಷಣದಲ್ಲಿ ಕೋಮುವಾದವನ್ನು ಸೇರಿಸಿ ಮುಗ್ಧ ಮಕ್ಕಳ ಮನಸ್ಸಿನಲ್ಲಿ ಕೋಮುವಾದವನ್ನು ಬಿತ್ತುತ್ತಿದ್ದಾರೆಂದು ಎಸ್. ಎಫ್.ಐ.ನ ರಾಜ್ಯ ಅಧ್ಯಕ್ಷರಾದ ಕೆ.ಎನ್. ಉಮೇಶ್ ಖೇದ ವ್ಯಕ್ತಪಡಿಸಿದರು.

ಸ್ವಾಗತ ಸಮಿತಿ ಮುಖಂಡರಾದ ನಾಗನಗೌಡ ಮಾತನಾಡಿದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಬಸವರಾಜರೆಡ್ಡಿ ಎಸ್.ಎಫ್.ಐ.ನ ವಿದ್ಯಾರ್ಥಿಗಳು ಬಡ ವಿದ್ಯಾರ್ಥಿಗಳಿಗೆ ಮಾರಕವಾದ ಡೋನೇಷನ್ ವಿರುದ್ಧ ಹೋರಾಟ ಮಾಡಬೇಕೆಂದು ಕರೆ ನೀಡಿದರು. ವೇದಿಕೆ ಮೇಲೆ ವಿದ್ಯಾರ್ಥಿ ಜನತಾದಳದ ರಾಷ್ಟ್ರೀಯ ಕಾರ್ಯದರ್ಶಿ ಮಹೇಶ ಪಾಟೀಲ್, ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷರಾದ ಚಂದ್ರಪ್ಪ ಹೊಸಕೇರಾ, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷರಾದ ನಾಗರಾಜ, ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪ, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ವಿ.ಎಸ್. ಯಲ್ಲಪ್ಪ ಉಪಸ್ಥಿತರಿದ್ದರು. ಎಸ್.ಎಫ್.ಐ. ಜಿಲ್ಲಾ ಉಪಾಧ್ಯಕ್ಷ ಟಿ.ಎಸ್. ಶರಣಬಸವ ಸ್ವಾಗತಿಸಿದರೆ ಯಲ್ಲಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು. ಶಿವಮೂರ್ತಿ ವಂದನಾರ್ಪಣ ಮಾಡಿದರು.

ನೂತನ ಪದಾಧಿಕಾರಿಗಳು:

ಜಿಲ್ಲಾ ಅಧ್ಯಕ್ಷರಾಗಿ ಜಿ.ವಿರೇಶ್ ವೀರಭದ್ರ ಮೌಲಸಾಬ ಸಾಲಗುಂದಾ, ಉಪಾಧ್ಯಕ್ಷರು ತಿಪ್ಪಯ್ಯ ನಾಯಕ, ಕಾರ್ಯದರ್ಶಿ ಶರಣಪ್ಪ ಸೈದಾಪುರ ಶಿವಪ್ಪ ಗೌಡರ, ಸಹಕಾರ್ಯದರ್ಶಿ ಶಶಿಕಲಾ, ರೇಷ್ಮಾ ಗೋಪಾಲ ನಾಯಕ, ಚಿಂದಾನಂದ ದೊರೆ, ಶಿವಮೂರ್ತಿ ಬಿ. ಅಮರೇಶ ಟಿ.ಮಲ್ಲಿಕಾರ್ಜುನ ಶಂಕರಗೌಡ ಸೊಮಶೇಖರ ಘರೊರಪ್ಪ ಸದಸ್ಯರಾಗಿ ಆಯ್ಕೆಯಾಗಿದ್ದರೆ.

ಎಸ್.ಎಫ್.ಐ. ಕೊಪ್ಪಳ ಜಿಲ್ಲಾ ಘಟಕ ರಚನೆ:

ಎಸ್.ಎಫ್.ಐ. ಕೊಪ್ಪಳ ಜಿಲ್ಲಾಧ್ಯಕ್ಷರಾಗಿ ನಾಗರಾಜು ಎಸ್, ಎಚ್. ಆನಂದ-ಉಪಾಧ್ಯಕ್ಷ, ಬಿ. ಹನಮೇಶ-ಕಾರ್ಯದರ್ಶಿ, ಗೋಪಿ, ಮರಿಯಪ್ಪ-ಸಹಕಾರ್ಯದರ್ಶಿ, ರೇಣುಕಾರುದ್ರಮ್ಮ ನಿರುಪಾದಿ, ವಿರುಪಾಕ್ಷಗೌಡ, ಬಸವರಾಜ, ಎಚ್. ನಾಗರಾಜ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.



ಎಸ್‌ಎಫ್‌ಐ 8ನೇ ರಾಜ್ಯಸಮ್ಮೇಳನದ ಉದ್ಘಾಟನೆ

ದೇಶದ ಆರೋಗ್ಯ ಪೀಡಕ ಕೋಮುವಾದದವಿರುದ್ಧ ಉಗ್ರ ಹೋರಾಟ

ನಮ್ಮ ಎದೆಯೊಳಗೆ ಘೋರವಾಗಿ ಕುಣಿಯುತ್ತಿರುವ ಜಾಗತೀಕರಣ ಉದಾರೀಕರಣ, ಖಾಸಗೀಕರಣ ಒಂದಡೆಯಾದರೆ, ದೇಶದ ಸಂಸ್ಕೃತಿ ಶಿಕ್ಷಣ, ಕ್ರಿಡೆ ಹಾಗೂ ಧಾರ್ಮಿಕ ನೆಲೆಗೆ ಅಪಾಯ ತಂದೊಡ್ಡಿರುವ ಕೋಮುವಾದ ದೇಶದ ಜನತೆಯುನ್ನು ಜರ್ಜರಿ ಗೊಳಿಸಿದೆ. ಈ ಘೋರ ಕೃತ್ಯಗಳ ವಿರುದ್ಧ ವಿದ್ಯಾರ್ಥಿ-ಯುವಜನತೆ ಇತರೆ ಜನ ಸಮುದಾಯುದ ಒಗ್ಗೂಡಿ ಪ್ರಬಲ ಹೋರಾಟ ನಡೆಸುವಂತೆ ಬಂಡಾಯ ಸಾಹಿತಿಗಳು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಡಾ|| ಚಂದ್ರಶೇಖರ್ ಪಾಟೀಲ್ ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದರು. ಶಿರಸಿಯಲ್ಲಿ ನಡೆದ ಭಾರತ ವಿದ್ಯಾರ್ಥಿ ಪೆಡರೇಷನ್‌ನ 8ನೇ ರಾಜ್ಯ ಸಮ್ಮೇಳನ ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಜಾತಿ, ಮತ, ಬಾಷೆ, ಧರ್ಮ ಬೇರೆ ಬೇರೆಯಾದರೂ ನಾವೆಲ್ಲ ಒಂದೆ, ನಮ್ಮದು ಬಹುಮುಖಿ ಸಂಸ್ಕೃತಿಯ ದೇಶ. ಒಂದು ಧರ್ಮದ ಒಂದು ನಮೂನೆ ಜನ ಇದೆಲ್ಲವನ್ನು ತಮ್ಮ ಸನಾತನದೃಷ್ಠಿಯಲ್ಲಿ ಬಳಸಿಕೊಳ್ಳ ಹೊರಟಿರುವುದು ಸಮಾಜದ ಆರೋಗ್ಯಕ್ಕೆ ಹಾನಿಕಾರಕ ಎಂದರು ಚಂಪಾ.

ಸಮಾಜದ ವಿವಿಧ ಭಾಗಗಳಲ್ಲಿ ತಿರಸ್ಕರಿಸಲ್ಪಟ್ಟ ಒಂದು ಜನ ವಿಭಾಗ ಕೋಮುವಾದ ದಂತಹ ವಿಷಬೀಜ ಬಿತ್ತ ಹೊರಟಿದ್ದಾರೆ. ಆದರೆ ದೇಶದ ಪ್ರಜ್ಞಾವಂತ ಮತದಾರ ಎಲ್ಲಾ ಜಾತಿ, ಧರ್ಮ, ಭಾಷೆಗಳ ಎಲ್ಲೆಗಳನ್ನು ಬುಡಮೇಲು ಮಾಡುತ್ತಾ ಬಂದಿದ್ದಾರೆ ಎಂದು ಸಂಘ ಪರಿವಾರಕ್ಕೆ ಎಚ್ಚರಿಸಿದರು.

ಸಂಘ ಪರಿವಾರದ ಜನ ಒಳಒಳಗೆ ವಿಷ ಹರಿಸುತ್ತಿದ್ದು ಇಂದು ಅಧಿಕಾರಕ್ಕೆ ಬಂದ ಮೇಲೆ ಎಂತಹ ಘೋರ ಕೃತ್ಯದಲ್ಲಿ ತೊಡಗಿದ್ದಾರೆ ಎಂಬುದು ನಮ್ಮ ಕಣ್ಮುಂದೆ ಇದೆ. ಇವರು ಮತ್ತೆ ಅಧಿಕಾರಕ್ಕೆ ಬರಲಾರರೆಂದು ಚಂದ್ರಶೇಖರ್ ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದವು.

ಎಡ ಪ್ರಜಾಪ್ರಭುತ್ವವಾದಿಗಳು ಸೇರಿದಂತೆ ಎಲ್ಲರು ಸೂಕ್ಷ್ಮಾನು ಸೂಕ್ಷ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯು ಬಿಟ್ಟು ನಮ್ಮೆಲರ ಹಾಗೂ ಜಾತ್ಯಾತೀತ ಪ್ರಜಾಪ್ರಭುತ್ವದ ಶತ್ರು ಕೋಮುವಾದದ ವಿರುದ್ಧ ಹೋರಾಟ ನಡೆಸ ಬೇಕಾದ ಅನಿವಾರ್ಯತೆ ಬಗ್ಗೆ ಚಂಪಾ ವಿವರಿಸಿದರು.

ದೇಶದ ಜಾತ್ಯತೀತ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರ ಪ್ರಜ್ಞಾಪೂರ್ವವಾಗಿ ಕಳೆದ ಹತ್ತು ತಿಂಗಳುಗಳಿಂದ ಸಂವಿಧಾನ ವಿರೋದಿ ಕೃತ್ಯಗಳಲ್ಲಿ ತೊಡಗಿದೆ ಎಂದು ಮುಖ್ಯ ಅತಿಥಿಗಳಾದ ಶಾಸಕರೂ ಹಾಗೂ ಎಸ್.ಎಫ್.ಐ. ಸಂಸ್ಥಾಪಕ ಸದಸ್ಯರೂ ಆದ ಜಿ.ವಿ.ಶ್ರೀರಾಮರೆಡ್ಡಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಗಾಂಧಿ ಜನ್ಮ ಭೂಮಿ ಗುಜರಾತ್ ಅವರ ಕರ್ಮ ಭೂಮಿ ಭಾರತವನ್ನು ಕೋಮುಜ್ವಾಲೆಗೆ ತಳ್ಳಿರುವ ಸಂಘ ಪರಿವಾರ ದೇಶದ ಇತಿಹಾಸವನ್ನು ರಕ್ತ ಮಯುಗೊಳಿಸುವ ನಿರಂತರಯತ್ನ ನಡೆಸುತ್ತಿದೆ. ಗಾಂಧಿಜಿಯನ್ನು ಕೊಂದ ಈ ಪರಿವಾರದ ಜನದ ಜನವರಿ 30 ರಂದು ಉಪವಾಸ ಆಚರಿಸುವ ಸೋಗಲಾಡಿತ ವನ್ನು ಶ್ರೀರಾಮ ರೆಡ್ಡಿ ಖಂಡಿಸಿದರು.

ದೇಶದ ಮೂಲ ಭೂತ ಸಮಸ್ಯೆ ಬಗೆ ಹರಿಸಲು ಚರ್ಚೆ ಆರಂಭಿಸಬೇಕಾದ ಕ್ರಮ ಕೈಗೊಳ್ಳಬೇಕಾದ ಈ 'ಸಮರ್ಥ' ಪ್ರಧಾನಿ ತಮಗೆ ಒಪ್ಪಿಗೆಯಾದ ಧರ್ಮವನ್ನು ಒಪ್ಪಿಕೊಳ್ಳುವ ಸಂವಿಧಾನತ್ಮಕ ಹಕ್ಕಿಗೆ ಸವಾಲೆಸೆದು ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಲಿ ಎಂದು ಹೇಳುವುದು ಅವರ ಒಳಭಾವನೆ ಬಯಲಾಗುತ್ತಿದೆ ಎಂದು ಛೇಡಿಸಿದರು.

ಸಾಮಾಜಿಕ ನೆಲೆಕಳೆದುಕೊಂಡವರು ಕೋಮುವಾದಕ್ಕೆ ಜಾತಿವಾದಕ್ಕೆ ಧುಮುಕಿದ್ದಾರೆ ಎಂದ ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಷಣ್ಮುಖಗೌಡ ಖಾಸಗೀಕರಣ, ವ್ಯಾಪಾರಿ ಕರಣ ಕೋಮುವಾದದ ವಿರುದ್ಧದ ಹೋರಾಟದಲ್ಲಿ ಎಸ್.ಎಫ್.ಐ. ಮುಂಚೂಣಿ ಪಾತ್ರ ವಹಿಸ ಬೇಕೆಂದರು.

ಶಿಕ್ಷಣದಲ್ಲಿ ಕೇಸರೀಕರಣ ಕೋಮು ಗಲಭೆ, ಜಾಗತೀಕರಣದ ವಿರುದ್ಧ ವಿದ್ಯಾರ್ಥಿ ಸಮ್ಮೇಳನ ಚರ್ಚಿಸಬೇಕೆಂದ ಸಮ್ಮೇಳನದ ಸ್ವಾಗತ ಸಮಿತಿ ಗೌರವಾಧ್ಯಕ್ಷರು ಹಾಗೂ ಅಬಕಾರಿ ರಾಜ್ಯ ಸಚಿವರಾದ ಜೈವಂತ್ ಅಂತರ್‌ರಾಷ್ಟ್ರೀಯ ವಾಗಿ ದೇಶದ ಗೌರವಕ್ಕೆ ಧಕ್ಕೆ ತರುತ್ತಿರುವ ಕೋಮುವಾದೀ ಕೃತ್ಯಗಳ ವಿರುದ್ಧ ಹೋರಾಟ ನಡೆಸುವುದರ ಜೊತೆಗೆ ದೇಶದ ಸಮಗ್ರತೆ ಕಾಪಾಡುವ ಹೊರೆ ವಿದ್ಯಾರ್ಥಿಗಳ ಹೆಗಲ ಮೇಲಿದೆ ಎಂದರು.

ಪ್ರಾಸ್ತಾವಿಕ ಭಾಷಣ ಮಾಡಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಶಿಕ್ಷಣಕ್ಕಾಗಿ ಹಾತೋರೆಯುತ್ತಿರುವ ವಿದ್ಯಾರ್ಥಿಗಳು ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ ಹಾಗೂ ಕೇಸರೀಕರಣಗಳ ವಿರುದ್ಧ ಪ್ರಬಲ ಹೋರಾಟ ನಡೆಸುವಂತೆ ರಾಷ್ಟ್ರಾದ್ಯಂತ ಎಸ್.ಎಫ್.ಐ. ಕಾರ್ಯಪ್ರವೃತ್ತವಾಗಿದೆ. ಪ್ರಜ್ಞಾವಂತ ಮತ್ತು ಜವಬ್ದಾರಿಯುತ ವಿದ್ಯಾರ್ಥಿ ಚಳುವಳಿ ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಈ ಸಮ್ಮೇಳನ ನಡೆಯುತ್ತಿದೆ ಎಂದರು.

ಸ್ವಾಗತ ಸಮಿತಿ ಅಧ್ಯಕ್ಷರಾದ ಎಸ್. ಶಾಂತರಾವ್ ನಾಯಕ್ ಸ್ವಾಗತ ಕೋರಿದರೆ, ನಿರೂಪಣೆಯನ್ನು ವಿಠಲ ಭಂಡಾರಿ ನೇರವೇರಿಸಿ ವಂದನೆಯನ್ನು ಸ್ವಾಗತ ಸಮಿತಿ ಕಾರ್ಯದರ್ಶಿ ಯುವರಾಜ ಕಂಬಾಳಿ ಮಠ ಸಲ್ಲಿಸಿದರು.

ಉದ್ಘಾಟನಾ ಸಮಾರಂಭಕ್ಕೆ ಮುಂಚಿ ಸಾವಿರಾರು ವಿದ್ಯಾರ್ಥಿಗಳು ಶಿರಸಿಯ ವಿಕಾಸ ಮೈದಾನದಿಂದ ಹೊರಟು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಮೊದಲ ಬಾರಿ ಉತ್ತರ ಕನ್ನಡದಲ್ಲಿ ಕೋಮುವಾದದ ವಿರುದ್ಧ ನಡೆದ ಭಾರೀ ಮೆರವಣಿಗೆ ಇದಾಗಿತ್ತು. ಸಹಸ್ರ ಸಹಸ್ರ ಶಿರಸಿ ನಾಗರೀಕರು ಈ ಮೆರವಣಿಗೆ ವೀಕ್ಷಿಸಿ ವಿಸ್ಮಯಗೊಂಡರು.

ವರದಿ: ಜಯರಾಂ

ಅಡ್ಮಿರಲ್ ಭಾಗವತ್ ವಜಾ

ಜಾರ್ಜ್ ಫರ್ನಾಂಡಿಸ್ ಉತ್ತರ ಕೊಡಲೇಬೇಕಾಗಿದೆ



ಅಡ್ಮಿರಲ್ ಭಾಗವತ್‌ರವರನ್ನು ನಾವಿಕ ಪಡೆಯ ಸೇನಾಧಿಪತಿಯ ಸ್ಥಾನದಿಂದ ವಜಾ ಮಾಡಿದ ಮೂರು ವಾರಗಳ ನಂತರವೂ ಸರಕಾರ ಈ ವ್ಯವಹಾರದಲ್ಲಿನ ಪ್ರಮುಖ ಪ್ರಶ್ನೆಗೆ ಉತ್ತರ ನೀಡುವುದನ್ನು ತಪ್ಪಿಸಿಕೊಳ್ಳುತ್ತಾ ಇದೆ. ಹಲವಾರು ಹೇಳಿಕೆಗಳು ಬಂದವು, ಸರಕಾರ ಉದ್ದೇಶಪೂರ್ವಕವಾಗಿ ಹಲವು ಸುದ್ದಿಗಳನ್ನು ಹರಿಯಬಿಟ್ಟಿತು. ಅಡ್ಮಿರಲ್ ಭಾಗವತ್ ಸತತವಾಗಿ ನಾಗರಿಕ ಅಧಿಕಾರ ವ್ಯಾಪ್ತಿಯುನ್ನು ಪ್ರತಿರೋಧಿಸಿದರು ಎನ್ನಲಾಯಿತು. ಪ್ರಧಾನ ಮಂತ್ರಿಗಳಂತೂ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯೂ ಇದರಲ್ಲಿದೆ ಎಂದು ಸೂಚ್ಯವಾಗಿ ಹೇಳಿದರು. ಆದರೆ ಇವೆಲ್ಲದರ ನಡುವೆ ಈ ವ್ಯವಹಾರದಲ್ಲಿ ಮೂಡಿಬಂದ ಅತ್ಯಂತ ಆತಂಕಕಾರಿ ಸಂಗತಿಗೆ ಉತ್ತರ ಇನ್ನೂ ಸಿಕ್ಕಿಲ್ಲ. ಕೇಂದ್ರ ಸಂಪುಟದ ನೇಮಕ ಸಮಿತಿ ವೈಸ್ ಅಡ್ಮಿರಲ್ ಹರಿಂದರ್ ಸಿಂಗ್‌ರನ್ನು ನಾವಿಕ ಪಡೆಗಳ ಉಪ ಸೇನಾಧಿಪತಿಯಾಗಿ ನೇಮಕ ಮಾಡಿದ್ದನ್ನು ಅಡ್ಮಿರಲ್ ಭಾಗವತ್ ಒಪ್ಪಿಕೊಳ್ಳಲು ನಿರಾಕರಿಸಿದರು ಎಂಬುದು ಈಗ ಎಲ್ಲರಿಗೂ ತಿಳಿದ ವಿಷಯ. ಇದರ ಮೊದಲು ಹರಿಂದರ್ ಸಿಂಗ್‌ರವರನ್ನು ಕುರಿತ ಗುಪ್ತ ವರದಿಯಲ್ಲಿದ್ದ ಹಾಗೂ ಅಡ್ಮಿರಲ್ ಭಾಗವತ್‌ರವರು ಅನುಮೋದಿಸಿದ್ದ ಪ್ರತಿಕೂಲ ಟಿಪ್ಪಣಿಗಳನ್ನು ರಕ್ಷಣಾ ಮಂತ್ರಾಲಯ ತೆಗೆದುಹಾಕಿತ್ತು.

ಇದನ್ನು ನೇಮಕ ಮಾಡುವ ಅಧಿಕಾರ ವ್ಯಾಪ್ತಿ ಯಾರಿಗಿದೆ, ಇದನ್ನು ಉಲ್ಲಂಘಿಸಲಾಗಿದೆಯೇ ಎಂಬುದು ಒಂದು ವಿವಾದವಾಗಿ ಕಾಣುವುದು ಸರಿಯಲ್ಲ. ಏಕೆಂದರೆ ಇದರಿಂದ ಸರಕಾರದ ನಿಲುವಿನ ಅಪಾಯಕಾರಿ ಪರಿಣಾಮಗಳು ಸಂಪೂರ್ಣವಾಗಿ ನಮಗೆ ಕಾಣದೆ ಹೋಗುತ್ತದೆ.

ವೈಸ್ ಅಡ್ಮಿರಲ್ ಹರಿಂದರ್ ಸಿಂಗ್ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಸಲ್ಲಿಸಿದ ಒಂದು ರಿಟ್ ಅರ್ಜಿಗೆ ಲಗತ್ತಿಸಿದ ದೂರಿನಲ್ಲಿ ಅಡ್ಮಿರಲ್ ಭಾಗವತ್ ಕೋಮು ಬುದ್ದಿಯವರು, ಅವರ ಹೆಂಡತಿ 'ಅರೆ ಮುಸ್ಲಿಂ', ಇದರಿಂದಾಗಿ ಅವರ ಸುತ್ತ ಒಂದು ನಿರ್ದಿಷ್ಟ ಕೋಮಿನ ಅಧಿಕಾರಿಗಳೇ ಇದ್ದಾರೆ ಎಂದು ಆಪಾದಿಸಿರುವುದೂ ಈಗ ಎಲ್ಲರಿಗೂ ತಿಳಿದಿರುವ ಸಂಗತಿ. ಸಶಸ್ತ್ರ ಪಡೆಗಳ ಒಬ್ಬ ಅಧಿಕಾರಿ ನ್ಯಾಯಾಲಯಕ್ಕೆ ಸಲ್ಲಿಸಿದ ಒಂದು ಅರ್ಜಿಯಲ್ಲಿ ಇಂತಹ ಒಂದು ಕೋಮುವಾದಿ ಹೇಳಿಕೆ ಕೊಟ್ಟರೆ ಸಾಮಾನ್ಯವಾಗಿ ಅಂತಹ ಅಧಿಕಾರಿಯ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ. ಕೇವಲ ಈ ಕಾರಣಕ್ಕಾಗಿಯೇ ಆತನನ್ನು ನಾವಿಕ ಪಡೆಯಿಂದ ವಜಾ ಮಾಡಬೇಕಿತ್ತು ಎಂಬುದನ್ನು ಈಗ ಹಲವರು ಒಪ್ಪುತ್ತಾರೆ.

ಆದರೆ ಹಾಗೆ ಮಾಡುವ ಬದಲು ಬಿಜೆಪಿ ಸರಕಾರ ನಾವಿಕ ಪಡೆಯ ಉಚ್ಚ ಕಚೇರಿ ಈ ಅಧಿಕಾರಿಯ ವಿರುದ್ಧ ದಾಖಲಿಸಿದ್ದ ಪ್ರತಿಕೂಲ ಟಿಪ್ಪಣಿಗಳನ್ನು ತೆಗೆದು ಹಾಕಿತು. ನಂತರ ಇಂತಹ ಅಧಿಕಾರಿಯನ್ನೇ ನಾವಿಕ ಪಡೆಯ ಉಪಸೇನಾಧಿಪತಿಯನ್ನಾಗಿ ಹೇರಿತು.

ಬಿಜೆಪಿ-ಆರ್‌ಎಸ್‌ಎಸ್ ಕೂಟ ಅಧಿಕಾರಕ್ಕೆ ಬಂದರೆ ಯಾವುದೇ ಸಂಸ್ಥೆ ಕೋಮುವಾದಿಗಳ ದಮನಕ್ಕೆ ಒಳಗಾಗದೆ ಇರುವುದಿಲ್ಲ ಎಂದು ಸಿಪಿಐ(ಎಂ) ಈ ಹಿಂದೆಯೇ ಎಚ್ಚರಿಸಿತ್ತು. ಬಹಿರಂಗವಾಗಿಯೇ ಒಂದು ಕೋಮುವಾದಿ ಪಕ್ಷಪಾತವನ್ನು ಪ್ರದರ್ಶಿಸುವ ಒಬ್ಬ ಅಧಿಕಾರಿಗೆ ಪ್ರೋತ್ಸಾಹ ನೀಡುವ, ಆಶ್ರಯ ನೀಡುವ ಪ್ರಯತ್ನ ಒಂದು ಅಪಾಯಕಾರಿ ಮುನ್ಸೂಚನೆ. ಸಶಸ್ತ್ರ ಪಡೆಗಳ ಉಚ್ಚ ಅಧಿಕಾರಿಗಳನ್ನು ಹಿಂದುತ್ವದ ಅಚ್ಚಿನಲ್ಲಿ ತರಲು ಪ್ರಯತ್ನಗಳು ನಡೆಯುತ್ತವೆ.

ಈ ವೈಸ್ ಅಡ್ಮಿರಲ್ ತಳೆದ ನಿಲುವಿನ ಬಗ್ಗೆ ಪ್ರಧಾನ ಮಂತ್ರಿಗಳಾಗಲೀ, ರಕ್ಷಣಾ ಮಂತ್ರಿಗಳಾಗಲೀ ಆಕ್ಷೇಪಿಸಿಲ್ಲ ಮಾತ್ರವಲ್ಲ, ಅಡ್ಮಿರಲ್ ಭಾಗವತರನ್ನು ವಜಾ ಮಾಡಿದ ಕೆಲವೇ ದಿನಗಳ ನಂತರ ಪ್ರಧಾನ ಮಂತ್ರಿಗಳು ಅಂಡಮಾನ್-ನಿಕೋಬಾರ್ ದ್ವೀಪಗಳಿಗೆ ಭೇಟಿ ನೀಡಿದಾಗ ಈ ವೈಸ್ ಅಡ್ಮಿರಲ್ ಹರಿಂದರ್ ಸಿಂಗ್ ಮನೆಯಲ್ಲಿ ಆತನ ಕುಟುಂಬದೊಂದಿಗೆ ಭೋಜನಕ್ಕೂ ಹೋದರು.

ಇದೊಂದು ದರ್ಪದ ಕ್ರಮ ಎಂದು ಮೂರೂ ಸಶಸ್ತ್ರ ಪಡೆಗಳ ಸುಮಾರಾಗಿ ಎಲ್ಲಾ ನಿವೃತ್ತ ಸೇನಾಧಿಪತಿಗಳು ಖಂಡಿಸಿದ್ದಾರೆ. ರಾಷ್ಟ್ರೀಯ ಭದ್ರತೆಯ ನೆಪವೊಡ್ಡಿ ಈ ವ್ಯವಹಾರವನ್ನು ಮುಚ್ಚಿಹಾಕಲು ಸಾಧ್ಯವಿಲ್ಲ. ಸಶಸ್ತ್ರ ಪಡೆಗಳನ್ನು ಹೀಗಳೆಯುವ, ಸಮಗ್ರ ವ್ಯಕ್ತಿತ್ವದ ಪ್ರಾಮಾಣಿಕ ಹಾಗೂ ದೇಶಪ್ರೇಮಿ ಅಧಿಕಾರಿಗಳನ್ನು ಹತಾಶರನ್ನಾಗಿ ಮಾಡುವ ಗಂಭೀರ ಅಪರಾಧಕ್ಕೆ ಜಾರ್ಜ್ ಫರ್ನಾಂಡೀಸ್ ಉತ್ತರ ಕೊಡಬೇಕಾಗಿದೆ.

(ಐಎನ್‌ಎನ್)

ಭೂಮಾಲಕರ ಅಟ್ಟಹಾಸ.........

ಪುಟ 1 ರಿಂದ

ಈ ಕಾನೂನುಬಾಹಿರ ಖಾಸಗೀ ಸೇನೆಯ ಚಟುವಟಿಕೆಗಳನ್ನು ತಡೆಯುವಲ್ಲಿ ರಾಜ್ಯ ಆಡಳಿತ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಈ ಕಗ್ಗೊಲೆಗಳು ತೋರಿಸುತ್ತವೆ ಎಂದಿರುವ ಪೊಲಿಟ್ ಬ್ಯೂರೋ ರಾಜ್ಯದ ಅತ್ಯಂತ ದಲಿತ ವಿಭಾಗಗಳ ಜೀವರಕ್ಷಣೆಯಲ್ಲಿ ಅಸಮರ್ಥವಾಗಿರುವುದಕ್ಕೆ ರಾಜ್ಯ ಸರಕಾರವನ್ನು ದೂಷಿಸಬೇಕಾಗುತ್ತದೆ ಎಂದಿದೆ.

ಈ ಹತ್ಯಾಕಾಂಡ ನಡೆಸಿದ ಎಲ್ಲರನ್ನೂ ತಕ್ಷಣ ಬಂಧಿಸಬೇಕು, ರಣಬೀರ್ ಸೇನೆಯನ್ನು ದಮನಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೊ ಈ ಕಗ್ಗೊಲೆಗೆ ಬಲಿಯಾದವರ ಕುಟುಂಬಗಳ ಸದಸ್ಯರಿಗೆ, ಬಂಧು-ಬಾಂಧವರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಈ ಕಗ್ಗೊಲೆಯನ್ನು ಉಗ್ರವಾಗಿ ಖಂಡಿಸಿರುವ ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ " 1992ರಲ್ಲಿ 61 ಜನಗಳನ್ನು ಕೊಂದ ರಣಬೀರ್ ಸೇನೆಯ ಕ್ರೂರಿಗಳು ಈಗ ಮತ್ತೊಮ್ಮೆ ತಮ್ಮ ಅಟ್ಟಹಾಸ ತೋರಿದ್ದಾರೆ. ಗೌರವಾನ್ವಿತ ರಾಷ್ಟ್ರಪತಿಗಳು ಗಣರಾಜೋತ್ಸವದ ಸಂದರ್ಭದಲ್ಲಿ ದಲಿತರ ಮೇಲೆ ದಬ್ಬಾಳಿಕೆ ಹೆಚ್ಚುತ್ತಿರುವುದರ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಾಗಿದೆ" ಎಂದಿದೆ.

ವಾರದ ವ್ಯಂಗ್ಯ ಚಿತ್ರ

'ದಿ ಹಿಂದು'ನಲ್ಲಿ ಕೇಶವ್





ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ	ರೂ.8,51,658
ಎನ್.ಕೆ.ಉಪಾಧ್ಯಾಯರ ಮೂಲಕ	
ಬಿ.ಎ.ಪ್ರಭಾಕರ - ಬಿಜಾಪುರ	250
ಜೈಶಂಕರ	50
ಜಿ.ಬಿ.ಗುಪ್ತಾ	201
ಮೋತಿಲಾಲ್ ಸೀರಾಬಾನ್	151
ಸಹನಾ ನಾಯಕ್ - ಬೆಂಗಳೂರು	100
ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ ಮೂಲಕ	
ವೀರಾಸ್ವಾಮಿ, ಸಿಪಿಐ(ಎಂ)	
ಪ್ರಾದೇಶಿಕ ಸಮಿತಿ ಸದಸ್ಯರು	100
ಜೋಸ್, ಡಿವೈಎಫ್‌ಐ ಮುಖಂಡರು	500
ಹಿತೈಷಿಗಳಿಂದ	1500
ಎಸ್.ಶಂಕರ್, ಪವರ್ ಲೂಂ,	
ಬೆಂಗಳೂರು(ಮೊದಲ ಕಂತು)	250
ರಮೇಶ್.ವಿ., ಬಿಇಎಲ್, ಬೆಂಗಳೂರು-	1000
ಎಲ್.ಐ.ಸಿ. ಸಂಗಾತಿಗಳು, ಧಾರವಾಡ	4000
ಒಟ್ಟು	ರೂ. 859760

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ